ಸುವಾರ್ತಾ

ಸಂರಕ್ಷಣೆ

ಭಾರತೀಯ ಕ್ರಿಸ್ತನ ಸಭೆ

2005

Scanned by CamScanner

ಪುಸ್ತಕದ ಪಟ್ಟಿ

ಪಾಠ	ಪುಟ ಸಂಖ್ಯೆ
1. ದೇವರನ್ನು ಹುಡುಕುವುದು	02 - 03
2. ದೇವರು	04 - 06
3. ಯೇಸುವೇ ದೇವರು	07 - 09
4. ಯೇಸುವಿನ ಭೋಧನೆಗಳು	10 - 12
5. ವಾಕ್ಯ *	13 - 15
6. ಪಾಪ *	16 - 19
7. ಶಿಲುಬೆ *	20 - 31
8. ಪಶ್ಚಾತಾಪ *	32 - 37
9. ದೀಕ್ಷಸ್ನಾನ *	38 - 42
10. ಯೇಸುವೇ ಕರ್ತನು *	43 - 46
11. ಸಭೆ *	47 - 49
12. ಪವಿತ್ರಾತ್ಮರು *	50 - 52
13. ಮಹಾ ಆದೇಶವು *	53 - 55

Scanned by CamScanner

0 - ಇತರರ ಎದುರಿದರೆ ಕಂಡುಕೊಳ್ಳಬಹುದು

1. ದೇವರನ್ನು ಹುಡುಕುವುದು

ಉಪಯೋಗಿಸಿರುವ ವಚನಗಳು

1. ಮತ್ತಾಯನು 7:7, 13–14
2. ಲೂಕ 13:22–30
3. ಮತ್ತಾಯನು 6:25–33
4. ಇಬ್ರಿಯರಿಗೆ 11:6
5. ಮತ್ತಾಯನು 13:44–46
6. ಅಪೋಸ್ತಲರ 8:26–29

ಉದ್ದೇಶ :

ದೇವರನ್ನು ಹುಡುಕುವುದು ಪಾಠದ ಉದ್ದೇಶ ಎನ್ನೆಂದರೆ ಏನು ಮಾಡಿದರೆ ದೇವರ ಹೊಂದಿಗೆ ಸಂಬಂಧವನ್ನು ಮುಂದುವರೆಸುಬಹುದು.

ದೇವರನ್ನು ಹುಡುಕುವುದು

ಉದ್ದೇಶ :-

1. ಮತ್ತಾಯನು 7:7, 13–14

ಸತ್ಯವೇದದಲ್ಲಿರುವ ಬಹು ಮುಖ್ಯವಾದ ಒಂದು ಕಟ್ಟಳೆ ಯಾರ್ಯಾರು ಹುಡುಕುತ್ತಾರೋ ಅವರಿಗೆ ಸಿಗುವುದು! ಮತ್ತು ಸತ್ಯವೇದದಲ್ಲಿರುವ ಮುಖ್ಯವಾದ ಎಚ್ಚರಿಕೆ – ಕೇವಲ ಸ್ವಲ್ಪ ಜನರೇ ಹುಡುಕುವುದು. ಹಾಗಾದರೆ ಸ್ವಲ್ಪ ಜನರೇ ದೇವರನ್ನು ಕಂಡುಕೊಳ್ಳುವುದಾದರೆ, ಹುಡುಕುವರು ಎಷ್ಟು ಮಂದಿ?

2. ಲೂಕ 13:22–30

ಹೌದು ಕೇವಲ ಸ್ವಲ್ಪ ಜನರೇ ರಕ್ಷಿಸಲ್ಪಡುವರು. ಆದ್ದರಿಂದ ಅತನನ್ನು ಹುಡುಕಲು ಎಲ್ಲಾ ಪ್ರಯತನ ಮಾಡಬೇಕು. ಯಾರ್ಯಾರು ಸುಮ್ಮನೆ ಬರೀ 'ಪ್ರಯತ್ನ' ಮಾಡುತ್ತಾರೋ ಅವರು ದೇವರ ರಾಜ್ಯದಲ್ಲಿ ಸ್ವೀಕರಿಸಲ್ಪಡುವುದಿಲ್ಲ. ಆದರೆ ನೀವು ಹೇಗೆ ನಿಮ್ಮ ಎಲ್ಲಾ ಪ್ರಯತ್ನ ಮಾಡಲು ಸಾಧ್ಯ?

3. ಮತ್ತಾಯನು 6:25–33

ನಿಮಗೆ ದೇವರನ್ನು ಪೂರ್ಣ ಪ್ರಯತ್ನದಿಂದ ಹುಡುಕದಂತೆ ಮಾಡುವ ಕೆಲವು ದಿನನಿತ್ಯದ ಚಿಂತೆಗಳು, ಕಷ್ಟಗಳು ಯಾವುವು? ನೀವು ದೇವರ ರಾಜ್ಯಕ್ಕೆ ಹಾಗೂ ನೀತಿಗೂ ಮೊದಲ ಸ್ಥಾನ ಕೊಡುವಂತೆ ಯಾವ ಬದಲಾವಣೆಗಳನ್ನು ಮಾಡಬಹುದು?

4. ಇಬ್ರಿಯರಿಗೆ 11:6

ಯಾರ್ಯಾರು ಆತನನ್ನು ಪೂರ್ಣ ಮನಸ್ಸಿನಿಂದ ಹುಡುಕುತ್ತಾರೋ ಅವರಿಗೆ ಪ್ರತಿಫಲವನ್ನು ಕೊಡುತ್ತಾನೆ.

Scanned by CamScanner

5. ಮತ್ತಾಯನು 13:44

ಇಲ್ಲಿ ನೋಡುತ್ತೇವೆ ಒಬ್ಬ ಮನುಷ್ಯನು ತನ್ನ ಎಲ್ಲಾ ಸ್ವತ್ತನ್ನು (ಆಸ್ತಿ) ಮಾರುವುದಕ್ಕೆ ತಯಾರಿದ್ದಾನೆ.

6. ಅಪೋಸ್ತಲರ ಕೃತ್ಯಗಳು

ದೇವರನ್ನು ಹುಡುಕುವ ಒಬ್ಬ ಮನುಷ್ಯನು ದೇವರಿಗೆ ಮೊದಲ ಸ್ಥಾನ ಕೊಡುತ್ತಾನೆ. ಆತನನ್ನು ಹುಡುಕುವುದೇ ಅವನಿಗೆ ದೊಡ್ಡ ಸಂತೋಷದ ವಿಷಯ ಐಥಿಯೋಪ್ಯದ ಕಂಚುಕಿಯು ಬಿಡುವಿಲ್ಲದ ಒಬ್ಬ ಮನುಷ್ಯನಾಗಿದ್ದನು. ಆದರೂ ದೇವರನ್ನು ಹುಡುಕಲು ಬೇರೆ ಒಬ್ಬ ಮನುಷ್ಯನ ಸಹಾಯ ಕೇಳಿದನು. ದೇವರನ್ನು ಹುಡುಕಲು ಸತ್ಯವೇದವನ್ನು ಉಪಯೋಗಿಸಿದನು.

ಉಪಯೋಗವಾಗುವಂತ ವಚನಗಳು

ಅ.ಕೃ. 17:10–11	11 ಪೂರ್ವ ವೃತ್ತಾಂತ 15:1–4	ಲೂಕ 19:1–10
ಯೆರೆಮಿಯ 29:10–13	ಪ್ರಸಂಗಿ 12:1, 13–14	
ಧರ್ಮೋ ಕಾಂಡ 4:28–31	ಯೆಶಾಯ 55:6	
ಅ.ಕೃ. 17:22–27	11 ಪೂರ್ವ ವೃತ್ತಾಂತ 7:14	

Scanned by CamScanner

2. ದೇವರು (God)

ಉಪಯೋಗಿಸುವ ವಚನಗಳು

1. ಅಪೋಸ್ತಲರ 17:24–30
2. ಕೀರ್ತನೆಗಳು 135:15–17
3. ಯೆರೆಮಿಯಾ 10:5
4. ಧರ್ಮೋಪದೇಶಕಾಂಡ 5:8–9
5. 1 ಕೊರಿಂಥ 10:14
6. ಪ್ರಕಟಣೆ 21:8
7. ಯೋಹಾನನು 4:24

ಉದ್ದೇಶ:–

ಈ ಪಾಠದ ಮುಖ್ಯ ಗುರಿ ಏನೆಂದರೆ ದೇವರ ಬಗ್ಗೆ ಜನರಿಗೆ ಒಂದು ಊಹೆಯನ್ನು ಕೊಡುವುದು. (ಆತನು ಜೀವಿಸುವ ದೇವರು, ಒಂದು ವಿಗ್ರಹವಲ್ಲ).

ದೇವರ ಬಗ್ಗೆ ನಿಮ್ಮ ಅನಿಸಿಕೆ ಏನು? ಯಾವ ದೇವರನ್ನು ನೀವು ಆರಾಧಿಸುತ್ತೀರಾ? ಈ ಪ್ರಶ್ನೆಗಳು ನಿಮಗೆ ಮಾತ್ರ. (ದೇವರನ್ನು ಹುಡುಕುವವರ ನಂಬಿಕೆಗಳನ್ನು) ತಿಳಿಯಲು. ಈಗ ದೇವರು ಯಾರೆಂಬುದನ್ನು ಸತ್ಯವೇದದಿಂದ ತಿಳಿಯೋಣ.

1. ಅ.ಕೃತ್ಯ 17:24–30

ವ. 24 ಈ ವಚನದ ಪ್ರಕಾರ ದೇವರು ಯಾರು? ದೇವರು ಸೃಷ್ಟಿ ಕರ್ತ. ಸತ್ಯವೇದದ ಪ್ರಕಾರ ದೇವರು ಎಲ್ಲಿ ವಾಸಮಾಡುವುದಿಲ್ಲ? ದೇವರು ಕೈಯಿಂದ ಕಟ್ಟಲ್ಪಟ್ಟ ಕಟ್ಟಡಗಳಲ್ಲ ವಾಸಮಾಡುವುದಿಲ್ಲ. ವ. 25 ನಮ್ಮಿಂದ ದೇವರಿಗೆ ಏನಾದರೂ ಬೇಕಾಗಿದೆಯೇ? ಇಲ್ಲ ಯಾರೆ? ಏಕೆಂದರೆ ಆತನೆ ನಮಗೆ ಎಲ್ಲವನ್ನೂ (ಸಮಸ್ತವನ್ನು) ಕೊಡುವವನಾಗಿದ್ದಾನೆ. ವ. 26 ದೇವರು ನಮ್ಮನ್ನು ಉಂಟು ಮಾಡಿ ನಾವು ಇರತಕ್ಕ ಸ್ಥಳಗಳನ್ನು ಮೊದಲೇ ಗೊತ್ತುಮಾಡಿದ್ದಾನೆ. ಉದಾ: ಚೆನ್ನೈ, ಬೆಂಗಳೂರು, ಮುಂಬೈ ಇತ್ಯಾದಿ. ನೀವು ಯಾಕೆ ಈ ದಿನ ಇಲ್ಲಿದ್ದೀರಾ? ಅದು ದೇವರ ಚಿತ್ತ! ಏಕೆ? ಏಕೆಂದರೆ ನಾವೆಲ್ಲರೂ ಆತನನ್ನು ಹುಡುಕುವಂತೆ ಮಾಡಿದ್ದನೆ. ಆತನ ಕಡೆಗೆ ತಿರುಗಿಕೊಂಡು ಆತನನ್ನು ಕಂಡುಕೊಳ್ಳುವಂತೆ ಮಾಡಿದ್ದಾನೆ. ದೇವರು ನಮ್ಮ ಜೊತೆ ಸಂಬಂಧ ಇಟ್ಟುಕೊಳ್ಳಲು ಬಯಸುತ್ತಾನೆ.

ಕೆಲವರು ತಿಳಿದುಕೊಳ್ಳುವಂತೆ ಆತನು ನಮ್ಮಿಂದ ದೂರ ಇದ್ದಾನೆ – ಬೆಟ್ಟದ ಮೇಲೆ ಅಥವಾ ಯಾತ್ರಾಸ್ಥಳಗಳಲ್ಲಿ ಆತನನ್ನು ಹುಡುಕಲು ಹೋಗುವುದು? ಇಲ್ಲ! ಆತನು ನಮ್ಮಿಂದ ದೂರವಿಲ್ಲ, ಹತ್ತರವೇ ಇದ್ದಾನೆ. ನಾವು ಆತನನ್ನು ಹುಡುಕಿದರೆ ಕಂಡು ಕೊಳ್ಳುತ್ತೇವೆ. ವ. 28 ನಾವು (ಆತನ ಸಂತಾನದವರು ಅಂದರೆ ಏನು?) ಅಂದರೆ ನಾವು ಆತನ ಮಕ್ಕಳಾಗಿದ್ದೇವೆ. ನಮಗೆ ಜೀವವಿದೆಯೇ? ಹೌದು, ನಮಗೆ ಜೀವವಿದ್ದರೆ ದೇವರಿಗೆ ಹೇಗೆ? ನಾವು ಯಾರ ಮಕ್ಕಳು? ಆತನು ಜೀವಿಸುತ್ತಿದ್ದಾನಾ? ಅಥವಾ ಸತ್ತಿದ್ದಾನಾ? ಆತನು ಜೀವಿಸುವವನಾಗಿದ್ದಾನೆ. ನಮ್ಮ ದೇವರು ಜೀವಿಸುವ ದೇವರು.

Scanned by CamScanner

ವ. 29 ಇದರ ಅರ್ಥ ಏನು? ದೇವರು ಮನುಷ್ಯರ ಕಲ್ಪನೆಯಿಂದ ಕೆತ್ತಲ್ಪಟ್ಟ ಸತ್ತ ವಿಗ್ರಹವಲ್ಲ. ನಮ್ಮನ್ನು ಉಂಟುಮಾಡಿದವರು ಯಾರು? ದೇವರು, ಆದರೆ ನಾವೇ ದೇವರನ್ನು ಉಂಟುಮಾಡಲು ಸಾಧ್ಯವೇ? ಇಲ್ಲ. ನಾವು ದೇವರನ್ನು ಮಾರುಕಟ್ಟೆಯಲ್ಲಿ ಬೆಲೆಕೊಟ್ಟು ಕೊಳ್ಳಬಹುದು? ಆ ದೇವರ ವಿಗ್ರಹವು ಜೇಡಿಮಣ್ಣಿನಿಂದ ಮಾಡಿದ್ದಾದರೆ ಆ ಮಣ್ಣನ್ನು ಹತ್ತು ರೂಪಾಯಿಗೆ ಕೊಳ್ಳಬಹುದು, ಅದಕ್ಕೆ ಬಣ್ಣ ಹಚ್ಚಿದರೆ 100 ರೂ. ಅದು ಬಂಗಾರದ್ದಾಗಿದ್ದರೆ 10,000 ರೂ. ಅಥವಾ ಅದು ವಜ್ರವಾಗಿದ್ದರೆ ಕೋಟಿ ರೂಪಾಯಿಗಳು. ಆದರೆ ಆ ವಿಗ್ರಹದ ರೂಪ, ದೇವರಾಗಲು ಸಾಧ್ಯವೇ? ಇಲ್ಲವೇ ಇಲ್ಲ ಆದರೆ ಜನರು ಸೃಷ್ಟಿಕರ್ತನನ್ನು ಬಿಟ್ಟು ಸೃಷ್ಟಿಸಿರುವ ವಸ್ತುಗಳನ್ನು ಆರಾಧಿಸುತ್ತಿದ್ದಾರೆ – ಅಂತಸ್ತು, ಕಲೆಗಳು, ಸೂರ್ಯ, ಚಂದ್ರ, ಹಾವುಗಳು ಇತ್ಯಾದಿ.

ವ. 30 ನಾವು ಜೀವಿಸುವ ದೇವರ ಬಗ್ಗೆ ಸತ್ಯವನ್ನು ತಿಳಿದ ಮೇಲೆ ದೇವರು ನಮ್ಮಿಂದ ಏನನ್ನು ಅಪೇಕ್ಷಿಸುತ್ತಾರೆ? ನಾವೆಲ್ಲರೂ ಪಶ್ಚತಾಪ ಪಡಬೇಕು, ಹಾಗೆಂದರೆ ದೇವರ ಕಡೆಗೆ ತಿರುಗಿಕೊಳ್ಳುವುದು. ಅಂದರೆ ವಿಗ್ರಹಾರಾಧನೆಯನ್ನು ಬಿಟ್ಟು ಬಿಡಬೇಕು. ಇದರ ಬಗ್ಗೆ ನಿಮ್ಮ ಅನಿಸಿಕೆ ಏನು?

2. ಕೀರ್ತನೆಗಳು 135:15–17

ಅ. ವಿಗ್ರಹಗಳನ್ನು ಮನುಷ್ಯರು ಉಂಟುಮಾಡಿದ್ದಾರೆ. ಆದ್ದರಿಂದ ಇಲ್ಲಿ ಬರುವ ಪ್ರಶ್ನೆ ಏನೆಂದರೆ ಮನುಷ್ಯನು ದೇವರನ್ನು ಸೃಷ್ಟಿಸಲು (ಮಾಡಲು) ಸಾಧ್ಯವೇ ಇಲ್ಲ! ಜನರು ಸೃಷ್ಟಿಕರ್ತನನ್ನು ಬಿಟ್ಟು ಸೃಷ್ಟಿಮಾಡಿರುವ ವಸ್ತುಗಳನ್ನೇ ಆರಾಧಿಸುವವರಾಗಿದ್ದಾರೆ.

ವಿಗ್ರಹಗಳಿಗೆ ದೇಹದ ಅನೇಕ ಅಂಗಗಳಿದ್ದರೂ ಅದನ್ನು ಉಪಯೋಗಿಸಲು ಸಾಧ್ಯವಿಲ್ಲ, ಜನರ ಪ್ರಾರ್ಥನೆಗೆ ಉತ್ತರ ಕೊಡುವುದಿಲ್ಲ. ವಿಗ್ರಹಗಳಿಗಿಂತ ಮನುಷ್ಯರೇ ಎಷ್ಟೋ ಮೇಲು, ಏಕೆಂದರೆ ನಾವು ಕೇಳಿಸಿಕೊಳ್ಳಬಹುದು, ನೋಡಬಹುದು, ಅರ್ಥಮಾಡಿ ಕೊಳ್ಳಬಹುದು. ಆದರೆ ನಾವು ದೇವರಾಗಲು ಸಾಧ್ಯವಿಲ್ಲ.

ಇ. ವಿಗ್ರಹಗಳಿಗೆ ಉಸಿರಿಲ್ಲ (ಜೀವ)

3. ಯೆರೆಮಿಯಾ 10–5

ಅ) ವಿಗ್ರಹಗಳು ಹೊಲದಲ್ಲಿರುವ ಬೆದರು ಗೊಂಬೆಗಳಂತಿವೆ. ಈ ಬೆದರುಗೊಂಬೆಗಳು ಏನು ಮಾಡಲಾರವು. ಆದರೂ ಪಕ್ಷಿಗಳು ಅವುಗಳನ್ನು ನೋಡಿ ಹೆದರುತ್ತವೆ. ವಿಗ್ರಹಗಳು ನಮಗೆ ಏನೂ ಮಾಡಲಾರವೂ ಆದರೂ ಜನರು ವಿಗ್ರಹಗಳಿಗೆ ಪೂಜೆ ಮಾಡುವುದನ್ನು ನಿಲ್ಲಿಸಲು ಹೆದರುತ್ತಾರೆ. ಏಕೆಂದರೆ ಅವರಲ್ಲಿ ಆಳವಾಗಿ ಬೇರೂರಿರುವ ಮೂಢನಂಬಿಕೆಗಳಿಗೆ ವಿಗ್ರಹಗಳಿಗೆ ಶಕ್ತಿಯಿಲ್ಲ ಅವುಗಳಿಗೆ ಹೆದರಬೇಡಿರಿ.

ಆ) ಈ ವಿಗ್ರಹಗಳಿಗೆ ಭಯಪಡಬೇಡಿರಿ. ಅವು ನಿಮಗೆ ಕೇಡು ಮಾಡಲಾರವು. ವಿಗ್ರಹಗಳ ಮೇಲಿರುವ ಎಲ್ಲಾ ಮೂಢನಂಭಿಕೆಗಳನ್ನು ಕಿತ್ತು ಬಿಸಾಡಿರಿ.

Scanned by CamScanner

ನಿಮ್ಮಲ್ಲಿರುವ ಕೆಲವು ಮೂಡನಂಬಿಕೆಗಳು ಯಾವುವು? ಸತ್ಯವೇದದಲ್ಲಿರುವ ದಶಾಜ್ಞೆಗಳಲ್ಲಿ ಒಂದನ್ನು ನೋಡೋಣ.

4. ಧರ್ಮೋ, ಕಾಂಡ 5:8–9

ನಾವು ಯಾವ ವಿಗ್ರಹಗಳನ್ನು ಯಾವುದೇ ರೂಪದಲ್ಲೂ ಮಾಡಬಾರದು ಎಂದು ದೇವರು ಆಜ್ಞೆ ಮಾಡಿದ್ದಾರೆ ಅದೇ ರೀತಿ ಯಾವ ವಿಗ್ರಹಗಳಿಗೆ ಅಡ್ಡ ಬೀಳಲೂಬಾರದೂ. ನಾವು ದೇವರಿಗೆ ಅವಿಧೇಯರಾಗಿ ನಡೆಯಲು ಸಾಧ್ಯವೇ? ಇಲ್ಲಿ, ಆದ್ದರಿಂದ ನಾವು ವಿಗ್ರಹಗಳನ್ನು, ಜನರನ್ನು, ಸೃಷ್ಟಿಯನ್ನು ಇತ್ಯಾದಿ ಆರಾಧಿಸಬಾರದು. ಸೃಷ್ಟಿಕರ್ತನನ್ನೆ, ಆರಾಧಿಸಬೇಕು. ಹೊಸ ಒಡಂಬಡಿಕೆಯಲ್ಲೂ ಸಹ ಕೆಲವು ವಚನಗಳು, ವಿಗ್ರಹಾರಾಧನೆ ಬಗ್ಗೆ ನಮಗೆ ಸ್ಪಷ್ಟವಾಗಿ ತಿಳಿಸುತ್ತವೆ.

5. 1 ಕೊರಿಂಥ 10:14

ನಾವು ವಿಗ್ರಹಾರಾಧನೆಯಿಂದ ದೂರ ಓಡಬೇಕು. (ದೂರವಿರಬೇಕು) ನೀವು ಇದಕ್ಕೆ ತಯಾರಾಗಿದ್ದೀರಾ? ಒಂದು ಕ್ರೂರ ಪ್ರಾಣಿಯನ್ನು ನೋಡಿದಾಗ ನೀವು ಏನು ಮಾಡುತ್ತೀರಾ? ಓಡುತ್ತೀರಾ, ದೂರವಾಗುತ್ತೀರಾ, ಮತ್ತೆ ಇಲ್ಲಿಗೆ ಹೋಗುವುದಿಲ್ಲ.

6. ಪ್ರಕಟಣೆ 21:8

ಇಲ್ಲಿ ವಚನ ಸ್ಪಷ್ಟವಾಗಿ ನಮಗೆ ತಿಳಿಸುತ್ತದೆ. ಏನೆಂದರೆ ವಿಗ್ರಹಾರಾಧಕರು, ಕೊಲೆಗಾರರೂ ಮತ್ತು ವ್ಯಭಿಚಾರಿಗಳ ಜೊತೆಯಲ್ಲಿ ಸೇರುತ್ತಾರೆ. ಇವರಿಗೆ ಕಡೆಯಲ್ಲಿ ಸಿಕ್ಕುವುದು (ಹೋಗುವುದು) ನರಕ.

7. ಯೋಹಾನ 4:24

ದೇವರು ಆತ್ಮ ಸ್ವರೂಪಿ ಎಂದು ಯೇಸುವು ಇಲ್ಲಿ ತಿಳಿಸಿದ್ದಾರೆ. ಅದರ ಅರ್ಥ ದೇವರಿಗೆ ಯಾವ ರೂಪವೂ ಇಲ್ಲ. ಆದ್ದರಿಂದ ದೇವರನ್ನು ಯಾವ ರೂಪದಲ್ಲಿಯಾಗಲಿ ನಾವು ಆರಾಧಿಸಬಾರದು.

ಕಡೆಯದಾಗಿ : ಈ ದಿನ ನೀವು ಏನು ಕಲಿತಿರಿ? ಈ ಪಾಠದ ಬಗ್ಗೆ ನಿಮ್ಮ ಅನಿಸಿಕೆ ಏನು? ದೇವರ ಬಗ್ಗೆ ಸತ್ಯವನ್ನು ತಿಳಿದು ಕೊಳ್ಳಲು ಈ ಪಾಠ ಸಹಾಯವಾಯಿತೇ? ನಿಮಗೆ ಇನ್ನೂ ಹೆಚ್ಚಾಗಿ ತಿಳಿದುಕೊಳ್ಳಲು ಆಸಕ್ತಿ ಇದೆಯಾ? ದೇವರನ್ನು ಮೆಚ್ಚಿಸಬೇಕಾದರೆ ನೀವು ವಿಗ್ರಹಾರಾಧನೆಯನ್ನು ಸಂಪೂರ್ಣವಾಗಿ ಬಿಡಬೇಕು. ಇದನ್ನು ಮಾಡಲು ತಯಾರಿದ್ದೀರಾ?

Scanned by CamScanner

3. ಯೇಸುವೇ ದೇರು

ಉಪಯೋಗಿಸಿರುವ ವಚನಗಳು

1. ಕೊಲೊಸ್ಸೆ 2:9
2. ಮಾರ್ಕ 4:35–41
3. ಮಾರ್ಕ 1:40–42
4. ಲೂಕ 7:36–39, 48–50
5. 1 ಯೋಹಾನ 3:5
6. ಧರ್ಮೋ ಕಾಂಡ 5:7
7. ಅ. ಕೃ. 4:12
8. ಯೋಹಾನ 14:6

ಕ್ರೈಸ್ತರಲ್ಲದ ಜನರಿಗೆ ಮಾಡುವ ಎರಡನೆಯ ಪಾಠ. ಈಗ ಕೆಲವು ಪ್ರಶ್ನೆಗಳು. ನೀವು ಯೇಸುವಿನ ಬಗ್ಗೆ ಕೇಳಿದ್ದೀರಾ? ಯೇಸುವಿನ ಕುರಿತು ಏನು ತಿಳಿದಿದೆ?

ನಾನು ಈಗ ನಿಮಗೆ ತಿಳಿಸುವ ಕೆಲವು ವಚನಗಳು ಯೇಸುವಿನ ಕುರಿತು ತಿಳಿದುಕೊಳ್ಳಲು ನಿಮಗೆ ಸಹಾಯವಾಗುತ್ತದೆ.

1. ಕೊಲೊಸ್ಸೆ 2:9

ಯೇಸುವು ದೇವರಾಗಿದ್ದರೂ, ನರ ಅವತಾರವೆತ್ತಿ ಈ ಲೋಕಕ್ಕೆ ಬಂದಿದ್ದಾನೆ. ದೇವರಲ್ಲಿ ನೀವು ಏನೇನು ಕಾಣುತ್ತೀರೋ ಅದನ್ನು ಅದನ್ನು ಯೇಸುವಿನಲ್ಲಿ ಕಾಣಬಹುದು. ಹಾಗಾದರೆ ಯೇಸುವು ದೇವರಾಗಿದ್ದಾನೆ. ದೇವರಲ್ಲಿರುವ ಎಲ್ಲಾಗುಣಗಳು ಯೇಸುವಿನಲ್ಲಿರಬೇಕು. ಇದನ್ನು ಮುಂದಿನ 3 ವಚನಗಳಲ್ಲಿ ಕಾಣಬಹುದು.

2. ಮೂರ್ಕ 4:35–41

ಯೇಸುವಿಗೆ ಬಿರುಗಾಳಿಯನ್ನು ಹಾಗೂ ಅಲೆಗಳನ್ನು ಹತೋಟಿಯಲ್ಲಿಡುವಂತ ಶಕ್ತಿಯಿದೆ. ಸೃಷ್ಟಿಯನ್ನು ಹತೋಟಿಯಲ್ಲಿಡುವಂತ ಶಕ್ತಿಯಾರಿಗಿದೆ? ದೇವರಿಗೆ ಮಾತ್ರ ಹಾಗಾದರೆ ಯೇಸುವು ಕೂಡ ದೇವರಾಗಿದ್ದಾನೆ. ಆತನಿಗೆ ಎಲ್ಲಾ ಶಕ್ತಿಯಿದೆ.

3. ಮೂರ್ಕ 1:40–42

ಯೇಸುವಿಗೆ ಎಲ್ಲಾ ತರಹದ ರೋಗಗಳನ್ನು ವಾಸಿಮಾಡುವಂತಹ ಶಕ್ತಿಯಿದೆ. ಯಾವುದೇ ವ್ಯಕ್ತಿಯನ್ನು ಗುಣಮಾಡುವಂತ ಶಕ್ತಿಯಿದೆ. ದೇವರ ಹಾಗೆ ಯೇಸುವು ಕರುಣೆಯುಳ್ಳವನಾಗಿದ್ದಾನೆ. ಎಲ್ಲರನ್ನೂ ಆತನು ಪ್ರೀತಿಸಿದನು. ಕುಷ್ಠರೋಗಿಯನ್ನು ಮುಟ್ಟಿದನು. ಬಡವರ ಮೇಲೆ ಕರುಣೆ ತೋರಿಸಿದನು.

4. ಲೂಕ 7:36–39, 48–50

ಇಲ್ಲಿ ನೋಡುವಂತ ಹೆಂಗಸು ಬಹಳ ಪಾಪಿಯಾಗಿದ್ದಳು ಏಕೆಂದರೆ ಅವಳ ಪಾಪದ ಬಗ್ಗೆ ಊರಿನ ಜನರಿಗೆಲ್ಲಾ ತಿಳಿದಿತ್ತು. ಆದರೂ ಯೇಸುವು ಅವಳ ಮೇಲೆ ಪ್ರೀತಿಯನ್ನಿಟ್ಟು

Scanned by CamScanner

ಕರುಣೆ ತೋರಿಸಿದರು. ಯೇಸುವು ಪಾಪಿಗಳನ್ನು ಪ್ರೀತಿಸುತ್ತಾನೆ. ನಮ್ಮ ಪಾಪಗಳನ್ನು ಕ್ಷಮಿಸಲು ಯಾರಿಂದ ಸಾಧ್ಯ? ದೇವರು ಮಾತ್ರವೇ ಯೇಸುವು ಈ ಹೆಂಗಸಿನ ಪಾಪಗಳನ್ನು ಕ್ಷಮಿಸಿದರು. ಯೇಸುವು ಯಾರು? ಯೇಸು ದೇವರಾಗಿದ್ದಾರೆ. ಈ ಹೆಂಗಸಿನ ಪಾಪಗಳನ್ನು ಕ್ಷಮಿಸಿದರು, ನಿಮ್ಮ ಎಲ್ಲಾ ಪಾಪಗಳನ್ನು ಸಹ ಆತನು ಕ್ಷಮಿಸಬಲ್ಲನು.

5. 1 ಯೋಹಾನ 3:5

ಯೇಸುವು ನಮ್ಮ ಪಾಪಗಳನ್ನು ತೆಗೆದುಹಾಕಲು ಈ ಲೋಕಕ್ಕೆ ಬಂದನು. ನಿಮ್ಮ ಮತ್ತು ನಮ್ಮ ಪಾಪ ಯೇಸುವು ಅವರ ಜೀವನದಲ್ಲಿ ಯಾವುದಾದರೂ ಪಾಪವನ್ನು ಮಾಡಿದ್ದಾರಾ? ಇಲ್ಲವೇ ಇಲ್ಲ ಹಾಗಾದರೆ ಪಾಪವೇ ಇಲ್ಲದವರು ಯಾರಲ್ಲಿ ಪಾಪವಿಲ್ಲವೋ ಅವರು ಮಾತ್ರ ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸಲು ಸಾಧ್ಯ ಯಾರಲ್ಲಿಯಾದರೂ ಒಂದು ಪಾಪವಾದರೂ ಇದ್ದಲ್ಲಿ ಅವರು ದೇವರಾಗಲು ಸಾಧ್ಯವಿಲ್ಲ.

ಹಾಗಾದರೆ ಬೇರೆ ದೇವರುಗಳ ಬಗ್ಗೆ ಏನು? ಅವರೆಲ್ಲರೂ ಪಾಪವಿಲ್ಲದೆ ಇದ್ದಾರೊ? ಅವರು ಪರಿಶುದ್ಧವಾಗಿದ್ದಾರೋ? ಅವರು ಪರಿಶುದ್ಧವಾಗಿಲ್ಲದೆ ಇದ್ದರೆ ದೇವರಾಗಲು ಸಾಧ್ಯವೇ? ಬೇರೆ ದೇವರುಗಳ ಬಗ್ಗೆ ವಿವರಿಸಿರಿ. ಅವರು ಕೆಲವು ಒಳ್ಳೆಯ ಕಾರ್ಯಗಳನ್ನು ಮಾಡಿರಬಹುದು. ದೇವರಾಗಲು ಅವು ಸಾಕಾಗುವುದಿಲ್ಲ ಅವರು ಪರಿಶುದ್ಧವಾಗಿಲ್ಲದೆ ಇದ್ದಾಗ ಅವರನ್ನು ದೇವರೆಂದು ಕರೆಯಲು ಸಾಧ್ಯವಿಲ್ಲ.

6. ಧರ್ಮೋ ಕಾಂಡ 5:7

ಒಬ್ಬನೇ ದೇವರನ್ನು ಅರಾಧಿಸಬೇಕು ಬೇರೆ ಯಾವ ದೇವರನ್ನು ಆರಾಧಿಸಬಾರದೆಂದು ದೇವರು ನಮಗೆ ಆಜ್ಞೆ ಮಾಡಿದ್ದಾರೆ. ಏಕೆಂದರೆ ಸತ್ಯವೇದದ ಪ್ರಕಾರ ದೇವರು ಒಬ್ಬನೇ ಅನೇಕ ದೇವರುಗಳಿಲ್ಲ.

7. ಅ. ಕೃತ್ಯ 4:12

ಯೇಸುವಿನ ಹೆಸರಿನ ಮೂಲಕ ಮಾತ್ರವೇ ಇಡೀ ಲೋಕ ರಕ್ಷಣೆಯಾಗಲು ಸಾಧ್ಯ. ಬೇರೆ ಹೆಸರಿನ ಮೂಲಕವಲ್ಲ, ಯೇಸುವಿನ ಹೆಸರಿನಿಂದ ಮಾತ್ರವೇ ನೀವು ರಕ್ಷಣೆ ಹೊಂದಿ ಪರಲೋಕಕ್ಕೆ ಹೋಗಲು ಸಾಧ್ಯ.

8. ಯೋಹಾನ 14:6

ಇಲ್ಲಿ ಯೇಸುವು ಹೇಳುತ್ತಿದ್ದಾರೆ ಆತನೇ ಮಾರ್ಗ, ಒಂದೇ ಒಂದು ಮಾರ್ಗ ಅಂದರೆ ಪರಲೋಕಕ್ಕೆ ಹೋಗಲು ಬೇರೆ ಯಾವ ಮಾರ್ಗವೂ ಇಲ್ಲ. ನೀವು ಪ್ರಯತ್ನ ಮಾಡಬಹುದು. ಆದರೆ ಬೇರೆ ಮಾರ್ಗವಿಲ್ಲ. ಯೇಸುವೇ ಸತ್ಯ ಸಂಪೂರ್ಣ ಸತ್ಯ, ಎಲ್ಲಾ ಧರ್ಮಗಳು ಕೆಲವು ಸತ್ಯಗಳನ್ನೊಳಗೊಂಡಿರಬಹುದು, ಆದರೆ ಯೇಸುವಿನಲ್ಲಿ ಮಾತ್ರ ಪೂರ್ಣ ಸತ್ಯ ನಿಮಗೆ ಸಿಗುತ್ತದೆ. ಯೇಸುವೇ ಜೀವವೋ ಯೇಸುವಿನಿಂದ ಮಾತ್ರ ನಮಗೆ ನಿತ್ಯಜೀವ ಸಿಗಲು ಸಾಧ್ಯ.

Scanned by CamScanner

ಕಡೆಯದಾಗಿ– ಈ ದಿನ ನೀವು ಯೇಸುವಿನ ಬಗ್ಗೆ ಏನನ್ನು ಕಲಿತೀರಿ? ಯೇಸು ಯಾರೂ/ ಬೇರೆ ದೇವರ ಬಗ್ಗೆ ಏನು? ಯೇಸುವನ್ನು ಹಿಂಬಾಲಿಸಲು ಇಚ್ಛಿಸುತ್ತೀರಾ? ಹೌದಾದರೆ, ನೀವು ಅವರನ್ನು ಮಾತ್ರವೇ ಹಿಂಬಾಲಿಸಬೇಕು. ಒಂದೇ ಸಮಯದಲ್ಲಿ ಬೇರೆ ದೇವರನ್ನು ಮತ್ತು ಯೇಸುವನ್ನೂ ಆರಾಧಿಸಲು ಸಾಧ್ಯವಿಲ್ಲ. ಯೇಸುವಿನ ಹಿಂಬಾಲಕರನ್ನು ಏನೆಂದು ಕರೆಯುತ್ತಾರೆ? ಕ್ರೈಸ್ತರು, ನೀವು ಯೇಸುವನ್ನು ಹಿಂಬಾಲಿಸುವುದಾದರೆ ನಿಮ್ಮನ್ನು ಏನೆಂದು ಕರೆಯುವರು? ಕ್ರೈಸ್ತರು ನೀವು ಈ ರೀತಿ ಕರೆಸಿಕೊಳ್ಳಲು ಬಯಸುತ್ತೀರಾ?

Scanned by CamScanner

4. ಯೇಸುವಿನ ಭೋಧನೆಗಳು

ಉಪಯೋಗಿಸಿರುವ ವಚನಗಳು

1. ಯೋಹಾನ 3:1–5
2. ಯೋಹಾನ 3:16–18
3. ಯೋಹಾನ 5:5–6
4. ಯೋಹಾನ 6:35
5. ಯೋಹಾನ 8:12
6. ಯೋಹಾನ 8:46
7. ಯೋಹಾನ 11:25
8. ಯೋಹಾನ 12:48
9. ಯೋಹಾನ 20:29
10. ಯೋಹಾನ 14:6

ಈ ಪಾಠವು ಪೂರ್ನವಾಗಿ ಯೋಹಾನನು ಬರೆದ ಸುವಾರ್ತೆಯಿಂದ ಬರೆದಿದೆ. ಯೇಸುಕ್ರಿಸ್ತನ ಭೋಧನೆಗಳ ಕುರಿತು ಆಳವಾದ ಒಂದು ನಿರ್ಧಾರವನ್ನು ತೆಗೆದುಕೊಳ್ಳಲು ಈ ಪಾಠವು ಉಪಯೋಗವಾಗಿದೆ.

1. ಯೋಹಾನ 3:1–5

ಇಲ್ಲಿ ನಾವು ಯೇಸುವು ಕೆಲವು ಗುರುಗಳಿಗೂ ಭೋಧನೆ ಮಾಡುವುದನ್ನು ನೋಡುತ್ತೇವೆ. ದೇವರ ರಾಜ್ಯವನ್ನು ಪ್ರವೇಶಿಸಲು ನಾವು ಹೊಸದಾಗಿ ಹುಟ್ಟಬೇಕು ಎಂದು ಯೇಸು ಹೇಳಿದ್ದಾರೆ. ಅಂದರೆ ನೀವು ನಿಮ್ಮ ಜೀವನವನ್ನು ಮತ್ತೊಮ್ಮೆ ಹೊಸದಾಗಿ ಪ್ರಾರಂಭಿಸಬೇಕು. ನಿಮಗೆ ಹೊಸದಾಗಿ ಹುಟ್ಟಲು ಇಷ್ಟವಿದೆಯಾ? ಹಾಗಾದರೆ, ನಿಮ್ಮ ಜೀವನವನ್ನು ಹೊಸದಾಗಿ ಪ್ರಾರಂಭಿಸಲು ಯೇಸುವು ನಿಮಗೆ ಒಂದು ಅವಕಾಶವನ್ನು ಕೊಡುತ್ತಾರೆ!

2. ಯೋಹಾನ 3:16–18

ದೇವರು ಇಡೀ ಲೋಕವನ್ನೇ ಪ್ರೀತಿಸಿದರು ಕ್ರೈಸ್ತರನ್ನು ಮಾತ್ರವಲ್ಲ ಎಲ್ಲಾ ಜನರಿಗೋಸ್ಕರ ಯೇಸು ಈ ಲೋಕಕ್ಕೆ ಬಂದನು. ಯೇಸು ಒಬ್ಬ ಕ್ರೈಸ್ತ ದೇವರೆಂದು ಅನೇಕರು ನಂಬುತ್ತಾರೆ. ಆದರೆ ಸತ್ಯವೇದ ಹೇಳುತ್ತದೆ. ಈ ಲೋಕದಲ್ಲಿರುವ ಎಲ್ಲರಿಗೋಸ್ಕರ ಯೇಸು ಬಂದನು. ದೇವರು ಯಾರನ್ನು ನಾಶಪಡಿಸಲು ಇಷ್ಟಪಡುವುದಿಲ್ಲ. ಆದರೆ ಎಲ್ಲಾ ಧರ್ಮ, ಮತ, ಜಾತಿಯ ಜನರೆಲ್ಲರೂ ರಕ್ಷಣೆಹೊಂದಬೇಕೆಂಬುದೇ ಆತನ ಚಿತ್ತ. ಆದರೆ ಯೇಸು ಕ್ರಿಸ್ತನನ್ನು ನಂಬಿದರೆ ಮಾತ್ರವೇ ಎಲ್ಲರೂ ರಕ್ಷಿಸಲ್ಪಡಲು ಸಾಧ್ಯ.

3. ಯೋಹಾನ 5:5–6

ಈ ಮನುಷ್ಯನು 38 ವರ್ಷಗಳಿಂದ ಕಾಯಿಲೆಯಿಂದ ನರಳುತ್ತಿದ್ದಾನೆ. ನಾವೂ ಸಹ ಈ ಮನುಷ್ಯನ ಹಾಗೆ ಆತ್ಮೀಕರೀತಿಯಲ್ಲಿ ಅನೇಕ ಪಾಪಗಳಿಂದ ನರಳುತ್ತಿದ್ದೇವೆ. ಈ ದಿನ ಯೇಸುವು ನಿಮ್ಮ ಬಳಿಗೆ ಬಂದು ನಿಮ್ಮನ್ನು ನೋಡಿ ನಿಮಗೆ ಗುಣವಾಗಲು ಇಷ್ಟವೇ? ನೀವು ಬದಲಾವಣೆಯಾಗಲು ಇಚ್ಛಿಸುತ್ತೀರಾ? ಎಂದು ಕೇಳಿದರೆ ನಿಮ್ಮ ಉತ್ತರ ಏನು? ಇದೇ ನಿಮ್ಮ ಜೀವನದಲ್ಲಿ ಸಿಗುವ ಒಂದೇ ಅವಕಾಶವಿರಬಹುದು ಈ ಒಂದು ಅವಕಾಶವನ್ನು ಕಳೆದುಕೊಳ್ಳಬೇಡಿ.

Scanned by CamScanner

5. ಯೋಹಾನ 6:35

ಯಾರ್ಯಾರು ಯೇಸುವಿನ ಬಳಿಗೆ ಬರುತ್ತಾರೋ. ಆತನು ಅವರನ್ನು ಪೋಷಿಸುವವನಾಗಿದ್ದಾನೆ. ಇಲ್ಲಿ ಯೇಸು ಆತ್ಮೀಕ ರೀತಿಯಲ್ಲಿ ಪೋಷಣೆ ಕೊಡುವವನಾಗಿದ್ದಾನೆ.

6. ಯೋಹಾನ 8:12

ಯೇಸುವು ಬೆಳಕಾಗಿದ್ದಾನೆ ನೀವು ಯೇಸುವನ್ನು ಹಿಂಬಾಲಿಸಿದರೆ ಕತ್ತಲೆಯೊಳಗಿಂದ ಸಂಪೂರ್ಣವಾಗಿ ಹೊರಗೆ ಬರಬೇಕು. ಈ ದಿನ ನೀವು ಕತ್ತಲೆಯಲ್ಲಿದ್ದೀರಾ? ಅಥವಾ ಬೆಳಕಿನಲ್ಲಿದ್ದೀರಾ? ಒಂದು ವೇಳೆ ನೀವು ಕತ್ತಲೆಯಲ್ಲಿದ್ದರೆ ಯೇಸುವು ನಿಮ್ಮನ್ನು ಬೆಳಕಿಗೆ ತರುವವನಾಗಿದ್ದಾನೆ.

7. ಯೋಹಾನ 3:86 8:46

ಯೇಸುವು ಪಾಪವಿಲ್ಲದವನಾಗಿದ್ದಾನೆ. ಆತನು ಎಲ್ಲರಿಗೂ ಒಂದು ಸವಾಲನ್ನು ಕೇಳಿದ್ದಾನೆ, ಏನೆಂದರೆ ನನ್ನಲ್ಲಿ ಪಾಪವನ್ನು ತೋರಿಸಿಕೊಡುವವರು ಯಾರಿದ್ದಾರೆ?

8. ಯೋಹಾನ 11:25

ಯೇಸುವೇ ಪುನರುತ್ಥಾನವಾಗಿದ್ದಾನೆ. ಆತನು ನಮಗೆ ನಿತ್ಯಜೀವವನ್ನು ಕೊಡುವುದಾಗಿ ವಾಗ್ದಾನ ಮಡಿದ್ದಾನೆ. ಇಲ್ಲಿ ಯೇಸುವು ಪುನರ್ಜನ್ಮದ ಕುರಿತಾಗಿ ಹೇಳುತ್ತಿಲ್ಲ. ಏಕೆಂದರೆ ನಾವು ಸತ್ತಮೇಲೆ ಒಂದೇ ನ್ಯಾಯತೀರ್ಪಿಗಾಗಿ ಕಾಯುತ್ತಿರುತ್ತೇವೆ. ಮತ್ತು ಪುನರ್ಜನ್ಮವಿಲ್ಲ (ಇಬ್ರಿ 9:27) ಇಲ್ಲಿ ಯೇಸುವು ಪುನರುತ್ಥಾನದ ಭರವಸೆಯನ್ನು ಕೊಟ್ಟಿದ್ದಾನೆ. ಏಕೆಂದರೆ ಆತನು ಸ್ವತ: ಸತ್ತು ಮತ್ತೆ ಎದ್ದು ಬಂದಿದ್ದಾನೆ. ಯೇಸು ತನ್ನನ್ನು ಹಿಂಬಾಲಿಸುವವರಿಗೆಲ್ಲಾ ನಿತ್ಯಜೀವನವನ್ನು ವಾಗ್ದಾನ ಮಾಡಿದ್ದಾನೆ.

9. ಯೋಹಾನ 12:48

ಯೇಸುಕ್ರಿಸ್ತನು ಮಾತನಾಡಿರುವ ಪ್ರತಿಯೊಂದು ವಾಕ್ಯಗಳೇ ನಮ್ಮನ್ನು ಕಡೆಯದಿನದಲ್ಲಿ ನ್ಯಾಯತೀರ್ಪು ಮಾಡುವಂತದ್ದಾಗಿದೆ. ಆದ್ದರಿಂದ ನಾವು ಸತ್ಯವೇದವನ್ನು ಓದುವುದು ಹಾಗೂ ಕಲಿಯುವುದು ಮಾತ್ರವೇ ಅಲ್ಲದೆ ಅದರ ಪ್ರಕಾರ ನಡೆದುಕೊಳ್ಳವವರಾಗಿರಬೇಕು.

10. ಯೋಹಾನ 20:29

ಯಾರೂ ಯೇಸುವನ್ನು ನೋಡಿಲ್ಲ. ಆದರೆ ಆತನಲ್ಲಿ ನಂಬಿಕೆಯಿಟ್ಟು ನಾವು ಆಶೀರ್ವದಿಸಲ್ಪಡುತ್ತೇವೆ. ಆದ್ದರಿಂದ ನಿಮ್ಮ ನಂಬಿಕೆ ಮತ್ತು ವಿಶ್ವಾಸವನ್ನು ಆತನ ಮೇಲೆ ಹಾಕಿರಿ.

Scanned by CamScanner

11. ಯೋಹಾನ 14:6

ಯೇಸು ಹೇಳುತ್ತಾನೆ ಆತನೆ 'ಮಾರ್ಗ' ಒಂದೇ 'ಮಾರ್ಗ' ಅಂದರೆ ಸ್ವರ್ಗಕ್ಕೆ ಹೋಗಲು ಬೇರೆ ಯಾವ ಮಾರ್ಗವೂ ಇಲ್ಲ. ನೀವು ಪ್ರಯತ್ನ ಮಾಡಬಹುದು. ಆದರೆ ಬೇರೆ ಮಾರ್ಗವಿಲ್ಲ. ಯೇಸುವೇ 'ಸತ್ಯ' ಎಲ್ಲಾ ಧರ್ಮಗಳು ಕೆಲವು ಸತ್ಯಗಳನ್ನೊಳಗೊಂಡಿದೆ, ಆದರೆ ಯೇಸುವಿನಲ್ಲಿಯೇ ನೀವು ಪೂರ್ಣ ಸತ್ಯವನ್ನು ಕಾಣಬಹುದು. ಯೇಸುವೇ 'ಜೀವವು' ಯೇಸುವಿನ ಮೂಲಕವೇ ನಮಗೆ ನಿತ್ಯ ಜೀವ ಸಿಗುವುದು.

ಕಡೆಯದಾಗಿ :

ಯೇಸುವೇ ಮಾರ್ಗವಾಗಿದ್ದಾನೆ, ಯೇಸುವಿನ ರೀತಿ ಬೇರೆ ಯಾರೂ ಇಲ್ಲ. ಯೇಸು ಕ್ರಿಸ್ತನ ಮಾರ್ಗ ಎಂದು ನೀವು ನಂಬುತ್ತೀರಾ? ನೀವು ಆತನನ್ನು ಹಿಂಬಾಲಿಸಲು ಇಚ್ಛಿಸುತ್ತೀರಾ?

Scanned by CamScanner

5. ವಾಕ್ಯ (The word)

ಉಪಯೋಗಿಸಿರುವ ವಾಕ್ಯಗಳು

1. 2 ತಿಮೊಥಿ 3:16–17
2. ಇಬ್ರಿಯರಿಗೆ 4:12–13
3. ಯೋಹಾನ 8:31–32
4. ಮತ್ತಾಯನು 15:1–9
5. 1 ತಿಮೊಥಿ 4:16
6. ಅ.ಕೃ. 17:10–12
7. ಮತ್ತಾಯ 4:4

ಉದ್ದೇಶ :

ಸಾರಿದ ವಾರ್ತೆಯ ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ (ರೋಮ 10:17) ಆದ್ದರಿಂದ ಈ ದೇವರ ವಾಕ್ಯವನ್ನು ಕಲಿಯುವ ಗುರಿ ಏಕೆಂದರೆ ದೇವರನ್ನು ಹುಡುಕುವವರಿಗೆ ಯೇಸುವಿನ ಮೇಲೆ ನಂಬಿಕೆಯನ್ನು ಹೆಚ್ಚಿಸುವುದು. ಒಬ್ಬನು ಸತ್ಯವೇದವನ್ನು ನಿಜವೆಂದು ಒಪ್ಪಿಕೊಳ್ಳಬೇಕಾಗಿದೆ (ಅನಿಸಿಕೆಗಳು, ಅನುಭವಗಳು, ಸಂಗಡಿಗರ ಅನಿಸಿಕೆ, ಅಥವಾ ಕುಟುಂಬದಲ್ಲಿರುವ ಕಟ್ಟಳೆಗಳು) ಇದೆಲ್ಲಾ ಇದ್ದರೂ ಜೀವನ ನಡೆಸಬೇಕಾದರೆ ಯೇಸುವಿನಲ್ಲಿ ಸಿಗುವ ನಿಜವಾದ ರಕ್ಷಣೆಯನ್ನು ತಿಳಿದುಕೊಂಡಿರಬೇಕು.

1. 2 ತಿಮೋಥಿ 3:16–17

ಅ) ಸತ್ಯವೇದದಲ್ಲಿರುವ ಪ್ರತಿಯೊಂದು ವಾಕ್ಯವೂ ದೈವ ಪ್ರೇರಿತವಾಗಿದೆ.

ಆ) ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ.

2. ಇಬ್ರಿಯರಿಗೆ 4:12–13

ಅ) ವಾಕ್ಯವೂ ಹೊಂದಾಣಿಕೆಯಾಗಿದೆ (ಜೀವವಾದದ್ದು ಮತ್ತು ಕಾರ್ಯಸಾಧಕವಾಗಿದೆ]

ಆ) ವಾಕ್ಯವು ಚುಚ್ಚುತ್ತದೆ (ನೋವಾಗುತ್ತದೆ) ಇದನ್ನು ವೈದ್ಯರು ಉಪಯೋಗಿಸುವಂತೆ ಉಪಕರಣಕ್ಕೆ ಹೋಲಿಸಿದ್ದಾರೆ.

ಇ) ಚುಚ್ಚಿದಾಗ (ಕಡಿದಾಗ) ನಮಗೆ ಒಳ್ಳೆಯದಾಗುತ್ತದೆ. ಏಕೆಂದರೆ ನಮ್ಮಲ್ಲಿರುವ ಪಾಪವನ್ನು ಅದು ಕಡಿದು ಹಾಕುತ್ತದೆ.

ಎಲುಬುಗಳ ಒಳಗೆ ತೂರುವಂತೆಯು.

3. ಯೋಹಾನ 8:31–32

ಅ) ಬರೀ ನಂಬಿಕೆ ಸಾಲುವುದಿಲ್ಲ ಹಾಗೂ ನಮ್ಮ ಅನಿಸಿಕೆಗಳ ಜೊತೆಯಲ್ಲಿ ಹೋಗಲು ಸಾಧ್ಯವಿಲ್ಲ.

ಆ) ಶಿಷ್ಯರಾಗುವುದಕ್ಕೆ (ಕ್ರೈಸ್ತ) ನಾವೆಲ್ಲರೂ ದೇವರ ವಾಕ್ಯವನ್ನು ಭದ್ರವಾಗಿ ಹಿಡಿದುಕೊಂಡು ಅದರ ಪ್ರಕಾರ ನಡೆಯುವವರಾಗಿರಬೇಕು.

Scanned by CamScanner

4. ಮತ್ತಾಯನು 15:1–9

ಅ) ಯಾವ ಸಂಪ್ರಾದಾಯವನ್ನಾದರೂ ಅರಾಧಿಸಿದರೂ ದೇವರ ವಾಕ್ಯಕ್ಕೆ ಮೀರಿದಾಗ ಆ. ಆರಾಧನೆ ಉಪಯೋಗವಿಲ್ಲದಂತಾಗುವುದು.

ಆ) ಯೇಸು ನಮಗೆ ಎಚ್ಚರಿಸುತ್ತಿದ್ದಾರೆ ಸಂಪ್ರದಾಯದ ನಿಮಿತ್ತವಾಗಿ ನಾವು ದೇವರ ವಾಕ್ಯವನ್ನು ನಿರರ್ಥಕ ಮಾಡಬಾರದು.

5. 1 ತಿಮೋಥಿ 4:16

ಅ) ನಿನ್ನ ವಿಷಯದಲ್ಲಿಯು ನಿನ್ನ ಉಪದೇಶದ ವಿಷಯದಲ್ಲಿಯೂ ಎಚ್ಚರಿಕೆಯಾಗಿರು– ಇವೆರಡನ್ನು ಬೇರ್ಪಡಿಸಲು ಸಾಧ್ಯವಿಲ್ಲ.

ಆ) ಯಾವುದು ಬಹಳ ಮುಖ್ಯವಾಗಿದೆ ನಿನ್ನ ಜೀವನವೂ ಅಥವಾ ಸತ್ಯವೇದವೋ? ವಿಮಾನದ ರೀತಿ ಯಾವ ರೆಕ್ಕೆಯು ಬಹಳ ಮುಖ್ಯ?

6. ಅ.ಕೃತ್ಯ 17:10–12

ಆ) ಇಲ್ಲಿ ಬೇರೆಯ ಜನರ ಒಂದು ಉದಾಹರಣೆ ನಾವು ನೋಡಬಹುದು ಇವರು ಬರೀ ಉಪದೇಶವನ್ನು ಮಾತ್ರ ಕೇಳದೆ ಪ್ರತಿದಿನವೂ ದೇವರ ವಾಕ್ಯವನ್ನು ಶೋಧಿಸುವವರಾಗಿದ್ದರು. ಅವರು ಕೇಳಿದ ವಾಕ್ಯಗಳು ಸರಿಯೋ ಇಲ್ಲವೋ ಎಂದು ತಿಳಿದುಕೊಳ್ಳಲು.

ಆ) ಯಾರು ದೇವರನ್ನು ಹುಡುಕುತ್ತಾರೋ ಅವರನ್ನು ದೇವರ ವಾಕ್ಯವನ್ನು ದಿನಾಲೂ ಬದಲು ಪ್ರೋತ್ಸಾಹಿಸಿರಿ.

7. ಮತ್ತಾಯ 4:4

ಅ) ಯಾಕೆ ಸತ್ಯವೇದವನ್ನು ಓದಬೇಕು? ಯಾಕೆಂದರೆ ಯೇಸು ಹೇಳಿದ್ದಾರೆ 'ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವುದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು'

ಆ) ನಮ್ಮ ದೇಹದ ಬೆಳವಣಿಗೆಗೆ ಹೇಗೆ ನಮಗೆ ಆಹಾರ ಅವಶ್ಯಕತೆಯೋ ಹಾಗೆಯೇ ನಮ್ಮ ನಂಬಿಕೆಯನ್ನು ಹೆಚ್ಚಿಸಿಕೊಳ್ಳಲು ದೇವರ ವಾಕ್ಯ ಅವಶ್ಯಕತೆ.

ಕಡೆಯದಾಗಿ – ಪ್ರತಿದಿನವೂ ನೀವು ಸತ್ಯವೇದವನ್ನು ಓದಿ, ಅಭ್ಯಾಸ ಮಾಡುವುದನ್ನು ಕಲಿಯಬೇಕು.

Scanned by CamScanner

ಉಪಯೋಗವಾಗುವ ವಚನಗಳು

ಯಾಕೋಬ	1:22–25
ಮತ್ತಾಯ	7:15–20, 24–27
ರೋಮ	10:17
ಕೀರ್ತನೆಗಳು	19:7–11
ಕೀರ್ತನೆಗಳು	119:11, 105

ಮುಂದಿನ ಅಭ್ಯಾಸಗಳಿಗೆ ಉಪಯೋಗವಾಗುವಂತ ವಚನಗಳು

ಯಾರ್ಯಾರು ಯೇಸುವಿನಲ್ಲಿ ನಂಬಿಕೆಯಿಡಲು ಬಹಳ ಕಷ್ಟಪಡುತ್ತಿದ್ದಾರೋ ಅವರಿಗೆ ಈ ವಾಕ್ಯಗಳು ಉಪಯೋಗವಾಗುತ್ತದೆ.

ಪ್ರವಾದನೆ	ನೆರವೇರಿರುವುದು	ಪ್ರವಾದನೆ	ನೆರವೇರಿಕೆ
ಆದಿಕಾಂಡ 49:10	ಮತ್ತಾಯ 1:1–17	ಯೆಶಾಯ 42:1–4	ಮತ್ತಾಯ 12:15
ಯೆಶಾಯ 7:14	ಮತ್ತಾಯ 1:22	ಕೀರ್ತನೆ 78:2	ಮತ್ತಾಯ 13:34–35
ಮೀಕ 5:2	ಮತ್ತಾಯ 2:5	ಮೀಕ 7:6	ಮತ್ತಾಯ 10:35–36
ಹೋಶೆಯ 11:1	ಮತ್ತಾಯ 2:15	ಮಲಕಿಯಾ 3:1	ಮತ್ತಾಯ 11:10
ಯೆರೆಮಿಯಾ 31:15	ಮತ್ತಾಯ 2:17–18	ಯೆಶಾಯ 6:9–10	ಮತ್ತಾಯ 13:13–15
ಯೆಶಾಯ 40:3	ಮತ್ತಾಯ 3:3	ಕೀರ್ತನೆ 8:2	ಮತ್ತಾಯ 21:16
ಯೆಶಾಯ 9:1–2	ಮತ್ತಾಯ 4:13–16	ಜೆಕರ್ಯ 9:9	ಮತ್ತಾಯ 21:1–5
ಯೆಶಾಯ 53:4	ಮತ್ತಾಅ 8:16–17	ಜೆಕರ್ಯ 13:7	ಮತ್ತಾಯ 26:31

Scanned by CamScanner

6. ಪಾಪ

ಉಪಯೋಗಿಸಿರುವ ವಚನಗಳು

1. ಯೆಶಾಯನು 59:1–2
2. ರೋಮಾಪುರದವರಿಗೆ 3:23
3. ರೋಮಾಪುರದವರಿಗೆ 6:23
4. ಗಲಾತ್ಯದವರಿಗೆ 5:19–21
5. ಮೂರ್ಕನು 7:21–23
6. ಯಾಕೋಬನು 4:17
7. ಯಾಕೋಬನು 5:16
8. ೧ಯೋಹಾನನು 1:9

1. ಯೆಶಾಯನು 59:1–2

ವಿ : ನಮ್ಮ ಪಾಪಗಳು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಾವು ಪಾಪ ಮಾಡಿದಾಗ ನಮ್ಮ ಹಾಗೂ ದೇವರ ಮಧ್ಯ ಗೋಡೆ ಕಟ್ಟಿಕೊಳ್ಳುತ್ತದೆ. ಅದು ದೇವರ ತಪ್ಪಲ್ಲ ನಾವು ದೇವರ ಜೊತೆ ಹತ್ತಿರ ಸಂಬಂಧ ಇಟ್ಟುಕೊಳ್ಳಬೇಕಾದರೆ ಈ ಪಾಪವೆಂಬ ಗೋಡೆಯನ್ನು ನಾಶ ಮಾಡಬೇಕು. ಪಾಪದ ಗೋಡೆಯ ಚಿತ್ರವನ್ನು ಬರಿ ಮತ್ತು ವಿವರಿಸು.

ಮನುಷ್ಯ	ಪಾಪದ ಗೋಡೆ	ದೇವರು

2. ರೋಮಾಪುರದವರಿಗೆ 3:23

ವಿ : ಎಷ್ಟು ಜನ ಪಾಪ ಮಾಡಿದ್ದಾರೆ? ಎಲ್ಲರೂ ಪಾಪ ಮಾಡಿದ್ದಾರೆ.

ವಿ : ನಾವೆಲ್ಲರೂ ನಮ್ಮ ಪಾಪಗಳಿಗೆ ಕ್ಷಮಾಪಣೆ ಹೊಂದಬೇಕಾಗಿದೆ. ಒಂದು ಸುಳ್ಳು ಹೇಳಿದರೆ ನಾವು ಸುಳ್ಳುಗಾರರಾಗುತ್ತೇವೆ. ಹಾಗೆಯೇ ಒಂದು ಪಾಪ ಮಾಡಿದರೂ ನಾವು ಪಾಪಿಗಳಾಗುತ್ತೇವೆ. ಪಾಪಿಗಳಾಗುವುದಕ್ಕೆ ನಾವು ಬಹಳ ಪಾಪಗಳನ್ನು ಮಾಡುವ ಅವಶ್ಯಕತೆಯಿಲ್ಲ. ಆದ್ದರಿಂದ ನಾವೆಲ್ಲರೂ ಪಾಪಿಗಳೇ, ನಾವು ಬೇರೆಯವರಿಂದ ವ್ಯತ್ಯಾಸವಿಲ್ಲ, ನಮಗೆಲ್ಲರಿಗೂ ಕ್ಷಮಾಪಣೆ ಬೇಕಾಗಿದೆ.

ವಿ : ನಾವು ನಮ್ಮನ್ನು ಬೇರೆಯವರ ಜೊತೆಗೆ ಹೋಲಿಸಿಕೊಂಡರೆ ನಾವು ಬೇರೆಯವರಕ್ಕಿಂತ ಉತ್ತಮರೆಂದು ಭಾವಿಸುತ್ತೇವೆ. ಆದರೆ ನಾವು ಎಲ್ಲರೂ ದೇವರೊಂದಿಗೆ ಹೋಲಿಸಿದರೆ ನಾವು ಅವರ ಮಹಿಮೆಯನ್ನು ಹೊಂದದೆ ಹೋಗಿದ್ದೇವಿ. ನಾವು ಎಷ್ಟು ಒಳ್ಳೆಯವರು ಆಗಿದ್ದರು ನಾವು ದೇವರ ಮಹಿಮೆಯನ್ನು ತಲುಪುವುದಿಲ್ಲ.

Scanned by CamScanner

3 ರೋಮಾಪುರದವರಿಗೆ 6:23

ಏ : ನಾವು ಮಾಡಿದ ಪಾಪಗಳಿಗೆ ನಮಗೆ ಮರಣವೇ ಯೋಗ್ಯ (ಆತ್ಮಿಕ ಮರಣ, ದೈಹಿಕ ಮರಣವಲ್ಲ). ಹಾಗೆಂದರೆ ದೇವರಿಂದ ಶಾಶ್ವತವಾಗಿ ಬೇರ್ಪಟ್ಟು ನರಕಕ್ಕೆ ತಳ್ಳುವುದು.

ಏ : ಆದರೆ ಯೇಸು ಕ್ರಿಸ್ತರ ಮೂಲಕ ಪಾಪದ ಗೋಡೆಯನ್ನು ಒಡೆಯಬಹುದು. ಆತನು ನಮಗೆ ನಿತ್ಯ ಜೀವನವನ್ನು ಕೊಡುವನು. ಆತನು ನಮ್ಮ ಎಲ್ಲಾ ಪಾಪಗಳನ್ನು ಕ್ಷಮಿಸುವನು. ಸತ್ಯವೇದವು ಯಾವ ಪಾಪಗಳ ಬಗ್ಗೆ ಮಾತನಾಡುತ್ತದೆ. ಸೇರಿಸದಿರುವ ಪಾಪಗಳು (ಯಾಕೋಬನು 4:17) ಮತ್ತು ಮಾಡುವ ಪಾಪಗಳು ಇವೆ.

4. ಗಲಾತ್ಯದವರಿಗೆ 5:19–21

1) ಮಾಡುವ ಪಾಪಗಳು

ಜಾರತ್ವ–ಲೈಂಗಿಕ ಪಾಪಗಳು

ಅ. ಕಮದ ನೋಟ – ಹುಡುಗಿಯರನ್ನು ಚುಡಾಯಿಸುವುದು – ಬಸ್ಸಿನಲ್ಲಿ ಹೆಂಗಸರ ಹಿಂದೆ ನಿಂತು ಅವರ ಮೈ ಮುಟ್ಟುವುದು ಇತ್ಯಾದಿ.

ಆ. ಅಶ್ಲೀಲತೆ – ಕೆಟ್ಟ ಸಿನಿಮಾ, ಪುಸ್ತಕ, ಚಿತ್ರ ಇತ್ಯಾದಿ. ಹಸ್ತ ಮೈಥುನ.

ಇ. ಪರಸ್ತ್ರೀಯರ ಜೊತೆ ಲೈಂಗಿಕ ಸಂಬಂಧ – ನೆರೆಮನೆಯವರು, ಸ್ನೇಹಿತ / ಸ್ನೇಹಿತೆ, ಸೂಳೆಯ ಬಳಿ ಹೋಗುವುದು ಇತ್ಯಾದಿ.

ಈ. ಹಾದರ – ಕುಟುಂಬದ ಸದಸ್ಯರೊಡಗೆ ಲೈಂಗಿಕ ಸಂಬಂಧ, ಚಿಕ್ಕಪ್ಪ, ಚಿಕ್ಕಮ್ಮ, ಕೊಡ್ಡಪ್ಪ, ದೊಡ್ಡಮ್ಮ, ಅತ್ತೆ, ಮಾವ, ಅವರ ಮಕ್ಕಳು, ನೆಂಟರು, ಸಹೋದರ, ಸಹೋದರಿಯರ ಜೊತೆ ಇತ್ಯಾದಿ.

ಉ. ಸಲಿಂಗ ಕಾಮ – ಅದೇ ಲಿಂಗದವರ ಜೊತೆ ಲೈಂಗಿಕ ಸಂಬಂಧ, ಒಬ್ಬೊಬ್ಬರ ಖಾಸಗಿ ಅಂಗಗಳನ್ನು ಮುಟ್ಟಿಕೊಳ್ಳುವುದು, ಒಬ್ಬರನ್ನೊಬ್ಬರು ಹಸ್ತ ಮೈಥುನ ಮಾಡುವುದು, ಮೌಖಿಕ ಲೈಂಗಿಕ ಸಂಬಂಧ, ಗುದದ ಲೈಂಗಿಕ ಸಂಬಂಧ ಇತ್ಯಾದಿ.

ಊ. ಮಕ್ಕಳ ದುರುಪಯೋಗ – ಮಕ್ಕಳ ಜೊತೆ ಲೈಂಗಿಕ ಸಂಬಂಧ, ಸ್ವಂತ ಕಾಮದಾಸೆಯನ್ನು ಪೂರೈಸಿಕೊಳ್ಳಲು ಮಕ್ಕಳನ್ನು ಉಪಯೋಗಿಸುವುದು, ಕಾಮದಾಸೆಯಿಂದ ಮಕ್ಕಳನ್ನು ತೊಡೆಯ ಮೇಲೆ ಹಾಕಿಕೊಳ್ಳುವುದು, ಮೌಖಿಕ ಲೈಂಗಿಕ ಸಂಬಂಧ, ಇತ್ಯಾದಿ.

ಋ. ಪ್ರಾಣಿಗಳೊಂದಿಗೆ ಲೈಂಗಿಕ ಸಂಬಂಧ – ಹಸು, ಮೇಕೆ, ನಾಯಿ ಇತ್ಯಾದಿ.

ಋ. ಅಶುದ್ಧತೆ – ಸ್ವಂತದ ಬಗ್ಗೆ, ಕುಟುಂಬದ ಬಗ್ಗೆ, ಹಿಂದಿನ ಜೀವನದ ಬಗ್ಗೆ ಸುಳ್ಳು ಹೇಳುವುದು, ಪರೀಕ್ಷೆಯಲ್ಲಿ ಮೋಸ ಮಾಡುವುದು, ತಪ್ಪು ಭೋಗ್ಯತಾಪತ್ರ ಮಾಡಿಸುವುದು, ಕೆಟ್ಟ ಮಾತು ಉಪಯೋಗಿಸುವುದು, ಕಳ್ಳತನ ಮಾಡುವುದು.

ಎ. ನಾಚಿಕೆಗೇಡಿತನ –ಇಚ್ಛಾಪೂರ್ತಿ ಮಾಡುವುದು, ಸ್ವಂತವನ್ನು ಸಂತೋಷಪಡಿಸಿಕೊಳ್ಳುವುದು, ಏನಾದರು ಬಹಳ ತಿನ್ನುವುದು, ಏನಾದರು ಮಿತಿಗಿಂತ ಹೆಚ್ಚು ಮಾಡುವುದು.

ಏ. ವಿಗ್ರಹಾರಾಧನೆ – ವಿಗ್ರಹಗಳಿಗೆ ಪೂಜೆ ಮಾಡುವುದು, ಭಾವಚಿತ್ರಗಳಿಗೆ, ವರ್ಣರಂಜಿತ ಚಿತ್ರಗಳಿಗೆ, ಕಲ್ಲುಗಳಿಗೆ, ಗುರುಗಳಿಗೆ ಪೂಜೆ ಮಾಡುವುದು, ಯಾವುದನ್ನಾದರೂ ಅಥವಾ ಯಾರನ್ನಾದರೂ ದೇವರಿಗಿಂತ ಹೆಚ್ಚು ಪ್ರಾಶತ್ಯಕೊಡುವುದು.

Scanned by CamScanner

ಐ. ಮಾಟ – ಮಾಟ ಮಂತ್ರ, ದೇವರನ್ನು ಬಿಟ್ಟು ಬೇರೆ ಯಾವುದೇ ಶಕ್ತಿಯ ಮೇಲೆ ನಂಬಿಕೆ ಇಡುವುದು, ಕೈ ಶಾಸ್ತ್ರ, ಜ್ಯೋತಿ ಶಾಸ್ತ್ರ, ಜನ್ಮ ಕುಂಡಲಿಯ ಮೇಲೆ ನಂಬಿಕೆ ಇಡುವುದು, ನಮ್ಮ ಕೈ ಮತ್ತು ನಕ್ಷತ್ರಗಳು ನಮ್ಮ ಜೀವನ ನಡೆಸುವುದೆಂದು ನಂಬುವುದು ಪಾಪ.

ಒ. ಜಗಳ – ಸಂಬಂಧಗಳಲ್ಲಿ ಜಗಳ ಮಾಡುವುದು, ಮದುವೆ ಸಂಬಂಧದಲ್ಲಿ ಇನ್ನು ಕ್ಷಮಿಸಲಾಗದ ದ್ವೇಷ ನಿಮ್ಮ ಜೀವನದಲ್ಲಿ ಇದೆಯಾ?

ಓ. ಹೊಟ್ಟೆಕಿಚ್ಚು – ಎಲ್ಲವನ್ನು ಸ್ವಂತ ಪಡಿಸಿಕೊಳ್ಳುವ ಆಸೆ.

ಔ. ಸಿಟ್ಟು – ಕೆಟ್ಟ ಮಾತುಗಳನ್ನು ಉಪಯೋಗಿಸುವುದು, ವಸ್ತುಗಳನ್ನು ಜನರ ಕಡೆ ಎಸೆಯುವುದು, ಜನರನ್ನು ಹೊಡೆಯುವುದು, ಬಾಗಿಲನ್ನು ಜೋರಾಗಿ ಮುಚ್ಚುವುದು, ಇತ್ಯಾದಿ.

ಅಂ. ಸ್ವಾರ್ಥದ ಆಸೆ – ಬೇರೆಯವರ ಬಗ್ಗೆ ಚಿಂತಿಸದೆ ಸ್ವಂತದ ಬಗ್ಗೆ ಮಾತ್ರ ಚಿಂತಿಸುವುದು, ಸ್ವಂತದ ಭವಿಷ್ಯದ ಬಗ್ಗೆ, ಕೆಲಸದ ಬಗ್ಗೆ, ನಾನು ಏನು ಮಾಡಬೇಕು, ನನಗೆ ಏನು ಸಿಗುತ್ತದೆ ಎಂಬ ಬಗ್ಗೆ ಮಾತ್ರ ಚಿಂತಿಸುವುದು.

ಆ: ಕಕ್ಷ ಬೇಧ – ಜಗಳ, ಭಿನ್ನಾಭಿಪ್ರಾಯ

ಕ. ಭಿನ್ನಮತ – ಗುಂಪಿನಲ್ಲಿ ಮತಬೇಧ ಹುಟ್ಟಿಸುವುದು, ಒಂದು ಗುಂಪಿನಲ್ಲೆ ಪ್ರತಿದ್ವಂದ್ವದ ಇನ್ನೊಂದು ಗುಂಪು ಮಾಡುವುದು.

ಖ. ಮತ್ಸರ – ಬೇರೆಯವರ ವಸ್ತುಗಳ ಮೇಲೆ ಆಸೆ ಪಡುವುದು, ಬೇರೆಯವರ ಏಳ್ಗೆಯ ಬಗ್ಗೆ ಸಂತೋಷಪಡದೆ ಇರುವುದಿ, ದೇವರು ಕೊಟ್ಟಿರುವುದರಲ್ಲಿ ತೃಪ್ತಿ ಹೊಂದದೆ ಇರುವುದು.

ಗ. ಕುಡುಕುತನ – ಮಧ್ಯಪಾನವನ್ನು ಮಿತಿ ಮೀರಿ ಸೇವಿಸುವುದು, ಡ್ರಗ್ಸ್ ತೆಗೆದುಕೊಳ್ಳುವುದು, ತಂಬಾಕು ಅಗಿಯುವುದು, ಧೂಮಪಾನ ಮಾಡುವುದು, ಪಾನ್ ಪರಾಗ್ ತಿನ್ನುವುದು, ಇತ್ಯಾದಿ.

ಘ. ದುಂದೌತಣ – ಕ್ರೂರ ಔತಣಗಳು, ಗುಂಪಿನಲ್ಲಿ ಅನೇಕ ಪಾಪಗಳನ್ನು ಮಾಡುವುದು.

5. ಮಾರ್ಕನು 7:21–23

ವಿ : ಪಾಪ ನಮ್ಮ ಹೃದಯದಿಂದಲೇ ಬರುವುದು, ಆದ್ದರಿಂದ ನಮ್ಮ ಪಾಪಗಳಿಗೆ ಯಾರು ಹೊಣೆ? ನಾವೆ.

ವಿ : ನಾವು ಬೇರೆಯವರ ಮೇಲೆ, ಸಂದರ್ಭಗಳ ಮೇಲೆ, ಪರಿಸ್ಥಿತಿಯ ಮೇಲೆ ಹೊಣೆ ಹಾಕಬಹುದು? ಇಲ್ಲಾ ನಾವು ಮಾಡಿದ ಪಾಪಗಳಿಗೆ ನಾವೇ ಜವಾಬ್ದಾರಿ ತೆಗೆದುಕೊಳ್ಳಬೇಕು. ನಾವು ತಪ್ಪು ಮಾಡುವುದಕ್ಕೆ ಬೇರೆಯವರು ಪ್ರೇರೇಪಿಸಬಹುದು ಆದರೆ ತಪ್ಪು ಮಾಡುವುದು, ಸರಿ ಮಾಡುವುದು, ಎಲ್ಲಾ ನಮ್ಮ ಕೈಲಿದೆ.

6. ಯೋಕೋಬನು 4:17

ಸೇರಿಸದಿರುವ ಪಾಪಗಳು – ಒಳ್ಳೇದನ್ನು ಮಾಡಬೇಕೆಂದು ತಿಳಿದು ಅದನ್ನು ಮಾಡದೆ ಇರುವವನ ಪಾಪಕ್ಕೊಳಗಾಗಿದ್ದಾರೆ.

7. ಯಕೋಬನು 5:16 ಮತ್ತು ೧ ಯೇಹಾನನು 1:9

ವಿ : ಇಲ್ಲಿ ಎರಡು ವಚನಗಳು ನಮ್ಮ ಪಾಪದ ಅರಿಕೆ ಮಾಡುವುದರ ಬಗ್ಗೆ ಮಾತನಾಡುತ್ತವೆ.

Scanned by CamScanner

- ಆದ್ದರಿಂದ, ನಾವು ನಮ್ಮ ನಿರ್ದಿಷ್ಟ ಪಾಪಗಳನ್ನು ದೇವರಿಗೆ ಅರಿಕೆ ಮಾಡಿಕೊಳ್ಳಬೇಕು (ಕೀರ್ತನೆಗಳು 32:1–5).
- ವಚನ ನಮಗೆ ನಮ್ಮ ಪಾಪಗಳನ್ನು ಹೃದಯ ಪೂರ್ವಕವಾಗಿ ಮತ್ತೊಬ್ಬ ಸಹೋದರನಿಗೆ ಅಥವಾ ಸಹೋದರಿಗೆ ದೈವಿಕ ಸಲಹೆಗಾಗಿ ಮತ್ತು ಮಧ್ಯಸ್ಥನ ಪ್ರಾರ್ಥನೆಗಾಗಿ ಅರಿಕೆ ಮಾಡಿಕೋಬೇಕು ಎಂದು ನಿರ್ಧರಿಸಿದ್ದೇವೆ.
- ನಾವು ನಮ್ಮ ಪಾಪವನ್ನು ಯಾರ ವಿರುಧ ಮಾಡಿದವೋ ಅವರಿಗೆ ಅರಿಕೆ (ಒಪ್ಪಿಕೊಂಡು ಮತ್ತು ಕ್ಷಮೆ ಬೇಡುವುದು) ಮಾಡಿಕೊಳ್ಳಬೇಕು.

ಸೂಚಿಸುವ ಅಭ್ಯಾಸ

ಅವರನ್ನು ಮಾಡಿರುವ ಎಲ್ಲಾ ಪಾಪಗಳನ್ನು ಪಟ್ಟಿ ಮಾಡಿ ನಾಳೆ ಕಲಿಯುವುದಕ್ಕೆ ಬರುವಾಗ ತೆಗೆದುಕೊಂಡು ಬರಬೇಕು ಪ್ರೋತ್ಸಾಹಿಸಿ.

ಕೊನೆದಾಗಿ

ನಿಮ್ಮ ಪಾಪಗಳನ್ನು ಅರಿಕೆ ಮಾಡಿಕೊಳ್ಳುವುದರಲ್ಲಿ ನಿಮಗೆ ಹೇಗೆ ಅನ್ನಿಸುತ್ತಾ ಇದೆ? ನೀವು ಇದಕ್ಕಿಂತ ಮುಂಚೆ, ನಿಮ್ಮ ಜೀವನವನ್ನು ಯಾರಿಗಾದರೂ ಹೇಳಿಕೊಂಡಿದ್ದೀರ?

Scanned by CamScanner

7. ಶಿಲುಬೆ

ಉಪಯೋಗಿಸುವ ವಚನಗಳು

1. ಮೂರ್ಕನು 14:32–65
2. ಮೂರ್ಕನು 15:1–20
3. ಲೂಕ 23:32–34
4. ಮೊರ್ಕನು 15:33–37
5. ೧ ಪೇತ್ರನು 2:21–25
6. ೨ ಕೊರಿಂಥದವರಿಗೆ 5:14–15

ಸೂಚನೆ :

ಈ ಪಾಠ ಕಲಿಯುವ ಮೊದಲು "ಪ್ಯಾರನ್ ಆಫ್ ಕ್ರೈಸ್ಟ್" ಚಲನ ಚಿತ್ರವನ್ನು ತೋರಿಸಿ.

ಉದ್ದೇಶ :

"ದೇವರು ಲೋಕದ ಮೇಲೆ ಎಷ್ಟು ಪ್ರೀತಿಯನಿಟ್ಟು ತನ್ನ ಒಬ್ಬನೆ ಮಗನನ್ನು ಕೊಟ್ಟನು. ಆತನನ್ನು ನಂಬದ ಒಬ್ಬನಾದರೂ ನಾಶಾವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಕಳುಹಿಸಿಕೊಟ್ಟನು (ಯೋಹಾನ 3:16–17)

ಇಲ್ಲಿ, ವೇದವಾಕ್ಯದ ಸಂದೇಶವು ಇದರ ತುದಿಯವರೆಗೆ ತಲುಪಿದೆ. ದೇವರ ದಯೆಯಿಂದ ನಾವೆಲ್ಲರೂ ರಕ್ಷಣೆ ಹೊಂದಿದ್ದೇವೆ. ಯೇಸುವಿನ ಪ್ರೀತಿಯ ತ್ಯಾಗದಿಂದ ನಾವೆಲ್ಲರೂ ರಕ್ಷಣೆ ಹೊಂದಿದ್ದೇವೆ. ಖಂಡಿತವಾಗಿ ದೇವರಿಗೋಸ್ಕರ ಹುಡುಕಾಡುವ ಅವನು / ಅವಳಿಗೆ ದೇವರ ದಯೆ ಬೇಕು, ಮತ್ತು ಈ ಅಧ್ಯಯನದಲ್ಲಿ ದೇವರ ದಯೆಗೆ ಶಕ್ತಿ ಇದೆ. ದೇವರಿಗೋಸ್ಕರ ಹುಡುಕಾಡುವ ಅವನು / ಅವಳು ತಿಳಿದುಕೊಳ್ಳಬೇಕಾದ ಮುಖ್ಯವಾದದ್ದು ಯೇಸುವಿನ ಮರಣದ ಜವಾಬ್ದಾರಿ. ನಮ್ಮದೇ ಜವಾಬ್ದಾರಿಯನ್ನು ಸ್ಥಾಪಿಸಿದರೆ, ಯೇಸುವಿನ ಸ್ವಂತ ಪ್ರೀತಿಯಿಂದ ಮತ್ತು ಕ್ಷಮೆಯಿಂದ ನಾವು ಮುಂದೆ ಸಂತೋಷದಿಂದಲೂ ಮತ್ತು ಕೃತಜ್ಞತೆಯಿಂದಲೂ ಇರಬಹುದು. ಇದು ಒಂದು ಮುಖ್ಯವಾದ ಅಧ್ಯಯನದಲ್ಲಿ ಯೇಸು ಮೇಲೆ ಹೋದಾಗ ಪಟ್ಟ ಮನೋಭಾವನೆ ದೇಹಿತ ಭಾವನೆ ಮತ್ತು ಯೇಸುವನ್ನು ನೋಡಬಹುದು. ಪ್ರಾರ್ಥಿಸೀಣ.

1. ಮೊರ್ಕನು 14:32–42

ಪ್ರ : ಈ ಸಮಯದಲ್ಲಿ ಯೇಸುವು ಹೇಗಿದ್ದಾರೆ? (ಸಾಯುವಷ್ಟು ದು:ಖವಾಗಿದ್ದು ಮನಗುಂದಿದವರಾಗಿದ್ದಾರೆ)

ಪ್ರ : ಯೇಸುವು ಪ್ರಾರ್ಥನೆಯನ್ನು ಪ್ರಾರಂಭಿಸಿದಾಗ ಅವರಿಗೆ ಶಿಲುಬೆಗೆ ಹೋಗಲು ಮನಸ್ಸಿತ್ತಾ? (ಇಲ್ಲ) ಯೇಸುವು ಪ್ರಾರ್ಥನೆಯನ್ನು ಮುಗಿಸುವಾಗ ಅವರ ಮನೋಭಾವನೆ ಹೇಗಿತ್ತು? (ಸಾಯುವುದಕ್ಕೆ ಸಿದ್ದರಾಗಿದ್ದರು) (ವ42). ಅದೇ ರೀತಿಯಾಗಿ ನೀವು ನಿಮ್ಮ ಹೋರಾಟಾದಿಂದ

Scanned by CamScanner

ಹೊರಗೆ ಬರಲು ನಿಮ್ಮ ಹೃದಯಗಳು ಬದಲಾವಣೆಯಾಗುವವರೆಗೂ ನೀವು ಪ್ರಾರ್ಥಿಸಬೇಕು.

ಪ್ರ : ನಿಮಗೆ ನಿಜವಾಗಿಯೂ ಬೇಡಿಕೆಯಿರುವಾಗ ನಿಮ್ಮ ಗೆಳೆಯರು ನಿಮ್ಮನ್ನು ಬಿಟ್ಟು ಹೋಗಿದ್ದಾರಾ? ಹಂಚಿಕೊಳ್ಳಿರಿ.

ಪ್ರ : ಯೇಸು ಏಕೆ ಈ ರೀತಿಯಾಗಿ ಮಾಡಿದರೆಂಬುದು ನಿಮಗೆ ತಿಳಿದಿದೆಯಾ? (ಏಕೆಂದರೆ ಯೇಸು ನಮ್ಮನ್ನು ಪ್ರೀತಿಸುತ್ತಾರೆ. ಏಕೆಂದರೆ ನಮ್ಮ ಪಾಪಗಳಿಗಾಗಿ: ನಮ್ಮ ಸುಳ್ಳುಗಳು, ನಮ್ಮ ಜಂಭ, ನಮ್ಮ ಸ್ವಾರ್ಥತೆಗಳಿಗಾಗಿ)

2. ಮಾರ್ಕನು14:43–50

ಪ್ರ : ಯುದನು ಯೇಸುವಿಗೆ ದ್ರೋಹ ಮಾಡಿದನು. ನೀವು ಯಾವಾಗಲಾದರು ಬೇರೆಯವರಿಂದ ದ್ರೋಹ ಮಾಡಲ್ಪಟ್ಟಿರುವಿರಾ ಹಂಚಿಕೊಳ್ಳಿರಿ.

ಪ್ರ : ಯೇಸು ಮನಸ್ಸಿಟ್ಟಿದ್ದರೆ ಏನು ಮಾಡ ಬಹುದಾಗಿತ್ತು? (12,000 ದೇವದೂತರನ್ನು ಕರೆದು ಅವರನ್ನು ಹಾಳು ಹಾಳು ಮಾಡಬಹುದಾಗಿತ್ತು (ಮತ್ತಾಯನು 26:53)

ಪ್ರ : ಯೇಸುವು ಬಂಧಿಸಲ್ಪಟ್ಟಾಗ ಅವರ ಶಿಷ್ಯರೆಲ್ಲಾ ಏನು ಮಾಡಿದರು (ವ. 50) ? (ಅವರೆಲ್ಲರು ಓಡಿ ಹೋದರು).

ಪ್ರ : ನೀವು ಒಬ್ಬಂಟಿಗರಾಗಿರುವುದಾಗಿ ನಿಮಗೆ ಯಾವಾಗಲಾದರೂ ಅನ್ನಿಸಿದೆಯಾ? ಪ್ರಪಂಚದಲ್ಲಿ ನಿಮ್ಮ ಬಗ್ಗೆ ಚಿಂತೆ ಮಾಡುವವರು ಯಾರು ಇಲ್ಲವೆಂದು ಅನ್ನಿಸಿದೆಯಾ? ಹಂಚಿಕೊಳ್ಳಿರಿ.

ಪ್ರ : ಯೇಸುವು ಇವೆಲ್ಲವನ್ನು ಏತಕ್ಕಾಗಿ ಮಾಡಿದರೆಂದು ನಿಮಗೆ ತಿಳಿದಿದೆಯಾ? (ಏಕೆಂದರೆ ಯೇಸು ನಮ್ಮನ್ನು ಪ್ರೀತಿಸುತ್ತಾರೆ, ಏಕೆಂದರೆ ನಮ್ಮ ಪಾಪಗಳಿಗಾಗಿ ನಮ್ಮ ಸುಳ್ಳುಗಳು, ನಮ್ಮ ಜಂಭ, ನಮ್ಮ ಸೋಮಾರಿತನದ ಮುಂತಾದವುಗಳಿಗಾಗಿ).

3. ಮಾರ್ಕನು 14:53–65

ಪ್ರ : ಯೇಸುವು ಇಲ್ಲಿ ಶೋಧನೆಗೆ ಒಳಗಾದರು. ಎಂತಹ ಶೋಧನೆಗೆ ಒಳಗಾದರು? (ಅನ್ಯಾಯದ ಶೋಧನೆಗೆ ಒಳಗಾದರು).

ಪ್ರ : ನೀವು ಯಾವಾಗಲಾದರೂ ಅನಿತಿಯಾಗಿ ಶೋಧನೆಗೆ ಒಳಗಾಗಿದ್ದೀರಾ? ಹಂಚಿಕೊಳ್ಳಿರಿ. ನಾವು ಹೇಗೆ ಪ್ರತಿಕ್ರಿಯಿಸುತ್ತೀವಿ?

ಪ್ರ : ಕಳೆದ ಮೂರು ವರ್ಷಗಳಿಂದ ಯೇಸುವಿನಿಂದ ಸಹಾಯವನ್ನು ಹೊಂದಿದ ಜನರಲ್ಲಿ

Scanned by CamScanner

ಯಾರಾದರು ಯೇಸುವಿನ ಸಹಾಯಕ್ಕಾಗಿ ಬಂದರಾ?

ಪ್ರ : ನೀನು ಮಾಡಿದ ಒಳ್ಳೆಯ ಕಾರ್ಯಗಳನ್ನು ಜನರು ಗುರುತಿಸಲಾರದೆ ಹೋಗಿದ್ದಾರೆ? ಹಂಚಿಕೊಳ್ಳಿರಿ.

ಪ್ರ : ಯೇಸುವಿಗೆ ಕಣ್ಣು ಕಟ್ಟಿ ಅವಮಾನ ಮಾಡಿದರು, ಉಗುಳಿದರು, ಹೊಡೆದರು, ನಿಮ್ಮನ್ನು ಯಾರಾದರೂ ಹೊಡಿದ್ದಿದ್ದಾರಾ?

ಪ್ರ : ಯೇಸುವು ಇವೆಲ್ಲವನ್ನು ಏತಕ್ಕಾಗಿ ಮಾಡಿದರೆಂದು ನಿಮಗೆ ತಿಳಿದಿದೆಯಾ? (ಏಕೆಂದರೆ ಯೇಸು ನಮ್ಮನ್ನು ಪ್ರೀತಿಸುತ್ತಾರೆ, ಏಕೆಂದರೆ ನಮ್ಮ ಪಾಪಗಳಿಗಾಗಿ; ನಮ್ಮ ಸೂಳೆಗಾರಿಗಾಗಿ, ನಮ್ಮ ಜಂಭ, ನಮ್ಮ ಕೋಪ ಮುಂತಾದವುಗಳಿಗಾಗಿ)

ಪ್ರ : ನಂತರ ಯೇಸುವು ಯಾರೆಂದು ನಿನಗೆ ತಿಳಿದಿಎಯಾ ಎಂದು ಪೇತ್ರನನ್ನು ಕೇಳಿದಾಗ ಮೂರು ಸಾರಿ ನನಗೆ ಗೊತ್ತಿಲ್ಲವೆಂದು ಪೇತ್ರನು ಹೇಳಿದನು. ಲೂಕಾ 22:54–62ರಲ್ಲಿ ಬೈಬಲ್ ಹೇಳುತ್ತದೆ ಯೇಸುವಿಗೆ ಇದು ಮೊದಲೇ ತಿಳಿದಿತ್ತು. ಆದ್ದರಿಂದಲೇ ಯೇಸು ಪೇತ್ರನ ಮುಖವನ್ನು ನೋಡಿದರು. ನಂತರ ಪೇತ್ರನು ಹೊರಗೆ ಹೋಗಿ ದು:ಖದಿಂದ ಗೊಳಾಡಿದನು.

ಪ್ರ : ನಿಮ್ಮ ಬಗ್ಗೆ ನಿಮ್ಮ ಹಿಂದೆ ಯಾರಾದರೂ ಕೆಟ್ಟದಾಗಿ ಮಾತನಾಡಿರುವುದನ್ನು ನೀವು ಯಾವಾಗಲಾದರೂ ಕೇಳಿಸಿಕೊಂಡಿದ್ದೀರಾ? ನಿಮಗೆ ಏನನ್ನಿಸಿತು? ಹಂಚಿಕೊಳ್ಳಿರಿ.

ಪ್ರ : ಯೇಸುವು ಇವೆಲ್ಲವನ್ನು ಏತಕ್ಕಾಗಿ ಮಾಡಿದರೆಂದು ನಿಮಗೆ ತಿಳಿದಿದೆಯಾ? (ಏಕೆಂದರೆ ಯೇಸು ನಮ್ಮನ್ನು ಪ್ರೀತಿಸುತ್ತಾರೆ, ಏಕೆಂದರೆ ನಮ್ಮ ಪಾಪಗಳಿಗಾಗಿ ನಮ್ಮ ಸುಳ್ಳುಗಳು, ನಮ್ಮ ಕುಡಿತನ, ನಮ್ಮ ಕಾಮಾಭಿಲಾಷೆ ಮುಂತಾದವುಗಳಿಗಾಗಿ).

4. ಮೂರ್ಕನು 15:1–15

ವಿ : ಯೇಸುವು ರಾತ್ರಿಯೆಲ್ಲಾ ನಿದ್ದೆ ಮಾಡಲಿಲ್ಲ ಉಗುಳಿ ಹೊಡಿದಿದ್ದಾರೆ. ಈಗ ಇನ್ನೊಂದು ಶೋಧನೆಯನ್ನು ಅನುಭವಿಸುತ್ತಾರೆ.

ಪ್ರ : ಯೇಸುವನ್ನು ಕೊಲೆಗಾರನಿಗೆ (ಬಾರಬ್ಬಸ್) ಹೋಲಿಕೆ ಮಾಡಲಾಯಿತು, ಅವರಿಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಬೇಕೆಂದು ಜನರನ್ನು ಕೇಳಿದರು. ಯೇಸುವಿಗೆ ಎನ್ನನ್ನಿಸರಬಹುದು?

ಪ್ರ : ಪಿಲಾತನು ನ್ಯಾಯಾಧಿಪತಿಯ ಸ್ಥಾನದಲ್ಲಿ ಕುಳಿತಿದ್ದನು. ಅವನು ಯೇಸುವಿನ ಬಗ್ಗೆ ತೀರ್ಪು ಕೊಡಬೇಕಾಯಿತು. ಅವನಿಗೆ ಯೇಸುವಿನ ಮೇಲೆ ಇಷ್ಟವಿತ್ತಾ?

Scanned by CamScanner

ಪ್ರ : ಪಿಲಾತನು ಜನರಲ್ಲಿ ಕಾರಣವನ್ನು ಕೇಳಲು ಪ್ರಯತ್ನಪಟ್ಟನು ("ಅವರು ಯಾವ ತಪ್ಪನ್ನು ಮಾಡಿದ್ದಾರೆ"?) ಜನರಿಗೆ ಇದು ಇಷ್ಟವಾಯಿತಾ? (ಇಲ್ಲ, ಅವರು ಇನ್ನೂ ಶಬ್ಧವಾಗಿ ಕೂಗಿದರು.).

ಪ್ರ : ಜನರು ವಾದವಿವಾದಗಳಲ್ಲಿ ಸೋಲನ್ನಪ್ಪುವಾಗ ಹೇಗೆ ಪ್ರತಿಕ್ರಿಯೆ ಮಾಡುತ್ತಾರೆ? (ಕೂಗಾಡು).

ಪ್ರ : ಮತ್ತಾಯ 27:24ರ ಪ್ರಕಾರ, ಪಿಲಾತನು ವಿಷಯವನ್ನು ಕೈಗೊಳೆದು ಬಿಟ್ಟನು. ಅದು ಅವನನ್ನು ನಿರ್ದೋಷಿಯನ್ನಾಗಿ ಮಆಡಿತಾ? (ಇಲ್ಲ ಪಿಲಾತನು ನಿರ್ದೋಷಿಯಾಗಬೇಕೆಂದಿದ್ದನು ಆದರೆ ಅದಕ್ಕಾಗಿ ಬೆಲೆ ಕಟ್ಟುವುದಕ್ಕೆ ಸಿದ್ಧನಾಗಿರಲಿಲ್ಲ. ಆದುದರಿಂದ ಅವನ ತೀರ್ಪು ಯೇಸುವಿನ ವಿರುದ್ಧ ಅನೀತಿಯಾಯಿತು).

ಪ್ರ : ಯೇಸುವಿಗೆ ಚಾವಟಿಯೇಟನ್ನು ಹೊಡೆದರು ಎಂದು ಬೈಬಲ್ ಹೇಳುತ್ತದೆ. ಚಾವಟಿಯೇತಂದರೇನೆಂದು ನಿಮಗೆ ತಿಳಿದಿದೆಯಾ? (ಬಟ್ಟೆಯನ್ನು ಬಿಚ್ಚುವರು, ಹದವಾದ ಚರ್ಮದಿಂದ ಮಾವಟೆಯನ್ನು ಮಾಡುವರು. ಅದರ ಕೊನೆಯಲ್ಲಿ ಮೂಳೆಗಳು ಅಥವಾ ಗಾಜಿನ ಚೂರುಗಳನ್ನು ಇಟ್ಟು ಪದೇ ಪದೇ ಹೊಡೆಯುವರು, ರಕ್ತ, ಚಿಮ್ಮುವುದು, ಬಹಳ ನೋವಾಗುವುದು ಬೆನ್ನು ಮದುವಾದ ಮಾಂಸವಾಗುವವರೆಗೂ ಹೊಡೆಯುವರು).

ಪ್ರ : ಪ್ರತಿಸಾರಿ ಚಾವಟಿಯೇಟನು ಹೊಡೆದಾಗೆ, ನಿಮಗೆ ಗೊತ್ತ ಏಕೆ ಯೇಸು ಈ ಬಾದೆಯನ್ನು ತಗೋಳಕ್ಕೆ ಇಷ್ಟವಾಯಿತು? (ಏಕೆಂದರೆ ಯೇಸು ನಮ್ಮನ್ನು ಪ್ರೀತಿಸುತ್ತಾನೆ. ಏಕೆ,ದರೆ ನಮ್ಮ ಪಾಪಕ್ಕಾಗಿ, ನಮ್ಮ ಧೂಮಪಾನ, ನಮ್ಮ ಸ್ವಾರ್ಥ ಮುಂತಾದವುಗಳಿಗಾಗಿ).

5. ಮಾರ್ಕನು 15:16–20

ಪ್ರ : ಸೈನಿಕರೆಲ್ಲರೂ ಯೇಸುವನ್ನು ಹಾಸ್ಯ ಮಾಡಿದರು ನೀವು ಯಾವಾಗಲಾದರೂ ಗುಂಪೊಂದು ಒಬ್ಬನನ್ನು ಸುತ್ತಿಕೊಂಡು ಹೊಡೆಯುವುದನ್ನು ನೀವು ನೋಡಿರುವಿರಾ?

ವಿ : ಯೇಸುವಿನ ಬಟ್ಟೆಯನ್ನು ಬಿಚ್ಚಿ ಕೆಂಪು ವಸ್ತ್ರವನ್ನು ಧರಿಸಿದರು. ಅವರ ತಲೆಯ ಮೇಲೆ ಮುಳ್ಳಿನ ಕಿರೀಟವನ್ನು ಮಾಡಿ ಕೋಲಿನಿಂದ ಹೊಡೆದರು, ನಂತರ ವಸ್ತ್ರವನ್ನು ತೆಗೆದು ಶಿಲುಬೆಗೆ ಏರಿಸಲು ಕರೆದೊಯ್ದರು.

ಪ್ರ : ಅವರು ಯೇಸುವನ್ನು ಹೊಡೆಯುವಾಗ, ಆ ಮುಳ್ಳಿನ ಕಿರೀಟಕ್ಕೆ ಏನು ಆಯಿತು? (ಅದು ಯೇಸುವಿನ ನೆತ್ತಿಯ ಚರ್ಮಕ್ಕೆ ಬಹಳ ಆಳವಾಗಿ ಒಳಕ್ಕೆ ಹೋಗಿ ಅತ್ಯಂತ ನೋವನ್ನು ಉಂಟು ಮಾಡಿಸಿತು).

ಪ್ರ : ವಸ್ತ್ರವನ್ನು ರಭಸವಾಗಿ ಯೇಸುವಿನ ಶರೀರದಿಂದ ಎಳೆದಾಗ ಯೇಸುವಿಗೆ ಏನಾಗಿರಬಹುದು? (ಬಹಳ ನೋವಾಯಿತು ಗಾಯದಿಂದ, ಬ್ಯಾಂಡೇಜನ್ನು ತೆಗೆಯುವ ರೀತಿಯಲ್ಲಿ).

Scanned by CamScanner

ಪ್ರ : ಯೇಸುವು ಇವೆಲ್ಲವನ್ನು ಏತಕ್ಕಾಗಿ ಮಾಡಿದರೆಂದು ನಿಮಗೆ ತಿಳಿದಿದೆಯಾ? (ಏಕೆಂದರೆ ಅವರು ನಮ್ಮನ್ನು ಪ್ರೀತಿಸುತ್ತಾರೆ, ಏಕೆಂದರೆ ನಮ್ಮ ಪಾಪಗಳಿಗಾಗಿ, ನಮ್ಮ ಸೂಳೆಗಾರಿಕೆ, ನಮ್ಮ ಕುಡಿತನ, ನಮ್ಮ ಕೋಪ ಮುಂತಾದವುಗಳಿಗಾಗಿ).

6. ಲೂಕ 23:32–34

ವಿ : ಯೇಸುವಿನ ಬೆನ್ನಿನ ಮೇಲೆ ಶಿಲುಬೆಯನ್ನು ಹಾಕಿ ಹೊರಲು ಹೇಳಿದರು. ನಂತರ ಬಟ್ಟೆಯನ್ನು ಬಿಚ್ಚಿ ತುಕ್ಕು ಹಿಡಿದ ಮೊಳೆಗಳಿಂದ ಕೈದಡಿಗೂ ಮತ್ತು ಪಾದದ ಕೀಲುಗಳಿಗೂ ಹೊಡೆದರು. ಬರೀ ಬೆತ್ತಲೆಯಾಗಿ ಶಿಲುಬೆಯ ಮೇಲೆ ಎಳೆಯಲಪಟ್ಟರು. ಮೇಲಿಂದ ಕೆಳಗೆ ಇಡೀ ದಿನ ಹೋದರು, ಅವರ ರಕ್ತ ತುಂಬಿದ ಬೆನ್ನು ಶಿಲುಬೆಗೆ ಉಜ್ಜಲ್ಪಟ್ಟಿತು. ಅವರು ಪ್ರಾಣ ಸಂಕಟದಲ್ಲಿದ್ದರು.

ಪ್ರ : ಶಿಲುಬೆಯ ಮೇಲೆ ಜನರು ಹೇಗೆ ಸಾಯುವರೆಂದು ನಿಮಗೆ ತಿಳಿದಿದೆಯಾ? (ಅವರಿಗೆ ಉಸಿರಾಡಲು ಆಗುವುದಿಲ್ಲ ಆದುದರಿಂದ ಮೊಳೆಯ ಸಹಾಯದಿಂದ ದೇಹವನ್ನು ಮೇಲಕ್ಕೆತ್ತುವರು, ಅದರಿಂಗಾಗುವ ವೇದನೆಯು ಅಪಾರ. ಆಗ ಅವರು ದೇಹವನ್ನು ಕೆಳಕ್ಕೆ ತರುವರು. ಇದು ಅವರ ಶಕ್ತಿಯು ಇರುವವರೆಗೂ ಮುಂದುವರಿಯುತ್ತಾ ಹೋಗುತ್ತದೆ. ಆಗ ನೋವಿನಿಂದ ಉಸಿರುಗಟ್ಟುತ್ತಾರೆ).

ಪ್ರ : ಯೇಸುವು ಇವೆಲ್ಲವನ್ನು ಏತಕ್ಕಾಗಿ ಮಾಡಿದರೆಂದು ನಿಮಗೆ ತಿಳಿದಿದೆಯಾ? (ಏಕೆಂದರೆ ಅವರು ನಮ್ಮನ್ನು ಪ್ರೀತಿಸುತ್ತಾರೆ. ಏಕೆಂದರೆ ನಮ್ಮ ಪಾಪಗಳಿಗಾಗಿ; ನಮ್ಮ ಸ್ವಾರ್ಥತೆ, ಸಿಗರೇಟು ಸೇದುವುದು, ನಮ್ಮ ಕೋಪ, ಮುಂತಾದವುಗಳಿಗಾಗಿ).

ಪ್ರ : ಒಂದು ಕೆಟ್ಟ ದಿನವನ್ನು ಕಳೆದ ನಂತರ ನಿಮ್ಮ ಬಾಯಿಂದ ಹೊರಡುವ ಮೊದಲಪದಗಳು ಯಾವುದು? (ಕೋಪದ ಕೆಟ್ಟ ಮಾತುಗಳು).

ವಿ : ಯೇಸುವು ಶಿಲುಬೆಯ ಮೇಲಿದ್ದಾಗ ಮಾತನಾಡಿದ ಮೊಟ್ಟ ಮೊದಲ ಮಾತುಗಳನ್ನು ನೋಡೋಣ.

ಪ್ರ : ವ–34ರಲ್ಲಿ, ಯೇಸುವು ಏನೆಂದು ಹೇಳಿದರು? (ತಂದೆಯೇ, ಅವರನ್ನು ಕ್ಷಮಿಸಿರಿ).

ಪ್ರ : ಅವರು ಸಾಯುವಾಗಲೂ ಯಾರ ಬಗ್ಗೆ ಯೋಚನೆ ಮಾಡುತ್ತಿದ್ದರು? (ನಮ್ಮ ಬಗ್ಗೆ–ವ–34)

ಪ್ರ : ಶಿಲುಬೆಯ ಮೇಲೆ ಯಾರು ಸಾಯಬೇಕಾಗಿತ್ತು ಯೇಸುವಾ ಅಥವಾ ನಾವಾ?

ಪ್ರ : ಅಲ್ಲಿ ಇಬ್ಬರು ಕಳ್ಳರಿದ್ದರು ಮತ್ತಾಯನು 27:44ರ ಪ್ರಕಾರ ಇಬ್ಬರು ಕಳ್ಳರು ಯೇಸುವನ್ನು ಅವಮಾನ ಮಾಡಿದರು. ಆದರೆ ಒಬ್ಬ ಕಳ್ಳನು ಮಾನಸ್ಸಂತರಗೊಂಡು ಯೇಸುವಿನ ಕಡೆಗೆ ತಿರುಗಿದನು. ಯೇಸುವು ಅವನನ್ನು ಕ್ಷಮಿಸಿದರು. ಇದು ದೇವರ ಹೃದ್ಯವನ್ನು

Scanned by CamScanner

ತೋರಿಸುತ್ತದೆ. ದೇವರು ನಮ್ಮನ್ನು ಪ್ರೀತಿಸುತ್ತಾರೆ. ಅವನನ್ನು ನರಕಕ್ಕೆ ಕಳುಹಿಸಬಹುದಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಈ ದಿನ ನೀವೂ ಸಹ ಕ್ಷಮಿಸಲ್ಪಡುವಿರಿ. ಯೇಸುವು ಪ್ರತ್ಯಕ್ಷವಾಗಿ ಇಲ್ಲಿ ಇಲ್ಲದೇ ಇದ್ದರೂ, ರಕ್ಷಣೆ ಹೇಗೆ ಹೊಂದಬೇಕೆಂದು ಬೈಬಲಿನ ಮೂಲಕ ಹೇಳಿದ್ದಾರೆ.

7. ಮೂರ್ಕನು 15:33–37

ವಿ : ಯೇಸುವು ಮರಣಹೊಂದಿರುವುದನ್ನು ನಾವು ಇಲ್ಲಿ ನೋಡುತ್ತೇವೆ. ಅವರು ನೋವಿನಿಂದ ಗೋಳಾಡುತ್ತಾರೆ. "ನನ್ನ ದೇವರೇ, ನನ್ನ ದೇವರೇ! ನನ್ನನ್ನು ಏಕೆ ಬಿಟ್ಟು ಹೋದೆ?"

ಪ್ರ : ದೇವರು ಪ್ರಾರಂಭದಿಂದಲೂ ಯೇಸುವಿನ ಜೊತೆಯಿದ್ದರೆಂದು ಬೈಬಲ್ ಹೇಳುತ್ತಿದೆ. ದೇವರು ನನ್ನಿಂದ ದೂರವಾಗಿದ್ದಾರೆಂದು ಏಕೆ ಯೇಸು ಹೇಳಿದರು (ಪಾಪದಿಂದಾಗಿ) ಪ್ರೇತ್ರನಿಗೆ ತಿರುಗಿಸಿ ಇದರ ಅರ್ಥವನ್ನು ಇನ್ನೂ ಮುಂದುವರೆಸೋಣ.

8. ಪ್ರೇತನು 2:24

ಪ್ರ : ಯೇಸುವಿನ ಶಿಲುಬೆಯ ಮೇಲಿದ್ದಾಗ ಏನನ್ನು ಹೊತ್ತುಕೊಂಡಿದ್ದರು? (ನಮ್ಮ ಪಾಪಗಳನ್ನು)

ಪ್ರ : ಪಾಪ ಮಾಡಿದಾಗ ನಿಮಗೆ ಹೇಗಾಗುತ್ತದೆ? ದು:ಖವಾಗುತ್ತಿದೆ, ನೋವಾಗುತ್ತಿದೆ)

ವಿ : ನಿಮ್ಮೆಲ್ಲಾ ಪಾಪಗಳ ಅಪರಾಧವನ್ನು ಒಂದೇ ಸಮಯ ಹೊತ್ತಾಗ ನಿಮಗೆ ಹೇಗಾಗುತ್ತದೆ. ಹಾಗದರೆ ಎಲ್ಲಾ ಜನರ ಪಾಪಗಳನ್ನು ಊಹೆ ಮಾಡಿರಿ ಎಲ್ಲಾ ಅತ್ಯಾಚಾರಗಳು, ಎಲ್ಲಾ ಸುಳ್ಳುಗಳು, ಎಲ್ಲಾ ಕೊಲೆಗಳು, ಎಲ್ಲಾ ಅನೀತಿಗಳು, ಎಲ್ಲಾ ಅಪರಾಧಗಳನ್ನು, ನೋವನ್ನು ಮತ್ತು ಸಂಕಟವನ್ನು ಯೇಸು ಎಲ್ಲಾ ಕಾಲಗಳಿಗೂ ತಾನು ತೆಗೆದುಕೊಂಡರು. ಅವರೇ ಇವೆಲ್ಲವುಗಳನ್ನು ಮಾಡಿರುವುದಾಗಿ ಭಾವಿಸಿದರು. ಏಕೆಂದರೆ ಪಾಪವು ನಮ್ಮನ್ನು ದೇವರಿಂದ ದೂರ ದೂಡುತ್ತದೆ. (ಯೆಶಾಯನು 59:1, 2, ಕೊಲೆಸ್ಸೆದವರಿಗೆ 1:21) ಅದುದರಿಂದ ಯೇಸುವು ಮರಣಹೊಂದುವಾಗ ದೇವರು ಅವರ ಜೊತೆಯಲ್ಲಿರಲಿಲ್ಲ. ಯೇಸುವು ಒಬ್ಬರೇ ಪ್ರಾಣವನ್ನು ಬಿಟ್ಟರು, ನಮ್ಮ ಪಾಪಗಳು ಅವರನ್ನು ದೇವರಿಂದ ದೂರಮಾಡಿತು.

ಪ್ರ : ಯೇಸುವು ಇವೆಲ್ಲವನ್ನು ಏತಕ್ಕಾಗಿ ಮಾಡಿದರೆಂದು ನಿಮಗೆ ತಿಳಿದಿದೆಯಾ? ಏಕೆಂದರೆ ಅವರು ನಮ್ಮನ್ನು ಪ್ರೀತಿಸುತ್ತಾರೆ, ಏಕೆಂದರೆ ನಮ್ಮ ಪಾಪಗಳಿಗಾಗಿ; ನಮ್ಮ ಕೆಟ್ಟ ಆಲೋಚನೆಗಳು, ನಮ್ಮ ಮೋಸ, ನಮ್ಮ ಕೋಪ, ಮುಂತಾದವುಗಳಿಗಾಗಿ).

ವಿ : ನಿಮಗೆ ಇನ್ನೂ ಶಿಲುಬೆಯ ಬಗ್ಗೆ ಅರ್ಥವಾಗಲು ಸಹಾಯ ಮಾಡುವ ಒಂದು ಕಥೆ ಇದೆ.

Scanned by CamScanner

ತಂದೆ / ಮಗನ ನಿರೂಪಣೆ : ತಂದೆಯಾದ ದೇವರು ಮತ್ತು ಮಗನಾದ ಯೇಸು ಕೆಳಗಿನ ಪ್ರಪಂಚವನ್ನು ನೋಡುತ್ತಿದ್ದರು. ಅವರು ನನ್ನನ್ನು ಮತ್ತು ನಿನ್ನನ್ನು ನೋಡುವರು. ಆಗ ಯೇಸು ಹೇಳಿದರು "ತಂದೆಯೇ ನಾವು ಅವರಿಗೆ ಹೇಗೆ ಸಹಾಯ ಮಾಡುವುದು? ನಾನು ಅವರನ್ನು ಪ್ರೀತಿಸುತ್ತೇನೆ. ನಾನೇನು ಮಾಡಲಿ? ಎಂದು ಕೇಳಿದರು. ದೇವರು ಹೇಳಿದರು "ಮಗನೇ ನಿನಗೆ ಅರ್ಥವಾಗುವುದಿಲ್ಲ ಅವರು ನಮ್ಮಂಗೆ ಇಲ್ಲ". ಆದರೆ ಯೇಸು ಹೇಳಿದರು "ತಂದೆಯೇ, ನಾನು ಅವರಕ್ಕಾಗಿ ಯೇನು ಮಾಡುವುದಕ್ಕೂ ಇದ್ದೀನಿ –ಎಷ್ಟವರಿಗೂ ನೀವು ನನ್ನೊಂದಿಗೆ ಇರುತ್ತಿಯೋ". ದೇವರು ಹೇಳಿದರು "ಮಗನೇ ನಿನಗೆ ಅರ್ಥವಾಗುವುದಿಲ್ಲ. ಅವರಿಗೆ ಸಹಾಯ ಮಾಡಬೇಕೆಂದರೆ ನೀನು ಅವರಿಗೆ ಸ್ವತ: ಭೂಮಿಗೆ ಹೋಗಬೇಕು, ಮನುಷ್ಯನ ಹಾಗೆ ಬದುಕಬೇಕು, ತಿನ್ನಬೇಕು, ಕೊಳಯಾಗಬೇಕು, ಆಯಾಸವಾಗಬೇಕು, ರೋಗದಿಂದ ನರಳಬೇಕು ಯೇಸು ಹೇಳಿದರು "ತಂದೆಯೇ, ನಾನು ಅವರನ್ನು ಪ್ರೀತಿಸುತ್ತೇನೆ, ನೀವು ನನ್ನ ಜೊತೆ ಇರುವವರೆಗೂ ನಾನು ಅವರಿಗಾಗಿ ಏನೇ ಮಾಡಲು ಸಿದ್ದವಾಗಿದ್ದೇನೆ". ತಂದೆ ಹೇಳಿದರು "ಮಗನೇ, ನಿನಗೆ ಅರ್ಥವಾಗುವುದಿಲ್ಲ ಜನರು ನಿನ್ನನ್ನು ನೋಡಿ ನಕ್ಕು, ತಿರಸ್ಕರಿಸುವರು. ನಿನ್ನ ಸ್ವಂತ ಕುಟುಂಬವೇ ನೀನು ಹುಚ್ಚನೆಂದು ಭಾವಿಸುವರು, ನಿನ್ನನ್ನು ಹಿಂಬಾಲಿಸುವರು ನಿನ್ನನ್ನು ಬಿಟ್ಟು ಓಡಿ ಹೋಗುವರು, ಕೊನೆಗೆ ನೀನೊಬ್ಬನೇ ಇರುವೆ". ಆದರೆ ಯೇಸು ಹೇಳಿದರು "ತಂದೆಯೇ, ನೀವು ನನ್ನ ಜೊತೆಯಲ್ಲಿದ್ದರೆ ನಾನು ಏನು ಬೇಕಾದರೂ ಅವರಿಗಾಗಿ ಮಾಡಲು ಸಿದ್ಧ". ದೇವರು ಕೆಟ್ಟವನೆಂದು, ನಿನ್ನನ್ನು ಹೊಡೆದು, ಉಗಳಿ ಚಾವಟಿಯ ಮೇಲೆ ಹಾಕಿ ಮೊಳೆಗಳಿಂದ ಹೊಡೆಯುವರು. ಯೇಸು ಹೇಳಿದರು "ತಂದೆಯೇ ನೀವು ನನ್ನ ಜೊತೆಯಲ್ಲಿದ್ದರೆ, ನಾನು ಏನು ಬೇಕಾದರು ಅವರಿಗಾಗಿ ಮಾಡಲು ಸಿದ್ಧ". ಆದರೆ ದೇವರು ಹೇಳಿದರು, "ಮಗನೇ ನಿನಗೆ ಅರ್ಥವಾಗುವುದಿಲ್ಲ. ನೀನು ಶಿಲುಬೆಯ ಮೇಲೆ ಪ್ರಾಣ ಸಂಕಟದಲ್ಲಿರುವಾಗ ಪ್ರಪಂಚದ ಪಾಪಗಳನ್ನು ಹೊತ್ತುಕೊಳ್ಳಬೇಕಾಗುತ್ತದೆ. ಅವರ ಅಪರಾದ, ಅವಮಾನ ಮತ್ತು ನೋವನ್ನು ನೀನು ಹೊರಬೇಕಾಗುತ್ತದೆ. ಅವರ ಪಾಪಗಳನ್ನು ನನ್ನಿಂದ ದೂರ ಮಾಡುತ್ತಿದೆ. ನಿನಗೆ ಬೇಡಿಕೆಯಿರುವ ಅತ್ಯುತ್ತಮವಾದಗಳಿಗೆಯಲ್ಲಿ ನಾನು ನಿನ್ನ ಜೊತೆ ಇರುವುದಿಲ್ಲ". ಮತ್ತು ಯೇಸು ಹೇಳಿದರು "ತಂದೆಯೇ, ನನಗೆ ಅರ್ಥವಾಯಿತು ನಾನು ಈಗ ಹೋಗುತ್ತೇನೆ"

ಪ್ರ : ಯೇಸುವು ನಮ್ಮನ್ನು ಎಷ್ಟು ಪ್ರೀತಿ ಮಾಡುತ್ತಾರೆಂದು ನೀವು ಇದರಿಂದ ತಿಳಿಯುವಿರಾ? *** ವೈದ್ಯಕೀಯ ವರ್ಣನೆಯನ್ನು ಓದಿರಿ***

9. ೧ ಪ್ರೇತನು 2:21–25

ಪ್ರ : ವ. 21ರ ಪ್ರಕಾರ ಯೇಸು ಇಷ್ಟೊಂದು ಭಾದೆಯನ್ನು ಏಕೆ ಅನುಭವಿಸಿದರು? (ನಮಗಾಗಿ ನಾವು ಉದಾಹರಣೆಯಾಗಬೇಕೆಂದು, ಅವರ ಹಾಗೆಯೇ ಅವರ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು). ಅವರು ಕೊನೆಯವರೆಗೂ, ಪಾಪವಿಲ್ಲದಂತ ಇದ್ದರು.

ಪ : ಯೇಸು ನಿಮಗಾಗಿ ಮಾತ್ರ ಪ್ರಾಣ ಬಿಟ್ಟಾರೆಂದು ನಿಮಗೆ ಅರ್ಥವಾಗಿದೆಯಾ? ಈ ಭೂಮಿಯ ಮೇಲೆ ನೀವೊಬ್ಬರು ಮಾತ್ರ ಜೀವಿಸಿದ್ದ ಯೇಸು ನಿನಾಗಾಗಿ ಪ್ರಾಣವನ್ನು ಬಿಡುತ್ತಿದ್ದರೆಂದು ನಿಮಗೆ ಅರ್ಥವಾಗಿದೆಯೋ?

Scanned by CamScanner

ಪ್ರ : ಕ್ರೈಸ್ತನಾಗಿ ಹಿಂಸೆಯನ್ನು ಅನುಭವಿಸಲು ಸಿದ್ಧನಾಗಿರುವೆಯಾ? ತೊಂದರೆಗಳನ್ನು ಎದುರಿಸಲು ಸಿದ್ಧನಾಗಿರುವೆಯಾ?

ಪ್ರ : ವ. 24ರ ಪ್ರಕಾರ ಯೇಸುವು ನಮ್ಮ ಪಾಪಗಳನ್ನು ಏಕೆ ಹೊತ್ತರು? (ನಾವು ಪಾಪಕ್ಕಾಗಿ ಸತ್ತ ನೀತಿಗಾಗಿ ಬದುಕಬೇಕೆಂದು).

10. ಕೋರಿಂಥದವರಿಗೆ 5:14–15

ಪ್ರ : ಯೇಸುವನ್ನು ಹೃದಯ ಪೂರ್ವಕವಾಗಿ ಹಿಂಬಾಲಿಸಲು ಪೌಲನಿಗೆ ಏನು ಒತ್ತಾಯ ಮಾಡಿತು? (ಪ್ರೀತಿ)

ಪ್ರ : ನಾವು ನಿರತರಾಗಲು ನಮ್ಮನ್ನು ಏನು ಒತ್ತಾಯ ಮಾಡುತ್ತದೆ ಎಂದು ತಿಳಿಯುವಿರಿ? ಹಂಚಿಕೊಳ್ಳಿರಿ.

ಪ್ರ : ವ. 15ರ ಪ್ರಕಾರ ಯೇಸು ಏತಕ್ಕಾಗಿ ಮರಣ ಹೊಂದಿದರು? (ನಾವು ನಿಮಗಾಗಿ ಬದುಕದೆ ಅವರಿಗಾಗಿ ಬದುಕಬೇಕೆಂದು).

ಪ್ರ : ಬಹಳ ಜನ ಯಾರಿಗಾಗಿ ಬದುಕುತ್ತಾರೆ? (ಅವರಿಗಾಗಿ)

ಪ್ರ : ಇದುವರೆಗೂ ನೀವು ಯಾರಿಗಾಗಿ ಜೀವಿಸಿದಿರಿ? (ನಮಗಾಗಿ)

ಪ್ರ : ನೀವು ಶ್ರದ್ಧಾಯುಕ್ತರಾಗಿ ಏಕೆ ಇರಬೇಕೆಂದು ನಿಮಗೆ ತಿಳಿದಿದೆಯಾ?

ಪ್ರ : ಇಲ್ಲಿ ಯೇಸು ಹೇಗೆ ಭಾದೆಯನ್ನು ಅನುಬವಿಸಿದರೆಂದು ನೀವು ನೋಡಿದಿರಿ, ನಿಮಗೆ ಏನನ್ನಿಸುತ್ತದೆ?

ಪರಿವರ್ತನೆಗೆ ಆಹ್ವಾನ : ಯೇಸುವನ್ನು ಹಿಂಬಾಲಿಸುವುದರಲ್ಲೂ, ಬದಲಾವಣೆ ಯಾಗುವುದರಲ್ಲಿಯೂ ಶ್ರದ್ಧಾಯುಕ್ತರಾಗಿರಿ, ಪ್ರಾರ್ಥಿಸಿರಿ, ಸಭೆಗೆ ಬನ್ನಿರಿ, ನೆಪಗಳನ್ನು ಹೇಳುವುದನ್ನು ನಿಲ್ಲಿಸಿರಿ.
[ಎಫೆಸದವರಿಗೆ 5:1–2]

ಬೇರೆ ಉಪಯೋಗವಾದ ವಚನಗಳು
ಎಫೆಸದವರಿಗೆ 5:1–2
ಯೆಶಾಯನು 53

Scanned by CamScanner

ಶಿಲುಬೆ ಏರಿಸುವಿಕೆಯ ವೈದ್ಯಕೀಯ ವರ್ಣನೆ
(MEDICAL ACCOUNT OF THE CRUCIFIXION)

ಗಲ್ಲಿಗೇರಿಸುವುದು, ವಿದ್ಯುತ್ ನಿಂದ ಕೊಲ್ಲುವುದು, ಅನಿಲಗೂಡಿನಲ್ಲಿ ಹಾಕುವುದು. ಈ ದಂಡನೆಗಳಿಂದ ಎಲ್ಲರೂ ಭಯಪಡುವರು. ಇವೆಲ್ಲ ಇಂದು ಸಹ ಅಗುತ್ತದೆ. ಮತ್ತೆ ನಾವು ಅದರ ಭಯಾಣಕತೆ ಮತ್ತು ನೋವು ನೆನಸಿಕೊಂಡು ನಡುಗುತ್ತೇವೆ. ಆದರೆ ನೋಡುವಾಗ ಯೇಸು ಕ್ರಿಸ್ತರ ತೀಕ್ಷಣದ ವಿಧಿ ಅಂದರೆ ಶಿಲುಬೆ ಏರುವಿಕೆ, ಹೋಲಿಸಿ ಕೊಂಡರೆ ಈ ಕಠೋರ ಸಂಕಟಗಳು ಪ್ರಮುಖ್ಯವಿಲ್ಲದೆ ಆಗಿ ಹೋಗುತ್ತದೆ.

ಇವತ್ತು ಯಾರನ್ನು ಶಿಲುಬೆಗೆ ಹಾಕುವುದಿಲ್ಲ ನಮಗೆ ಶಿಲುಬೆಯೆಂದರೆ ಆಭರಣಗಳು ಮತ್ತು ನಗ ನಾಣ್ಯಗಳು, ರಂಗು ಗಾಜಿನ ಕಿಕಿಗಳು, ಕಲ್ಪಿತ ಕತೆಗಳಾದ ಚಿತ್ರಗಳು ಮತ್ತು ಪ್ರಶಾಂತವಾದ ಮರಣ ಪ್ರಕಟಿಸು ವಿಗ್ರಹಗಳು, ಉಳಿದಿವೆ ಅಷ್ಟೇ. ಶಿಲುಬೆಯೇರಿಸಿ ರೋಮಾಪುರ ಜನರಾದ ಒಂದು ಮರಣ ದಂಡನೆ ವಿಧ. ಇದು ಅವರಿಗೆ ಒಂದು ವ್ಯಾಯಾಮದ ವಿದ್ಯಾ. ಇದನ್ನು ತಡೆವಾದ ಮರಣ ಹೊಂದಿಗೆ ಅತ್ಯುತ್ತ ಪೆಚ್ಚಿನ ನೋವು ಉತ್ತುಬ್ಬನ್ನ ಮಾಡುವಾದಾಗಿ ಎಚ್ಚರಿಕೆಯಿಂದ ಕಲ್ಪಿಸಲಾಗಿದೆ. ಆಗಬೇಕಾಗಿದ್ದ ಅಪರಾಧಿಗಳಿಗೂ ಹಿಂಜರಿಸದಾಕ್ಕಾಗಿ ಉದ್ದೇಶಿಸುವಂತೆ ಸಾರ್ವಜನಿಕರ ನೋಟವಾಗಿದೆ ಇದು ಭಯ ಪಡುವಂ ಮರಣವಾಗಿತು.

ರಕ್ತದಂತೆ ಬೇವರು :

ಲೂಕ 22:44 :

ಆತನು ಮನೋವ್ಯಥೆಯುಳ್ಳವನಗಿ ಇನ್ನು ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ ಆತ ಬೆವರು ಭೂಮಿಗೆ ಬೀಲುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿಯಲ್ಲಿತ್ತು.

ಆತನ ಬೆವರು ಅಸಾಧಾರಣಕರವಾಗಿ ತೀವ್ರವಾಗಿತ್ತು. ಏಕೆಂದರೆ ಆತನ ಮನೋಭಾವ ಸ್ಥಿತಿಯು ಅಸಾಧಾರಣಕರವಾಗಿ ತೀವ್ರವಾಗಿತ್ತು. ದಣಿವು ಹೊಂದಿಗೆ ಆಯಾಸ ಇನ್ನೆಷ್ಟು ಅವರನ್ನು ಬಲಹೀನತನವಾಗಿ ಮಾಡಿತು.

ಏಟುಗಳು :

ಇತ್ತ ಪರಿಸ್ಥಿತಿಯಲ್ಲಿ ಯೇಸು ಮೊದಲನೆಯ ಶಾರೀಕ ನಿಂದನೆಯನ್ನು ಎದುರಿಸಿದನು ಆತನು ಮುಸುಕ ಹಾಕಿಕೊಂಡಿರುವಾಗ ಗುದ್ದುಗಳು ತಲೆ, ಮುಖದ ಮೇಲೆ ಏಟು ಬಿದ್ದವು ಮುಂದಾಗಿ ಗ್ರಹಿಸಲಾರದ ಏಟುಗಳಾಗಿ ಯೇಸು ಬಹಳ ಗಾಯವಾಯಿತು, ವಿಶೇಷವಾಗಿ ಅವ ಕಣ್ಣುಗಳು ಮತ್ತು ಬಾಯಿ ಸಾಧ್ಯಷ್ಟು ಗಾಯವಾಯಿತು. ಈ ಮೋಸವಾದ ತಪಾತ್ರೆಗಳ ಶರೀಕತನಾದ ಪರಿಣಾಮಗಳು ಅಲ್ಪವಾಗಿ ತಿಳಿದುಕೊಳ್ಳಬಾರದು.

ಗಮನಿಸಿಕೊಳ್ಳಿ ಯೇಸು ಅವರನ್ನೆಲ್ಲರನ್ನು ಗಾಯವಾಗಿ, ದಣಿವಾಗಿ, ಆಯಾಸ ಸಾಧ್ಯಷ್ಟು ಗಾಭರಿಯತೆಯನ್ನು ಎದುರಿಸಿದರು.

Scanned by CamScanner

ಕೊರಡೆ ಏಟುಗಳು :

ಮುಂದಿನ 12 ಗಂಟೆಯ ಕಾಲ ಯೇಸು ಮನೋಭಾವದ ಅತ್ಯಂತ ನೋವು, ಬಧ್ಧ ಸ್ನೇಹಿತರ ನಿರಾಕಣ, ಕ್ರೂರದ ಹೊಡೆತ, ನಿದ್ರೆ ಇಲ್ಲದ ರಾತ್ರಿ, ಅದರ ನಡುವೆ ಆತನು ಅನ್ಯಾಯವಾದ ವಿಚಾರಣೆಯ ಮಧ್ಯದಲ್ಲಿ ಮೈಲುಗಳಷ್ಟು ನಡತೆ ಅನುಭವಿಸಿದರು. ಆತನು ಪಾಲೆಸ್ತಿನ್ ಯಾತ್ರೆಗಳಲ್ಲಿ ನಿಶ್ಚಿತವಾಗಿ ಪಡೆಕೊಂಡಿರುವ ಔಚಿತ್ಯವು ಪಡೆದು ಕೊಂಡರು ಸಹ ಅವರು ಯಾವ ರೀತಿಯಲ್ಲಿಯೋ ಕೊರಡೆ ಏಟುಗಳ ದಂಡನೆಯನ್ನು ಎದುರಿಸಲು ತಯಾರಾಗಿರಲಿಲ್ಲ.

ಕೊರಡೆ ಏಟುಗಳನ್ನು ತೆಗೆದುಕೊಳ್ಳುವ ಮನುಷ್ಯನು ಅವನ ಬಟ್ಟೆಗಳನ್ನು ತೆಗೆದು ಹಾಕಿ ಅವನ ಕೈಗಳನ್ನು ತಲೆಯ ಮೇಲೆ ಇರುವ ಕಂಭಕ್ಕೆ ಕಟ್ಟಿರುತ್ತಾರೆ. ಆ ಬಲಿ ವ್ಯಕ್ತಿಯ ಹಿಂದೆ ಒಬ್ಬ ಸೈನಿಕ ನಿಂತುಕೊಂಡು ಆತನ ಭುಜಗಳನ್ನು, ಬೆನ್ನನ್ನು ತೊಡೆಯನ್ನು, ಕಾಲುಗಳನ್ನು ಅಡ್ಡಲಾಗಿ ಇಟ್ಟು ಕೊರಡೆ ಏಟುಗಳಿಗೆ ಗುರಿ ಆಗುತ್ತಾನೆ. ಜಡೆಗಳಾದ ಕೊರಡೆ, ಅತಿ ಹೆಚ್ಚಿನ ನೋವು ಮರಣದಷ್ಟು ವರೆಗೆ ಬಲಿ ವ್ಯಕ್ತಿಗೆ ವಿನಾಶ ದಂಡನೆ ತರುವಂತ ರೀತಿಯಲ್ಲಿ ರೂಪಿಸಲಾಗಿದೆ, ಸುಮಾರು ಚಿಕ್ಕದಾದ ಭಾರವಾದ ಚರ್ಮದ ತೊಗಲಿನ ಚೂರುಗಳಿಂದ, ಅದೊಂದಿಗೆ ಎರಡು ಚಿಕ್ಕದಾದ ಸಿಸ್ಸೆ ಅಥವಾ ಕಬ್ಬಿಣದ ಗುಂಡುಗಳಿಂದ ಕೂಡಿಸಿರುತ್ತಾರೆ. ಕುರಿಗಳ ಎಲುಬೆಗಳ ತುಂಡುಗಳನ್ನು ಸಹ ಕೆಲವು ಸಮಯ ಸೇರಿಸುತ್ತಾರೆ.

ಕೊರಡೆ ಏಟುಗಳ ಕ್ರಿಯೆ ನಡೆಯುವಾಗ ಮೊದಲು, ಭಾರವಾದ ಚರ್ಮದ ತೊಗಲಿನ ಭಾರುಗಳಿಂದ ಮೇಲಿನ ಕಡಿತಗಳು ಆಮೇಲೆ ಒಳಗಿನ ಖಂಡಗಳು ಅಳವಾದ ಹನಿ ಉತ್ತಪ್ನವಾಗುತ್ತದೆ. ರಕ್ತ ಸೂರುವುವಿಕೆ ಹೆಚ್ಚಿಗೆ ಆಗುವುದು ಅಷ್ಟೇ ಅಲ್ಲದೆ ಸಣ್ಣ ನಾಡಿಗಳು, ನಾಡಿಗಳು ಮತ್ತೆ ಖಂಡಗಳ ಒಳಗಿರುವ ನಾಳಗಳು ಕಡಿತವಾಗುವುದು. ಚಿಕ್ಕದಾದ ಲೋಹದ ಗುಂಡುಗಳು ಮೊದಲನೆದಾಗಿ ದೊಡ್ಡದಾಗಿ, ಆಳವಾಗಿ ಗಾಯಗಳನ್ನು ಉಂಟುಮಾಡುತ್ತದೆ. ಇವು ಮುಂದಿನ ಹೊಡತೆಗಳಿಂದ ಛೇದಿಸುವುದು. ಕೊರಡೆ ಹಿಂಜರಿಸುವಾಗ ಕುರಿಯ ಎಲುಬಿನ ಚೂರುಗಳಿಂದ ಮಾಂಸ ಅತಿ ವಿಚ್ಛೇದಿಸುವುದು. ಯಾವಾಗ ಹೊಡೆತ ನಿಲ್ಲುತ್ತದೋ, ಬೆನ್ನಿನ ಚರ್ಮ ಮತ್ತು ಪೂರ್ತಿ ಜಾಗ ಬಹಳ ಗಾಯಕರವಾಗಿ ಮತ್ತೆ ರಕ್ತ ಸುರಿಯುತ್ತದೆ.

ಸುವಾರ್ತೆ ಬರಹಗಾರರೂ ಯೇಸುವಿನ ಕೊರಡೆ ಏಟುಗಳನ್ನು ಆತನ ಆಯ್ದುಕೊಂಡು ಮಾತುಗಳಲ್ಲಿ ವಿಶೇಷತೆಯಾಗಿ ಅತಿ ಕ್ರೂರವಾಗಿ ಸೂಚಿಸುತ್ತಾರೆ. ಆತನನ್ನು ಕೊರಡೆ ಏಟಿನ ಕಂಭದಿಂದ ತೆಗೆಯುವಾಗ ಆತನು ಬಿದ್ದು ಹೋಗಿರುವ ಸ್ಥಿತಿಯಲ್ಲಿ ನಿಶ್ಚಯವಾಗಿದೆ.

ಪರಿಹ್ಯಾಸೆ :

ಯೇಸುವಿಗೆ ಮುಂದೆ ಬರುವಂತ ಕಠೋರ ಸ್ಥಿತಿಯ ಎದುರಿಸುವ ಮುಂಚೆ ಅವರಿಗೆ ಮನುರುದ್ಧಾರ ಆಗಲಿಕ್ಕೆ ಸಮಯ ಕೊಡಲಪಟ್ಟಲಿಲ್ಲ. ಆತನನ್ನು ನಿಲ್ಲಿಸಿ, ನಿಲುವಂಗಿಯನ್ನು ಧರಿಸಿ, ಸೈನ್ಯಕರು ಪರಿಹ್ಯಾಸಿಸಿ ಮುಳ್ಳಿನ ರಂಭೆಗಳಿಂದ ಹೆಣೆದು. ಕಿರೀಟದಿಂದ ಧರಿಸಿ, ಮತ್ತೆ ರಾಜ ಅಧಿಕಾರ ತರಹ ಕಟ್ಟಿಗೆ ಕೋಲನ್ನು ಕೊಟ್ಟರು. ಮತ್ತೆ ಆತನ ಮೇಲೆ ಉಗುಳಿದರು, ಕಟ್ಟಿಗೆ ಕೋಲಿನಿಂದ ತಲೆಯ ಮೇಲೆ ಹೊಡೆದರು ಉದ್ದವಾದ ಮುಳ್ಳುಗಳು ಆತನ ಸೂಕ್ಷ್ಮ ನೆತ್ತಿಯೊಳಗೆ ಹೋಗಿದ್ದರಿಂದ ರಕ್ತ ಸೂರಿಕೆ ಹೆಚ್ಚಿಗೆ ಆಯಿತು. ಅದಕ್ಕಿಂತ ಭಯಂಕರವಾಗಿ ಅವರ ಮೇಲೆ

Scanned by CamScanner

ಹಾಕಿರುವ ನಿಲುವಂಗಿಯನ್ನು ತೆಗೆದಾಗ, ಅವರ ಗಾಯಗಳು ಪುನಃ ತೆಗೆದುಕೊಳ್ಳುತ್ತದೆ. ಇದಲ್ಲದೆ ಶಾರೀಕವಾಗಿ ಬಲಹೀನವಾಗಿರುವ ಯೇಸುವನ್ನು ಶಿಲುಬೆಗೆ ಹಾಕುವುದಕ್ಕೆ ತೆಗೆದುಕೊಂಡು ಹೋದರು.

ಶಿಲುಬೆಗೆ ಏರಿಸುವಿಕೆ :

ರೋಮಪುರದ ಜನರು ಉಪಯೋಗಿಸಿದ ಕಟ್ಟಿಗೆ ಕೋಲು ಒಬ್ಬ ಮನುಷ್ಯನು ಒಯ್ಯಲು ಭಾರವಾಗುತ್ತದೆ. ಅದುಲ್ಲದೆ ಬಲಿಪಶುವಿನ ಭುಜದ ಮೇಲೆ ಅಡ್ಡಲಾಗಿ ಬೇರು ಪಡಿಸಿದ ಶಿಲುಬೆಯನ್ನು ಹೊದ್ದುಕೊಂಡು ನಗರದ ಗೋಡೆಯ ಹೊರಗಿನಿಂದ ಮರಣದ ಸ್ಥಳಕ್ಕೆ ಬರಬೇಕು. (ಈ ಭಾರವಾದ ಶಿಲುಬೆಯ ಮೇಲೆ ಭಾಗ ಸ್ಥಿರವಾಗಿ ನಿಲ್ಲಿಸಲಾಗುವುದು) ಯೇಸುವಿಗೆ ಈ ಭಾರವನ್ನು ಹೊದ್ದುಕೊಂಡು ಹೋಗಲು ಕಷ್ಟವಾಯಿತು – ಆ ತುಂಡಿನ ಭಾಗ 25–125 ಪೌಂಡುಗಳು ತೂಕವಾಗಿತು. ಆ ಭಾರದಿಂದ ಆತನು ನೆಲಕ್ಕೆ ಬಿದ್ದು ಹೋದನು. ಒಬ್ಬ ಪ್ರೇಕ್ಷಕರನಿಗೆ ಆ ತುಂಡಯನ್ನು ತೆಗೆದುಕೊಳ್ಳಲು ಆಜ್ಞಾಪಿಸಲಾಯಿತು.

ಯೇಸುವಿಗೆ ಮೂಳೆಗಳು ಹೊಡೆಯುದಕ್ಕೆ ಮುಂಚೆ ಅವರಿಗೆ ಕೊಡಲಿರುವ ರಕ್ತಬೋಳ ಬೆರೆಸಿದ ದ್ರಾಕ್ಷರಸವನ್ನು ನಿರಾಕರಿಸಿದರು (ಇದು ಅವರ ನೋವುನ್ನು ಮೊದ್ದುಪಡಿಸಿರಬಹುದು) ಅವರು ತನ್ನ ಶರೀರವನ್ನು ಶಿಲುಬೆಯ ಮೇಲೆ ಹಾಕಿ, ಅವರ ಕೈಯನ್ನು ಚಾಚಿ, ಅವರ ಮಣಿಕಟ್ಟುಗಳನ್ನು ಕಟ್ಟಿಗೆ ಒಳಗೆ ಹೋಗುವಂತೆ ಮೂಳೆಗಳನ್ನು ಹೊಡೆದರು.

ಈ ದೊಡ್ಡ ಮೂಳೆಗಳು 6 ಅಂಗುಲ ಉದ್ದ, 3–8 ಅಂಗುಲ ದಪ್ಪ, ಇದರಿಂದ ಆತನ ಮಧ್ಯದ ನರವನ್ನು ಬೇರುಪಡಿಸಿತು. ಆದುದರಿಮದ ಅವರಿಗೆ ಅತಿ ಹೆಚ್ಚಿನ ನೋವು ಉಂಟಾಯಿತು.

ಅವರ ಪಾದಗಳನ್ನು ನೆಲೆಗೊಳ್ಳಿಸು ತಯಾರಿನಲ್ಲಿ ಯೇಸುವನ್ನು ಶಿಲುಬೆಯ ಮೇಲೆ ಏರಿಸಿ ಮೇಲಕ್ಕೆ ಎತ್ತಿದರು. ಮತ್ತೆ ಅವರ ಮೊಣಕಾಲುಗಳನ್ನು ಮಡಿಚಿ ಒಮದು ಪಾದವನ್ನು ಇನ್ನೊಂದು ಪಾದದ ಮೇಲೆ ಇಟ್ಟು ಒಂದು ದೊಡ್ಡ ಮೂಳೆಯಿಂದ ಹೊಡೆದರು. ಪುನಃ ಹೆಚ್ಚಿನ ನರ ಹಾನಿಯಾಗಿ, ಹೆಚ್ಚಿನ ನೋವು ಉಂಟಾಯಿತು. ಇಲ್ಲಿ ಗುರುತಿಸುವ ಮಾತು ಏನೆಂದರೆ ಮಣಿಕಟ್ಟುಗಳು ಅಥವಾ ಪಾದಗಳಿಗೆ ಆಗಿರುವ ಗಾಯ ಹೆಚ್ಚಿನ ರಕ್ತ ಸುರಿವಿಕೆ ಉಂಟು ಮಾಡಿಸಲಿಲ್ಲ. ಏಕೆಂದರೆ ಯಾವ ಪ್ರಮುಖ ನಾಳಗಳು ವಿಂಗಡಿಸಲಿಲ್ಲ. ಮರಣ ದಂಡನೆಯನ್ನು ನಡೆಸುವನು ಶ್ರದ್ಧೆಯಿಂದ ಈ ಶಿಲುಬೆಯ ಮರಣ ನಿಧನವಾಗಿ, ಕ್ರೂರವಾಗಿ ನರುಳಬೇಕೆಂದು ನಿಶ್ಚಯಿಸುತ್ತಾನೆ.

ಈಗ ಆತನು ಶಿಲುಬೆಯಲ್ಲಿ ನೆಲೆಗೊಂಡಿರುವಾಗ ಶಿಲುಬೆಯ ಭಯಂಕರವಾದ ನೋವು ಪ್ರಾರಂಭವಾಗುವುದು ಯಾವಾಗ ಮಣಿಕಟ್ಟುಗಳು ಶಿಲುಬೆಗೆ ನೆಲೆಗೊಂಡಿರುವಾಗ ಮೊಣಕೈಗಳು ಉದ್ದೇಶ ಪೂರ್ವಕವಾಗಿ ಮಡಿಚಿರುದ್ದರಿಂದ ತನ್ನ ತಲೆ ಮೇಲೆ ಇರುವ ಕೈಗಳಿಂದ ತೂಗಾಡುವನು. ಆತನ ತೂಕ ಮಣಿಕಟ್ಟಿನ ಮೂಳೆಗಳ ಮೇಲೆ ಬೀಳುತ್ತದೆ. ಸ್ಪಷ್ಟವಾಗಿ ಹೇಳಬೇಕಾದರೆ ಇದು ಒಂದು ಸಾಯಿಸಲಾರದ ನೋವು, ಆದರೆ ಅದಕ್ಕೆ ಬೇರೆ ಪರಿಣಾಮವಿದೆ. ಈ ಪರಿಸ್ಥಿತಿಯಲ್ಲಿ ಇರುವ ಮನುಷ್ಯನು ಹೊರಕ್ಕೆ ಶ್ವಾಸ ಬಿಡುವುದಾಕ್ಕಾಗಿ ಬಹಳ ಕಷ್ಟವಾಗುತ್ತದೆ.

Scanned by CamScanner

ಹೊರಕ್ಕೆ ಶ್ವಾಸ ಬಿಡುವುದಾಕ್ಕಾಗಿ ಮತ್ತೆ ಶ್ವಾಸ ಒಳಗೆ ತೆಗೆಯುದಾಕ್ಕಾಗಿ ಮೂಳೆಗಳಿಂದ ನೆಲಗೊಂಡಿರುವ ಪಾದಗಳ ಮೇಲೆರುವ ಶರೀರ ಮೇಲಕ್ಕೆ ತಳ್ಳಲು ಬಹಳ ಅಗತ್ಯವುಳ್ಳದು. ಯಾವಾಗ ಪಾದಗಳಿಂದ ಬರುವ ನೋವು ಸಹಿಸಿಕೊಳ್ಳಲಾಗದಾಗ ಆತನು ಪುನಃ ಕೈಗಳಿಂದ ತೂಗಾಡಲು ಬೀಳುವನು. ಇದರಿಂದ ಘೋರವಾದ ನೋವಿನ ಸಾಗಾಣೆ ಪ್ರಾರಂಭವಾಗುವುದು, ಕೈಗಳಿಂದ ತೂಗಾಡಲು ಬೀಳುವನು. ಇದರಿಂದ ಘೋರವಾದ ನೋವಿನ ಸಾಗಾಣೆ ಪ್ರಾರಂಭವಾಗುವುದು, ಕೈಗಳಿಂದ ತೂಗಾಡುವುದು, ಕಷ್ಟದಿಂದ ಶ್ವಾಸ ತೆಗೆಯುವುದು, ಮತ್ತೆ ಪಾದಗಳನ್ನು ಮೇಲೆ ಶರೀರವನ್ನು ಎತ್ತಲು, ಶ್ವಾಸ ಶೀಘ್ರವಾಗಿ ತೆಗೆಯಲು ಮತ್ತೆ ಕೈಗಳ ಮೇಲೆ ತೂಗಾಡುವುದು. ಇದು ನಡೆಯುತ್ತ ಇರುವುದು.

ಈ ಹಿಂಸೆ ಬರುತ್ತ ಬರುತ್ತ ತುಂಬಾ ಕಷ್ಟವಾಗುತ್ತದೆ. ಇದರಿಂದ ಯೇಸುವಿನ ಬೆನ್ನು ಶಿಲುಬೆಯ ಮೇಲೆ ಉಜ್ಜಕೊಳ್ಳುತ್ತದೆ, ಮತ್ತೆ ಖಂಡದ ಬಿಗಿತನ ಪ್ರಾರಂಭವಾಗುತ್ತದೆ. ಏಕೆಂದರೆ ಉಸಿರಾಡುವುದಕ್ಕೆ ಕಷ್ಟವಾಗುತ್ತದೆ, ಆಯಸ ಹೆಚ್ಚಿಗೆ ಆಗುತ್ತದೆ. ಯೇಸು ಈ ರೀತಿಯಲ್ಲಿ ಸುಮಾರು ಗಂಟೆಯ ಕಾಲ ಅನುಭವಿಸಿದರು. ಕೊನೆಗೆ ಮಹಾಧ್ವನಿಯಿಂದ ಪ್ರಾಣ ಬಿಟ್ಟರು.

ಮರಣದ ಕಾರಣ :

ಯೇಸು ಮರಣಕ್ಕೆ ಬಹಳ ಕಾರಣಗಳಿವೆ. ಗಾಭರಿ ಮತ್ತು ಉಸಿರು ಕಟ್ಟಿ ಬಲಿಪಶುಗಳು ಶಿಲುಬೆ ಏರಿಕೆಯಿಂದ ಮರಣ ಹೊಂದುವರು. ಆದರೆ ಯೇಸುವಿನ ಸಾವು ತೀವ್ರ ಹೃದಯಘಾತದಿಂದ ಅಂತ್ಯವಾಯಿತು. ಮಹಾಧ್ವನಿಯಿಂದ ತಟ್ಟನೆ ಶೀಘ್ರವಾಗಿ ಉಂಟಾದ ಮರಣ (ಪಿಲಾತನು ಯೇಸು ಮೊದಲೆ ಮರಣ ಹೊಂದಿದ್ದನ್ನು ಕಂಡು ಆಶ್ಚರ್ಯ ಪಟ್ಟನು)

ಈಟಿಯ ಗಾಯ :

ಮರಣ ದಂಡನೆಯನ್ನು ಮಾಡಿಸುವರು, ಅಪರಾಧಿಗಳ ಕಾಲನ್ನು ಮುರಿಯುತ್ತಿರುವಾಗಲೇ ಯೇಸು ಮರಣ ಹೊಂದಿದರು, ಬದಲಾಗಿ ಒಂದು ಸಿಪಾಯಿ ಯೇಸುವಿನ ಪಕ್ಕೆಲುಬನ್ನು ಈಟಿಯಿಂದ ಇರಿದನು ಎಂದು ಯೋಹಾನ ಸುವಾರ್ತೆಯಲ್ಲಿ ಸೂಚಿಸಿದರು.

ಈ ಗಾಯದಿಂದ ರಕ್ತ ನೀರವೂ ಹೊರಕ್ಕೆ ಚುಮ್ಮಿತು. ಇದುದರಿಂದ ಹೃದಯ ಚೀಲ ಹರಿದು ನೀರಿನ ರಕ್ತ ಹೊರಕ್ಕೆ ಬಂಡು.

ಕೊನೆದಾಗಿ

ಸುವಾರ್ತೆಗಳಲ್ಲಿ ಕೊಟ್ಟಿರುವ ವಿವರಿಸುವ ವರ್ಣನೆಗಳು ಮತ್ತೆ ಶಿಲುಬೆಯ ಏರಿಕೆಯ ಇತಿಹಾಸದ ದೃಷ್ಟಾಂತ ನಮ್ಮನ್ನು ವೈದ್ಯಕೀಯವಾಗಿ ಜ್ಞಾನದಿಂದ ವಾಕ್ಯಗಳ ಹಕ್ಕುಗಳಿಂದ ಯೇಸು ಶಿಲುಬೆಯ ಮೇಲೆ ಮರಣ ಹೊಂದಿದರು ಎಂದು ಆದರ ಪಡಿಸಿದೆ.

ದೇವರು – God

Scanned by CamScanner

8. ಪಶ್ಚಾತ್ತಾಪ

ಉಪಯೋಗಿಸುವ ವಚನಗಳು

1. ಲೂಕ 13:5
2. ಅಪೋಸ್ತಲರ 26 : 20
3. ಮತ್ತಾಯನು 5:28–30
4. ೨ ಕೊರಿಂಥದವರಿಗೆ 7:10
5. ಎಫೆಸದವರಿಗೆ 4:22–32
6. ಅಪೋಸ್ತಲರ 2:38
7. ಕೀರ್ತನೆಗಳು 51:1–17

ಉದ್ದೇಶ :

ದಯೆಯನ್ನು ನಂಬಿದ ನಂತರ, ನಾವು ಮಾಡಿದ ಪಾಪದ ಕ್ಷಮೆಗೋಸ್ಕರ ಪಶ್ಚಾತ್ತಾಪ ಹೊಂದಿ ದೀಕ್ಷ ಸ್ನಾನ ಹೊಂದುವುದು ದೈವಿಕವಾದ ಗುಣ (ಅಪೋಸ್ತಲರ 2:36–38) ಗ್ರೀಕ್ ಭಾಷೆಯಲ್ಲಿ 'ಪಶ್ಚಿತಾಪ" ಮಾತುಗೆ "ಮೆಟನೋಯ" ಅನುತ್ತಾರೆ. ಇದರ ಅರ್ಥ "ಒಂದೇ ಮನಸ್ಸಿನಿಂದ ಅಥವಾ ಉದ್ದೇಶದಿಂದ ಬದಲಾಗುವುದು".

ಪ್ರ : ನೀವು ಹೇಗಿದ್ದೀರಾ? ನಿಮ್ಮ ಪಾಪಗಳನ್ನು ಅರಿಕೆ ಮಾಡಿದ್ದರ ಬಗ್ಗೆ ಹೇಗೆ ಅನ್ನಿಸುತ್ತದೆ? ಇನ್ನೇನಾದರೂ ಅರಿಕೆ ಮಾಡುವುದು ಇದೆಯಾ?

ವಿ : ಇವತ್ತು ನಾವು ಪಶ್ಚಾತ್ತಾಪದ ಬಗ್ಗೆ ಓದೋಣ. ನಿಮಗೆ ಪಶ್ಚಾತ್ತಾಪದ ಅರ್ಥ ತಿಳಿದಿದೆಯಾ? ಅದರ ಅರ್ಥ "ಹಿಂದಿರುಗಿ ಹೋಗಬೇಕೆಂದು" ನೀವು ಮಾಡಬೇಕಾಗಿರುವ ಕಾರ್ಯ ಅದೇ ಪಾಪ ಅರಿಕೆ ಮಾಡುವುದು ಮಾತ್ರ ಸಾಲದು, ಆ ಪಾಪದಿಂದ ತಿರುಗಿಕೊಳ್ಳುವುದು (ಪಶ್ಚಾತ್ತಾಪ ಪಡುವುದು) ಒಂದು ಅನಿಸಿಕೆ ಎಂದು ಹಲವರು ಯೋಚಿಸುತ್ತಾರೆ ನಿಜವಾಗಿಯೂ ನಮ್ಮ ಪಾಪದ ಬಗ್ಗೆ ಕೆಟ್ಟದೆನಿಸುವುದು ಪಶ್ಚಾತ್ತಾಪ ಕಲಿಸುತ್ತದೆ. ಆದ್ದರಿಂದ ನಿಜವಾದ ಪಶ್ಚಾತ್ತಾಪದ ಬಗ್ಗೆ ಇಂದು ವೇದವಾಕ್ಯದಾದ ಕಲಿಯೋಣ.

1. ಲೂಕ 13:5

ದೇವರು ನಮಗೆ ಎರಡೇ ಮಾರ್ಗಗಳನ್ನು ಸೂಚಿಸುತ್ತಾಎ.

1. ಪಶ್ಚಾತ್ತಾಪ ಪಡುವುದು ಇಲ್ಲವೆ 2. ನಾಶವಾಗುವುದು.

2. ಅಪೋಸ್ತಲರ 26:20

ಅ. ಪೌಲ ಹೋದ ಕಡೆಯಲ್ಲೆಲ್ಲಾ ಪಶ್ಚಾತ್ತಾಪದ ಬಗ್ಗೆ ಸಾರಿದ.

ಆ. ಪಾಪವನ್ನು ಬಿಡುವಿದ್ದಲ್ಲವೇ ದೇವರ ಕಡೆಗೆ ಹಿಂದಿರುಗಿಕೊಳ್ಳುವುದೆ ನಿಜವಾದ ಪಶ್ಚಾತ್ತಾಪ.

ಇ. ನಿಮ್ಮ ಕಾರ್ಯಗಳೀಂದಲೇ ದೇವರಿಗೂ, ಇತರರಿಗೂ ನೀವು ಪಶ್ಚಾತಾಪದ ಪಟ್ಟಿದ್ದೀರೆಂದು ತಿಳಿಯುತ್ತದೆ.

Scanned by CamScanner

[ಮಾತುಗಳಲ್ಲಿ, ಆಲೋಚನೆಗಳಲ್ಲಿ ಮತ್ತು ಕ್ರಿಯೆಗಳಲ್ಲಿ ಬದಲಾವಣೆ]

ಪಶ್ಚಾತ್ತಾಪದ ಚಿತ್ರ :



ಪಶ್ಚಾತ್ತಾಪ = ಪಾಪದಿಂದ ತಿರುಗಿಕೊಂಡು ಮತ್ತೆ ದೇವರ ಕಡೆ ತಿರುಗಿಕೊಳ್ಳುವುದು.

3. ಮತ್ತಾಯನು 5:28–30

ಅ. ನೀವು ಬದಲಾಗಬೇಕಾದರೆ ಪಾಪವನ್ನು ಪಾಪವೆಂದು ನೋಡಬೇಕು ಸಣ್ಣ ಪಾಪ ಅಥವಾ ದೊಡ್ಡ ಪಾಪವಲ್ಲ ಮೋಹ ಸಹ ವ್ಯಭಿಚಾರವಾಗುತ್ತದೆ.

ಆ. ನಾವು ನಮ್ಮ ಪಾಪವನ್ನು ದ್ವೇಷಿಸಿದರೆ ಮಾತ್ರ ಬದಲಾಗಲು ಸಾಧ್ಯ ನೀವು ನಿಜವಾಗಿಯೂ ನಿಮ್ಮ ಎಲ್ಲಾ ಪಾಪಗಳನ್ನು ದ್ವೇಷಿಸುತ್ತೀರಾ? ನಿಮ್ಮ ಜೀವನದಲ್ಲಿ ನೀವು ದ್ವೇಷಿಸದೇ ಇರುವಂತಹ ಪಾಪ ಯಾವುದಾದರೂ ಇದೆಯಾ?

ಎಚ್ಚರಿಕೆ : ಸ್ವಲ್ಪ ಸಮಯಕ್ಕೆ ನಿಮಗೆ ಯಾವುದಾದರೂ ಪಾಪ ಇಷ್ಟವಾದಲ್ಲಿ ಅದರಿಂದ ನೀವು ತೆರೆದ ಹೃದಯದಿಂದ ಮಾತನಾಡಿದರೆ ನಿಮಗೆ ಬದಲಾಗಲು ಸಹಾಯ ದೊರೆಯುತ್ತದೆ.

4. ೨ ಕೊರಿಂತದವರಿಗೆ 7:10

ನಮಗೆ ಯಾವಾಗಲೂ ನಮ್ಮ ಪಾಪದ ಬಗ್ಗೆ ಕೆಟ್ಟದೆನಿಸುತ್ತದೆ. ಆದರೆ ವೇದವಾಕ್ಯವೂ ನಮ್ಮ ಪಾಪದ ಬಗ್ಗೆ ಎರಡು ತರಹದ ದು:ಖಗಳಿವೆ ಎನ್ನುತ್ತದೆ.

1. ದೇವರ ಚಿತ್ತಾನುಸಾರವಾಗಿರುವ ದು:ಖವೆಂದರೆ, ನಮ್ಮ ಪಾಪಗಳ ಬಗ್ಗೆ ಕೆಟ್ಟದೆನಿಸಿ ಅದರಿಂದ ನಿಜವಾದ ಮತ್ತು ಕೊನೆಯತನಕ ಉಳಿಯುವ ಬದಲಾವಣೆಗಳು ನಾವು ಪುನ: ಆ ಪಾಪಗಳನ್ನು ಮಾಡುವುದಿಲ್ಲ.
2. ಲೋಕಾನುಸಾರವಾಗಿರುವ ದು:ಖವೆಂದರೆ ನಿಮ್ಮ ಪಾಪಗಳ ಬಗ್ಗೆ ಕೆಟ್ಟದೆನಿಸಿದರೂ, ನೀವು ಬದಲಾವಣೆಯಾಗುವುದಿಲ್ಲ ನೀವು ಪುನ: ಅದೇ ಪಾಪವನ್ನು ಮಾಡುತ್ತೀರೆ ಇದು ಮರಣವನ್ನುಂಟು ಮಾಡುತ್ತದೆ (ನರಕ).

ನಿರೂಪಣೆ

ಟಿಕೇಟು ಇಲ್ಲದೆ ಸಿಕ್ಕಿಹಾಕಿಕೊಳ್ಳುವುದು.

5. ಎಫೆಸದವರಿಗೆ 4:22–32

ಈ ವಚನದಲ್ಲಿ ಪ್ರತ್ಯೇಕವಾಗಿ ನಾವು ನಮ್ಮ ಹಿಂದಿನ ಕೆಟ್ಟನಡತೆ ದುರಾಸೆ ಮತ್ತು ಕೆಟ್ಟ ಸ್ವಭಾವವನ್ನು "ತೆಗೆದು ಹಾಕಿ" ಬಿಡಬೇಕೆಂದು ಹೇಳುತ್ತದೆ.

ನಮ್ಮ ಹಿಂದಿನ ದುರಾಶೆಗಳು ಮತ್ತು ಕೆಟ್ಟ ಅಭ್ಯಾಸಗಳನ್ನು ತೆಗೆದು ಹಾಕಿದರೆ ಅಥವಾ ನಿಲ್ಲಿಸಿದರೆ ಸಾಕಾಗುವುದಿಲ್ಲ. ನಾವು ಹೊಸಬರಾಗಿ "ಇರಲು" ತಯಾರಾಗಬೇಕು ಇನ್ನೊಂದು ಪದದಲ್ಲಿ ಹೇಳಬೇಕಾದರೆ, ನಾವು ಹಳೇಯ ಅಭ್ಯಾಸಗಳನ್ನು ತೆಗೆದು, ಆ ಜಾಗದಲ್ಲಿ ಹೊಸ ನೀತಿ

Scanned by CamScanner

ಅಭ್ಯಾಸಗಳನ್ನು ಅಥವಾ ಮನೋವೃತ್ತಿಯನ್ನು ಪಾಲಿಸುವುದು ಕೆಟ್ಟಾ ಆಲೋಚನೆಗಳನ್ನು ತೆಗೆದು ಸತ್ಯನುಗುಣವಾದ ಆಲೋಚನೆಗಳನ್ನು ಯೋಚಿಸುವುದು [ನೂತನ ಸ್ವಭಾವವನ್ನು ತುಂಬುವುದು]

ಉದಾ : ವಚನ 25ರಲ್ಲಿ – ಅಸತ್ಯ ಅಥವಾ ಸುಳ್ಳಾಡುವುದನ್ನು ಬಿಟ್ಟು ಸತ್ಯವೆನ್ನೇ ಹೇಳುವುದು.

ವಚನ 28ರಲ್ಲಿ – ಕಳವು ಮಾಡುವುದು [ಹಳೇ ಅಭ್ಯಾಸ] ಅದನ್ನು ಬಿಟ್ಟು ಒಳ್ಳೆಯ ಉದ್ಯೋಗವನ್ನು ಮಾಡುವುದು ಮತ್ತು ಕಷ್ಟದಲ್ಲಿ ಇರುವರಿಗೆ ತಮ್ಮಿಂದ ಆದರೆ ಸಹಾಯ ಮಾಡುವುದು.

ವಚನ 29ರಲ್ಲಿ – ಕೆಟ್ಟ ಮಾತುಗಳನ್ನು ತೆಗೆದು ಹಾಕಿ, ಮತ್ತೊಬ್ಬರಿಗೆ ಒಳ್ಳೆಯದಕ್ಕೂ ಮತ್ತು ಅವರ ಗೆಳತನವನ್ನು ಬೆಳಿಸುವುದಕ್ಕೆ ಒಳ್ಳೆಯ ಹಿತ ನುಡಿಗಳನ್ನು ಆಡಬೇಕು.

ವಚನ 31–32ರಲ್ಲಿ – ಎಲ್ಲಾ ದ್ವೇಷ, ಕಹಿ ಅನುಭವಗಳನ್ನು ಕೋಪ, ಕ್ರೋಧ, ಚಾಡಿ ಹೇಳುವುದನ್ನು, ಕಳಹ ದೂಷಣೆಗಳನ್ನು ತೆಗೆದು ಬಿಟ್ಟು ಕರುಣೆಯುಳ್ಳವರಾಗಿಯೂ, ಉಪಕಾರಿಗಳಾಗಿಯೂ ಮತ್ತು ಕ್ಷಮಿಸುವರಾಗಿಯೂ ಇರಬೇಕು. ಈ ರೀತಿಯಾಗಿ ನಾವು ಬದಲಾಗಬೇಕು.

ಈಗ, ನಾನು ಪಶ್ಚಾತ್ತಾಪದ ನಂತರ ಏನು ಮಾಡಬೇಕು?

6. ಅಪೋಸ್ತಲರ 2:38

ವಿ : ಮೊದಲು ಮನಸ್ಸಾಂತರಗೊಂಡು ನಂತರ ದೀಕ್ಷಾಸ್ನಾನ ತೆಗೆದುಕೊಳ್ಳಬೆಕು ಅದಕ್ಕೆ ಈಗ ನೀವು ಸಿದ್ಧವಾಗಿದ್ದೀರಾ?

7. ಕೀರ್ತನೆಗಳು 51:1–17

ಈ ಕೀರ್ತನೆಯನ್ನು, ಪಾಠ ಆದನಂತರ, ಒಂದು ಪ್ರಾರ್ಥನೆ ರೂಪದಲ್ಲಿ ಓದಿ ಮತ್ತೆ ಅವರನ್ನು ಪ್ರೋತ್ಸಾಹಿಸಿ ದೇವರ ಮುಂದೆ ತನ್ನ ಪಾಪಗಳನ್ನು ದಾವೀದನಾಗಿ ಕೂಡಿಸಿಕೊಳ್ಳಬೇಕು. ನಾವು ಪ್ರಾರ್ಥನೆ ಮಾಡೋಣ.

ಮಿಗಿಲಾದ ಪಶ್ಚಾತ್ತಾಪದ ಪಾಠ

ಲೂಕ 13:5

ದೇವರು ನಮಗೆ ಎರಡೇ ಮಾರ್ಗಗಳನ್ನು ಸೂಚಿಸುತ್ತಾರೆ (1) ಪಶ್ಚಾತ್ತಾಪ ಪಡುವುದು ಇಲ್ಲವೆ (2) ನಾಶವಾಗುವುದು ಸ್ವರ್ಗ ಇಲ್ಲವೇ ಕತ್ತಲಿನಲ್ಲಿದ್ದೀರಾ? ನೀವು ಪಶ್ಚಾತ್ತಾಪ ಪಡದಿದ್ದರೆ ನಾಶವಾಗುತ್ತೀರ ನಿಮಗೆ ಯಾವ ಮಾರ್ಗ ಬೇಕು?

ಮಾನಸಾಂತರವಿಲ್ಲದಿದ್ದರೆ ಏನಾಗುತ್ತದೆ?

1. ಅಪರಾಧವನ್ನು ನೆನಸಿಕೊಂಡರೆ ಸಾಲದು ಅಪೋಸ್ತಲರ 24:25

- ಫೇಲಿಕ್ಸ್ ತನ್ನ ಅಪರಾಧವನ್ನು ನೆನಸಿಕೊಂಡ ಆದರೆ ಮಾನಸಾಂತರ ಹೊಂದಲಿಲ್ಲ.

Scanned by CamScanner

- ನಾವು ನಮ್ಮ ಪಾಪಗಳನ್ನು ನೆನಸಿನೋಡುತ್ತೇವೆ. ಇದು ಮಾನ್ಸಾಂತರದಿಂದ ನೆನಸುತ್ತೇವೋ ಅಥವಾ ಸುಮ್ಮನೆ ನೆನಸುತ್ತೇವೋ.

2. ನಿನ್ನ ಪಾಪಕ್ಕೆ ದು:ಖ ಪಟ್ಟರೆ ಸಾಲದು ೨ ಕೊರಿಂಥ 7:10

- ಕೆಲವು ಜನರು ತಾವು ಮಾಡಿದ ಪಾಪಕ್ಕೆ ಪ್ರಾಮುಖ್ಯತೆ ಕೊಸಕರ ದು:ಖಿಸುತ್ತಾರೆ. ಅಥವಾ ಅವರ ಅಪರಾಧಕ್ಕೆ ಸಿಕ್ಕಿ ಬಿದ್ದಾಗ.
- ಕೆಲವು ಜನರು ತಾವು ಮಾಡಿದ ಪಾಪಕ್ಕೆ ದು:ಖಿಸುವುದಿಲ್ಲ ಆದರೆ ಅವರು ಮಾಡಿದ ಪಾಪಕ್ಕೆ ಸಿಕ್ಕಿ ಬಿದ್ದಾಗ ಸಿಕ್ಕುವ ದಂಡನೆಗೆ ದು:ಖಿಸುತ್ತಾರೆ.

3. ಒಳ್ಳೆಯ ಮನುಷ್ಯನ ತರ ಇರಲು ಪ್ರಯತ್ನಿಸುವುದು ಸಾಲದು – ಯೆಶಾಯ 64:6.

- ಕೆಲವು ಜನರು ತನ್ನ ಶಕ್ತಿಯಿಂದ ಒಳ್ಳೆಯ ಮನುಷ್ಯನಾಗಲು ಪ್ರಯತ್ನಿಸುತ್ತಾನೆ ಮತ್ತು ಜೀವನವನ್ನು ತನ್ನಿಷ್ಟಕ್ಕೆ ಬದಲಾಯಿಸುತ್ತಾನೆ.
- ಕೆಲವು ಸ್ವಯಂ ಪ್ರಯತ್ನವೇ ಸ್ವಯಂ ನ್ಯಾಯಕ್ಕೆ ಬೇರು, ಅಂದರೆ ಈ ರೀತಿಯಾಗಿ ದೇವರನ್ನು ಒಪ್ಪಿಸಲು ಸಾಧ್ಯವಿಲ್ಲ ಮತ್ತುಪಾಪದಿಂದ ಮಾನಸಾಂತರ ಹೊಂದಲು ಆಗುವುದಿಲ್ಲ.

4. ಧರ್ಮನಿಷ್ಠೆ ಆದರೆ ಸಾಲದು – ಲೀಕ 18:9–14

- ಪರಿಸಾಯರು ತಮ್ಮ ನಡತೆಯಲ್ಲಿಯೂ ಮತ್ತು ಅಭ್ಯಾಸ ಮಾಡುವುದರಲ್ಲಿಯೂ ಮತ್ತು ಪ್ರಾರ್ಥನೆ ಮಾಡುವುದರಲ್ಲಿಯೂ ಮತ್ತು ಎಲ್ಲ ಧರ್ಮ ಸಭೆಯ ಕೂಟದಲ್ಲಿ ಭಾಗವಹಿಸುವುದರಲ್ಲಿಯೂ ಮತ್ತು ದಶಮಾಂಶ ಕೊಡುವುದರಲ್ಲಿಯೂ ನಿರತರಾಗಿದ್ದರು. ಆದರೆ ಯಾವ ಕಾರಣದಿಂದಲೂ ಮಾನಸಂತರ ಹೊಂದಲಿಲ್ಲ.

5. ಸತ್ಯವನ್ನು ತಿಳಿದರೆ ಸಾಲದು – ಯಾಕೋಬನು 2:19–20

- ಬುದ್ಧಿ ಶಕ್ತಿಗೋಸ್ಕರ ನಮ್ಮದೇ ಆದ ಸತ್ಯ ತಿಳಿವಳಿಕೆಯಾ ಒಂದು ನಿಜವಾದ ಜೀವನದಲ್ಲಿ ಸತ್ಯವಾಗಿ ಜೀವಿಸಲು ಅವಶ್ಯಕತೆಗೆ ಭರವಸೆ ಕೊಡಲು ಸಾದ್ಯವಿಲ್ಲ.
- ತಲೆಯಿಂದ ನಂಬುವುದು ಮತ್ತು ಹೃದಯದಿಂದ ನಂಬುವುದು ವ್ಯತ್ಯಾಸವಿದೆ [ರೋಪೂಪುರ 10:9–10]

ನಿಜವಾದ ಪಶ್ಚಾತ್ತಾಪವೆಂದರೆ ಏನು?

1. ನಮ್ಮ ಪಾಪಕ್ಕಾಗಿ ದೇವರ ದೃಷ್ಟಿಯಲ್ಲಿ ದು:ಖಿಸುವುದು ಕೀರ್ತನೆಗಳು 51:1–4, ಕೀರ್ತನೆಗಳು 38:8

- ನಿಜವಾದ ಪಶ್ಚಾತ್ತಾಪ ತನೊಂದಿಗೆ, ಇಲ್ಲವೆ ಬೇರೆಯವರೊಂದಿಗೆ ದು:ಖಿಸಿದೆ, ಮೊದಲನೆಯದಾಗಿ ದೇವರೊಂದಿಗೆ ತೋರಿಸುವ ನಿಜವಾದ ದು:ಖ.

Scanned by CamScanner

2. ನಿಮ್ಮ ಪಾಪಗಳ ಬಗ್ಗೆ ಸತ್ಯವಾಗಿ ತಿಳಿಸುವುದು ಕೀರ್ತನೆಗಳು 32:5, ೧ ಯೋಹಾನನು 1:9, ಯೋಕೋಬನು 5:16.

3. ನಿಮ್ಮ ಪಾಪಗಳನ್ನು ವೈರಾಗ್ಯಸುವುದು ಜ್ಞಾನೋಕ್ತಿಗಳು 28:13

4. ಪಾಪವನ್ನು ದ್ವೇಷಿಸುವುದು – ಮತ್ತಾಯನು 5:29–30

5. ಸಾಧ್ಯವಾದರೆ, ಇತರಿಗೆ ನಾನು ಏನು ತಗೊಂಡು ಇದ್ದಿನೋ, ಅದನ್ನು ಅವರಿಗೆ ಹಿಂತಿರಿಗಿಸುವುದು – ಲೂಕ 19:8

ಪಶ್ಚಾತ್ತಾಪದಲ್ಲಿ ಪರಿಣಾಮವೇನು?

1. ಪಾಪದಿಂದ ಬದಲಾಗುವುದು – ಗಲಾತ್ಯದವರಿಗೆ 5:19–21, ಎಫೆಸದವರಿಗೆ 5:5, ಜೆಕರ್ಯ 1:4.
2. ಲೋಕದಲ್ಲಿರುವ ಜೀವನದಿಂದ ಬದಲಾಗುವುದು – ಯೋಹಾನನು 2:15, ಯಾಕೋಬನು 4:4
3. ತನ್ನಿಂದಲೇ ಬದಲಾಗುವುದು ೨ ಕೊರಿಂಥದವರಿಗೆ 5:15, ಲೂಕ 14:26, ಅಪೋಸ್ತಲರ 26:20, ಜೆಕರ್ಯನು..1:3
4. ದೇವರ ಕಡೆಗೆ ಬದಲಾಗುವುದು – ಅಪೋಸ್ತಲರ 20:21, ಅಪೋಸ್ತಲರ 26:20, ಜೆಕರ್ಯನು 1:3.
5. ಹಿಂದಿನ ನಡತೆಯನ್ನು ತೆಗೆದು ಹಾಕುವುದು ಮತ್ತು ಹೊಸ ಸ್ವಭಾವಕ್ಕೆ ಬದಲಾಗುವುದು 0 ಎಫೆಸದ 4:22–33 ಕೊಲೊಸ್ಸೆದವರಿಗೆ 35–14

ಅಂತ್ಯ : ಅಪೋಸ್ತಲರ 2:38

ವಿ : ಮೊದಲು ಮಾನಸಾಂತರ ಮತ್ತು ಜ್ಞಾನಸ್ನಾನ ಹೊಂದುವುದು, ಆಗ ಮಾತ್ರ ನಮ್ಮ ಪಾಪಗಳಿಂದ ಕ್ಷಮಾಪಣೆ ಸಿಕ್ಕುವುದು, ಇದಕ್ಕೆ ನೀವು ತಯಾರಾಗಿದ್ದೀರ?

ಪಶ್ಚಾತ್ತಾಪ ಹೊಂದುವ ಜನರಿಗೆ ಸಹಾಯವಾಗಲು ಉಪಯೋಗಿಸುವ ವಚನಗಳು

ಈ ವಚನಗಳು ಪಶ್ಚಾತ್ತಾಪ ವಿಷಯವನ್ನು ತಿಳಿಸುವಾಗ ಉಪಯೋಗಿಸುವುದು. ನಮ್ಮ ಗುರಿ ಅವರ ಕೆಲವು ಪಾಪದಿಂದ ಬೇರೆಯವರನ್ನು ದು:ಖಪಡಿಸಿದನ್ನು ಮತ್ತು ದೇವರನ್ನು ದು:ಖಪಡಿಸಿದನ್ನು ತೋರಿಸಬೇಕು. ಈ ಪಾಠದಿಂದ ಅವರ ಪಾಪದಿಂದ ಅವರ ಸ್ವಭಾವ ಎಷ್ಟು ಕೆಟ್ಟದಾಗಿದೆಯೆಂದು ತೋರಿಸಿ ಸಹಾಯ ಮಾಡಬೇಕು ಮತ್ತು ಆ ಕೆಟ್ಟ ಸ್ವಭಾವದಿಂದ ಬದಲಾಗಲು ಆಕ್ಷೇಪಿಸುವುದು.

1. ಯಾರು ಮಾನಸಾಂತರ ಹೊಂದಲು ನಿರಾಕರಿಸುವವರಿಗೆ-ರೋಮಪುರದವರಿಗೆ 2:4
2. ಯಾರು ಲೋಕದ ಜೀವನ ಪ್ರೀತಿಸುವವರಿಗೆ-ಯಾಕೋಬನು 4:4
3. ಯಾರು ಹಣವನ್ನು ಪ್ರೀತಿಸುವವರಿಗೆ-ಲೂಕ 16:13–15, ಜ್ಞಾನೋಕ್ತಿಗಳು 15:27

Scanned by CamScanner

4. ಕ್ಷಮಾಪಣೆ ಮಾಡಲು ಕಷ್ಟಪಡುವವರಿಗೆ-ಮತ್ತಾಯನು 6:14–15
5. ಗರ್ಭಪಾತ – ಯೆರೆಮಿಯನು 1:5, ಕೀರ್ತನೆಗಳು 139:13–16
6. ಹೆಂಗಸರ ಸಹವಾಸ / ಹೆಂಗಸರ ಮೇಲೆ ಇಚ್ಛೆ– ೨ ತಿಮೋಥಿಯನು 3:6–7, ಎಫೆಸದವರಿಗೆ 5:15–17.
7. ಯಾರು ಸೋಮಾರಿತನದಲ್ಲಿರುವವರಿಗೆ / ಯಾರು ಕೆಲಸ ಮಾಡಲು- ಇಷ್ಟವಿಲ್ಲದವರಿಗೆ–೨ ಥೆಸಲೋನೀಕದವರಿಗೆ 3:10
8. ಮಕ್ಕಳ ಮೇಲೆ ಅತ್ಯಾಚಾರ ಮಾಡುವವರಿಗೆ–ಮೂರ್ಕ 9:36, 42, ಲೂಕ 17:1–2
9. ಸಲಿಂಗಕಾಮವುಳ್ಳವರಿಗೆ–೧ ಕೊರಿಂಥದವರಿಗೆ 6:9
10. ಸ್ವಯಂ ನ್ಯಾಯ ಪಡಿಸುವವರಿಗೆ / ಬೇರೆಯವರನ್ನು ಕೀಳಾಗಿ ನೋಡುವುದು–ಲೂಕ 18:9–14.
11. ಅಹಂಕಾರ – ಪಿಲಿಪ್ಪಿಯವರಿಗೆ 2:3, ಜ್ಞಾನೋಕ್ತಿಗಳು 13:10.
12. ಬೇರೆಯವರಿಂದ ಹೊಟ್ಟೆಕಿಚ್ಚು – ೨ ತಿಪೋಥಿಯನು 3:1–5
13. ಬೇರೆಯವರಿಂದ ಕಹಿತನ, ದ್ವೇಷತನ – ಇಬ್ರಿಯರಿಗೆ 12:15, ಕೊಲೊಸ್ಸೆಯವರಿಗೆ 3:5–8
14. ಮದುವೆಯ ವಿಷಯದಲ್ಲಿ – ಕೊಲೊಸ್ಸೆಯದವರಿಗೆ 3:18, ಎಫೆಸದವರಿಗೆ 5:22–31
15. ವಂಚನೆ–ಜ್ಞಾನೋಕ್ತಿಗಳು 15:4
16. ಹುಡುಗನ / ಹುಡುಗಿಯ ಸಂಬಂಧ–ಎಫೆಸದವರಿಗೆ 5:3

Scanned by CamScanner

9. ಧೀಕ್ಷಾಸ್ನಾನ

ಉಪಯೋಗಿಸುವ ವಚನಗಳು

1. ಅಪೋಸ್ತಲರ 2:36–41
2. ಯೋಹಾನನು 3:3–5
3. ಮತ್ತಾಯನು 28:18–20
4. ರೋಮಪ್ರರದವರಿಗೆ 6:3–7
5. ೧ ಪ್ರೇತನು 3:20–21
6. ಅಪೋಸ್ತಲರ 8:26–39
7. ಅಪೋಸ್ತಲರ 16:13–15
8. ಅಪೋಸ್ತಲರ 22:1–16

ಉದ್ದೇಶ :

ಶಿಲುಬೆ ಬಗ್ಗೆ ಪ್ರಚಾರ ಮಾಡಿದನಂತರ, ಪ್ರೇತನು ತನ್ನ ಕೇಳುವವರನ್ನು ಪಶ್ಚಾತ್ತಾಪ ಪಡಿಲಿಕ್ಕೆ ಮತ್ತು ಪಾಪ ಪರಿಹಾರ ವಾಗುವುದಕ್ಕಾಗಿ ಧೀಕ್ಷಾಸ್ನಾನ ಹೊಂದಬೇಕೆಂದು ಕರೆ ಮಾಡುತ್ತಾರೆ. (ಅಪೋಸ್ತಲರ 2:38) ಈ ಪಾಠದಿಂದ ಕ್ರೈಸ್ತ ಮಾಡಿರುವ ತ್ಯಾಗಕ್ಕೆ ಮತ್ತು ಧೀಕ್ಷಾಸ್ನಾನದಿಂದ ನಮಗೆ ಬರುವ ಪಾಪ ಕ್ಷಮಾಪಣೆ ಮಧ್ಯದಲ್ಲಿ ಒಂದು ಸಂಬಂಧ ಜೋಡಣೆ ಸ್ಥಾಪಿಸಲು ಸಹಾಯ ಮಾಡುತ್ತದೆ.

1. ಅಪೋಸ್ತಲರ 2:36–41

ಪೇತ್ರನು ಉಪದೇಶಿಸಿದ್ದರು ಒಬ್ಬನು ಮೊದಲು ಯೇಸು ಕರ್ತನು ಮತ್ತು ಕ್ರೈಸ್ತನೆಂದು ವಿಶ್ವಾಸಿಸಬೇಕು ಮತ್ತು ಸ್ವೀಕರಿಸಬೇಕು. ಒಬ್ಬನು ಯೇಸುವಿನ ಶಿಲುಬೆ ಮರಣಕ್ಕೆ ಅವರೆ ಜವಾಬ್ದಾರಿ. ಇದನ್ನು ಕೇಳಿ ಹೃದಯದಲ್ಲಿ ಅಲುಗು ನೆಟ್ಟಂತಾಗಿ, ಅವರು ಕೇಳಿದರು "ನಾವೇನು ಮಾಡಬೇಕು". ಪೇತ್ರನು ಉತ್ತರಿಸಿದರು ಮೊದಲು ಒಬ್ಬನು ತನ್ನ ಪಾಪಗಳನ್ನು ಪರಿಹರಿಸಿಕೊಂಡು ಮತ್ತು ಎರಡನೆದಾಗಿ ಪಾಪಗಳ ಕ್ಷಮಾಪಣೆಗಾಗಿ ಧೀಕ್ಷಸ್ನಾನ ಮಾಡಿಸಿಕೊಂಡು ಮತ್ತು ಪವಿತ್ರಾತ್ಮದಾನವನ್ನು ಹೊಂದಿಕೊಳ್ಳಬೇಕು.

2. ಮೋಹಾನನು 3:3–5

ಪ್ರ : ಯೇಸುವಿನ ಪ್ರಕಾರ ನಾವು ಪರಲೋಕ ರಾಜ್ಯಕ್ಕೆ ಹೋಗಬೇಕೆಂದರೆ ನಾವು ಏನು ಮಾಡಬೇಕು? (ನಾವು ಮತ್ತೊಮ್ಮೆ ಜನಿಸಬೇಕು ಜಲದಿಂದಲೂ ಆತ್ಮನಿಂದಲೂ ಜನಿಸಬೇಕು).

ಪ್ರ : ನಾವು ಜಲದಿಂದಲೂ ಆತ್ಮ ನಿಂದಲೂ ಯಾವಾಗ ಜನಿಸುತ್ತೇವೆ ? (ದೀಕ್ಷಾಸ್ನಾನದ ಸಮಯದಲ್ಲಿ).

Scanned by CamScanner

3. ಮತ್ತಾಯನು 28 : 18–20

ಪ್ರ : ಎಂತಹ ಜನರು ದೀಕ್ಷಾಸ್ನಾನವನ್ನು ಪಡೆಯಬೇಕು? ಶಿಷ್ಯರಾಗಲು ಸಿದ್ಧರಾಗಿರುವ ಜನರು ಯೇಸುವಿನ ಕಟ್ಟಳೆಯನ್ನು ಹಿಂಬಾಲಿಸಲು ಶಕ್ತರಾಗಿರುವ ವಯಸ್ಕರು ಮಾತ್ರವಲ್ಲ (ವ 20) ಹೇಳಿಕೊಳ್ಳುವುದು ಶಿಷ್ಯರು ಮತ್ತೆ ಚಿಕ್ಕ ಮಕ್ಕಳು ಅಲ್ಲ)

ವಿ : ಹಾಗೂ, ನಾವು ನೋಡುತ್ತೀವಿ ದೀಕ್ಷಸ್ನಾನ ಯೇಸುವಿನ ಆಜ್ಞೆ ಆಗಿದೆ.

4) ರೋಪಪುರದವರಿಗೆ 6:3–7

ವ 3 ಪ್ರಕಾರ ನಾವು ದೀಕ್ಷಾ ಸ್ನಾನ ಪಡೆದರೆ, ನಾವು ಯೇಸುವಿನಲ್ಲಿ ದೀಕ್ಷಾಸ್ನಾನ ಪಡೆಯುತ್ತೇವೆ.
ವ 4 ಪ್ರಕಾರ, ನಾವು ದೀಕ್ಷಾಸ್ನಾನ ಪಡೆದರೆ, ನಾವು ಯೇಸುವಿನಲ್ಲಿ ಸಮಾಧಿ ಪಡೆಯುತ್ತೇವೆ.

ನಾವು ಹೊಸ ಜೀವನವನ್ನು ಜೀವಿಸಲು, ನಾವು ದೀಕ್ಷಸ್ನಾನ ಪಡೆಯಬೇಕು (ವ4). ನಾವು ದೀಕ್ಷಾ ಸ್ನಾನ ಪಡೆದಾಗ, ನಮ್ಮ ಹಳೆಯತನ ಯೇಸುವಿನ ಜೊತೆ ಶಿಲುಬೆಗೇರುತ್ತದೆ (ವ6) ನಮ್ಮ ಹಳೆಯ ತನವು ಸತ್ತಾಗ, ನಾವು ಯಾವುದರಿಂದ ಬಿಡುಗಡೆಯಾಗುತ್ತೇವೆ? (ಪಾಪದಿಂದ)



ದೀಕ್ಷಾಸ್ನಾನದಲ್ಲಿ, ನಾವು ಯೇಸುವಿನ ಮರಣದಲ್ಲಿ, ಶವಸಂಸ್ಕಾರದಲ್ಲಿ ಮತ್ತು ಪುನರುತ್ಥಾನದಲ್ಲಿ ಪಾಲುಗೊಳ್ಳುತ್ತೇವೆ.



ವಿ : ದೀಕ್ಷಾಸ್ನಾನವೆಂದರೆ ಯೇಸುವಿನ ಮರಣದಲ್ಲೂ, ಸಮಾಧಿಯಲ್ಲೂ ಮತ್ತು ಪುನರುತ್ಥಾನದಲ್ಲೂ ವಿಶ್ವಾಸದಿಂದ ಪಾಲ್ಗೊಳ್ಳುವುದು.

(ವಿ : ಎಫೆಸ್ಸೆಯರಿಗೆ 1:7ರ ಪ್ರಕಾರ ಯೇಸುವಿನ ರಕ್ತವೇ ನಮ್ಮನ್ನು ರಕ್ಷಿಸುವುದು ಮತ್ತು ರೋಮಾಪುರದವರಿಗೆ 6:3–4 ತೋರಿಸುತ್ತದೆ ನಾವು ಹೇಗೆ ದೀಕ್ಷಾಸ್ನಾನ ಪಡೆಯುವುದರ ಮೂಲಕ ವಿಶ್ವಾಸದಿಂದ ರಕ್ತದೊಂದಿಗೆ ಭಾಗವಾಗಿ, ಯೇಸುವಿನ ಜೊತೆ ಸಮಾಧಿಯಾಗುತ್ತೇವೆಂದು)

Scanned by CamScanner

5. ೧ ಪೇತ್ರನು 3:20–21

ಪ್ರ : ನೋಹನ ಕಾಲದಲ್ಲಿ, ಎಷ್ಟು ಮಂದಿ ಜನರು ರಕ್ಷಣೆ ಹೊಂದರು ? (8) ಎಂಟು ಜನರು ಜಲದ ನಿಮಿತ್ತ ರಕ್ಷಣೆ ಹೊಂದಿದರು – ಇದರ ಅರ್ಥವೇನು?

ಆದಿಕಾಂಡ 6:5 – ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿತ್ತು. ಎಗೆ ಜಲ ಪೃಥ್ವಿ ಮೇಲೆ ಇರುವ ಪಾಪವನ್ನು ಮತ್ತು ನಾವನಲ್ಲಿ ಇರುವ 8 ಜನರನ್ನು ಅಗಲಿಸಿತು, ಹಾಗೆ ದೀಕ್ಷಾಸ್ನಾನ ನಮ್ಮ ಪಾಪವನ್ನು ಮತ್ತು ನಮ್ಮನ್ನು ಆಗಲಿಸುತ್ತದೆ. ಅದೇ ಕಾರಣ, ಪೇತ್ರನು ಹೇಳುತ್ತಾನೆ "ಈ ನೀಡುಗೆ ಅನುರೂಪವಾದ ಧೀಕ್ಷಾಸ್ನಾನವು ಈಗೆ ನಮ್ಮನ್ನು ಸಹ ರಕ್ಷಿಸುವುದು" ಜಲ ಪ್ರಲಯ ಧೀಕ್ಷಾಸ್ನಾನವನ್ನು ಗುರ್ತಿಸುವುದು (ವ್ಯತಿರಿಕ್ತವಾಗಿ ಅಲ್ಲ) ಸತ್ಯವೇದವು ಧೀಕ್ಷಾಸ್ನಾನವನ್ನು ಚಿಹ್ನೆ ರೀತಿಯಿಂದ ಯಾವಾಗಲೂ ಕರೆಯುವುದಿಲ್ಲ.

ಪ್ರ : ವ.21ರ ಪ್ರಕಾರ, ಧೀಕ್ಷಾಸ್ನಾನ ಏನು ಪಾಡುತ್ತದೆ? (ಅದು ರಕ್ಷಣೆ ಕೊಡುತ್ತದೆ)

ಈಗ ಬೈಬಲಿನಲ್ಲಿ ದೀಕ್ಷಾಸ್ನಾನ ತೆಗೆದುಕೊಂಡ ಕೆಲವು ಉದಾಹರಣೆಗಳನ್ನು ನೋಡೋಣ.

6. ಅಪೋಸ್ತಲರ 8:26–25

ಪ್ರ : ಐಥಿಯೋಪ್ಯದ ಕಂಚುಕಿ ಮನೆಗೆ ಹೋಗುತ್ತಿರುವಾಗ ಏನು ಮಾಡುತ್ತಿದ್ದನು? (ಸತ್ಯ ವೇದವನ್ನು ಓದುತ್ತಿದ್ದೆನು).

ಪ್ರ : ಆತನು ಸೊಕ್ಕಿನವನಾ ಅಥವಾ ತಾಳ್ಮೆಯುಳ್ಳ ಮನುಷ್ಯನಾ? (ತಾಳ್ಮೆ – ತನಗೆ ತಿಳಿದಿತ್ತು, ಸಹಾಯ ಬೇಕೆಂದು (ವ 30–31)

ಪ್ರ : ಕಂಚುಕಿ ಒಳ್ಳೆ ಒಳ್ಳೆಯ ದೈವಭಕ್ತಿಯುಳ್ಳ ಮನುಷ್ಯನು ಆದರೆ ಆತನ ರಕ್ಷಣೆ ಹೊಂದಿರಲಿಲ್ಲ. ಹಾಗೂ ನಿಜವಾದ ಕ್ರೈಸ್ತನಾಗಿರಲಿಲ್ಲ. ನಾವು ಹೇಗೆ ಸತ್ಯವೇದವನ್ನು ಓದುತ್ತೇವೋ ಹಾಗೆಯೇ ಫಿಲಿಪ್ಪನು ಮತ್ತು ಆತನು ಇಬ್ಬರು ರಥದಲ್ಲಿ ಕುಳಿತು ಸತ್ಯವೇದವನ್ನು ಓದಿದರು. ಫಿಲಿಪ್ಪನು ಅವನಿಗೆ ಯೇಸುವಿನ ಬಗ್ಗೆ ಶುಭಸಂದೇಶವನ್ನು ಹೇಳಿದನು.

ಪ್ರ : ಯೇಸುವಿನ ಬಗ್ಗೆ ಶುಭಸಂದೇಶ ಅಂದರೆ ಏನು? (ಆತನು ಭೂಲೋಕಕ್ಕೆ ಬಂದನು, ಜನರಿಗೆ ಸಹಾಯ ಮಾಡಿದ್ದನು, ನಮ್ಮ ಪಾಪಗಳಿಗೋಸ್ಕರ ಸತ್ತಿದ್ದನು ಮತ್ತೆ ಮಾರನೆಯದಿನ ಎದ್ದಿದನ್ನು ಮತ್ತು ನಾವು ರಕ್ಷಣೆ ಹೊಂದಬಹುದು ಎಂಬುದು).

ಅಪೋಸ್ತಲರ 8:36–39

ಅವರು ನೀರನ್ನು ನೋಡಿದಾಗ, ಅವರಿಬ್ಬರು ಕೆಳಗೆ "ನೀರಿನಲ್ಲಿ" ಇಳಿದರು ಮತ್ತು ಫಿಲಿಪ್ಪನು ಕಂಚುಕಿಯನ್ನು ಧೀಕ್ಷಾಸ್ನಾನ ಮಾಡಿಸಿದರು (ವ. 38) ಬ್ಯಾಪ್ಟಿಸಂ ಎಂದರೆ ಪೂರ್ತಿ ನೀರಿನಲ್ಲಿ ಮುಳುಗುವುದು ಎಂದರ್ಥ. ಇದನ್ನು ಗ್ರೀಕ್ ಭಾಷೆಯಲ್ಲಿ "ಬ್ಯಾಪ್ಟಿಡ್ಯೋ" ಎನ್ನುವರು.

Scanned by CamScanner

ಪ್ರ : ಕಂಚುಕಿಯನ್ನು ಎಥಿಯೋಪ್ಯ ಬರುವ ತನಕ ಏಕೆ ಕಾಯಲಿಲ್ಲ ? (ಆತನಿಗೆ ಕ್ಷಮಾಪಣೆ ತಕ್ಷಣ ಬೇಕಾಗಿತ್ತು ಮತ್ತು ಆತನಿಗೆ ಅಪಘಾತದಲ್ಲಿ ಸಾಯಬಾರದೆಂದು)

ವಿ : ಮತ್ತೆ ಅಪೋಸ್ತಲರ 2ರಲ್ಲಿ ಇರುವಂತೆ, ಧೀಕ್ಷಾಸ್ನಾನದ ಮೊದಲು ಆತ್ರುತೆ, ನಂತರ ಸಂತೋಷ.

7. ಅಪೋಸ್ತಲರ 16:13–15 (ಮಹಿಳೆಯರಿಗೆ)
ದೇವರು ಆಕೆಯ ಹೃದಯವನ್ನು ಪೌಲನು ಬೋಧನೆಗೆ ಉತ್ತರಿಸುವಂತೆ ಮಾಡಿದರು.

ಪ್ರ : ಆಕೆಯು ಬೋಧನೆಗೆ ಹೇಗೆ ಉತ್ತರಿಸಿದಳು?
(ತಕ್ಷಣ ಧೀಕ್ಷಾಸ್ನಾನ)

ಪ್ರ : ಅವಳು ಏಕೆ ಕಾಯಲಿಲ್ಲ? (ಆಕೆಗೆ ರಕ್ಷಣೆ ಬೇಕಾಗಿತ್ತು)

8. ಅಪೋಸ್ತಲರ 22:1–6 (ಎಲ್ಲರಿಗೂ)
ಪ್ರ : ಪೌಲನು ಕ್ರೈಸ್ತನಾಗುವುದಕ್ಕಿಂತ ಮುಂಚೆ ಹೇಗಿದ್ದನು?
(ಸಭೆಯನ್ನು ಉಗ್ರವಾಗಿ ಹಿಂಸಿಸುವವನಾಗಿದ್ದನು)

ಪ್ರ : ಆತನಿಗೆ ಏನಾಯಿತು? (ಅವನಿಗೆ ಯೇಸು ಪ್ರತ್ಯಕ್ಷನಾದನು)
ಪ್ರ : ಮೊಟ್ಟ ಮೊದಲ ಬಾರಿ ಯೇಸು ಆತನಲ್ಲಿ ಮಾತನಾಡಿದಾಗ ಆತನು ಯೇಸುವಲ್ಲಿ ನಂಬಿಕೆ ಇಟ್ಟನಾ ? (ಹೌದು)

ಪ್ರ : ಆ ಸಮಯದಲ್ಲಿ ಆತನು ರಕ್ಷಿಸಲ್ಪಟ್ಟಿದ್ದನಾ? (ಇಲ್ಲ)
ಪ್ರ : ಆಗ ಆತನು ಯೇಸುವಿಗೆ ವಿಧೇಯನಾಗಿದ್ದನಾ? (ಹೌದು ವ. 10–11 ಪೌಲನು ಧಮಸ್ಕಕ್ಕೆ ಹೋದನು)

ಪ್ರ : ಆ ಸಮಯದಲ್ಲಿ ಆತನು ರಕ್ಷಿಸಲ್ಪಟ್ಟಿದ್ದನಾ (ಇಲ್ಲ)

ವಿ : ಅಪೋಸ್ತಲರ 9:9–12ರ ಪ್ರಕಾರ, ಪೌಲನು 3 ದಿವಸ ಏನನ್ನು ತಿನ್ನಲಿಲ್ಲ ಮತ್ತು ಕುಡಿಯಲಿಲ್ಲ, ಆದರೆ ಪ್ರಾರ್ಥಿಸುತ್ತಿದ್ದನು.

ಪ್ರ : ಆದರೆ ಈ ಸಮಯದಲ್ಲಿ ಆತನು ರಕ್ಷಿಸಲ್ಪಟ್ಟಿರುವನಾ? (ಇಲ್ಲ, ಇನ್ನೂ ಆತನ ಪಾಪಗಳು ತೊಳೆಯಲ್ಪಟ್ಟಿರಲಿಲ್ಲ).

ಪ್ರ : ಪೌಲನು ಹೇಗೆ ರಕ್ಷಿಸಲ್ಪಟ್ಟನು? (ವ. 16) (ಆತನು ಧೀಕ್ಷಾಸ್ನಾನ ಪಡೆದಾಗ)

ಪ್ರ : ವಚನ 16ರ ಪ್ರಕಾರ ಧೀಕ್ಷಾಸ್ನಾನದ ಉದ್ದೇಶವೇನು? (ಪಾಪವನ್ನು ತೊಳೆಯಲು)

Scanned by CamScanner

ಪ್ರ : ಪೌಲನು ಇನ್ನೂ ಕಾಯಬೇಕೆಂದು ಅನನ್ಯನು ಬಯಸಿದನಾ? (ಇಲ್ಲ, ವಚನ 16 ಹೇಳುತ್ತದೆ "ಏತಕ್ಕಾಗಿ ನೀನು ಕಾಯುತ್ತಿರುವೆ?")

ವಿ : ಇಲ್ಲಿಯೂ ನಾವು ನೋಡುತ್ತೇವೆ, ಪೌಲನು ಧೀಕ್ಷಾಸ್ನಾನ ಪಡೆಯುವುದರಲ್ಲಿ ಆತುರತೆ ಮತ್ತು ಉತ್ಸಾಹವನ್ನು ತೋರಿಸುತ್ತಾನೆ (ಅಪೋಸ್ತಲರ 9:18).

ಪ್ರ : ಏತಕ್ಕಾಗಿ ನೀನು ಕಾಯುತ್ತಿರುವೆ? ಧೀಕ್ಷಾಸ್ನಾನವನ್ನು ಯಾವಾಗ ಪಡೆಯುವೆ?

ಸಮಾಪ್ತಿ.

ಪ್ರ : ನೀವು ಏನು ಮಾಡಬೇಕೆಂದು ಯೋಚಿಸುವಿರಿ?

ಪ್ರ : ನೀವು ಧೀಕ್ಷಾಸ್ನಾನವನ್ನು ಯಾವಾಗ ಪಡೆಯಲು ಇಚ್ಛೇ ಪಡುತ್ತೀರಾ?

ಪ್ರ : ನೀವು ಏತಕ್ಕಾಗಿ ಧೀಕ್ಷಾಸ್ನಾನವನ್ನು ತೆಗೆದುಕೊಳ್ಳಬೇಕು? (ರಕ್ಷಣೆ ಹೊಂದಲು, ಕ್ಷಮಿಸಲ್ಪಡಲು ಮತ್ತು ಪವಿತ್ರಾತ್ಮದಾನವನ್ನು ಹೊಂದುಕೊಳ್ಳಲು)

Scanned by CamScanner

10. ಯೇಸುವೇ ಕರ್ತನು

ಉಪಯೋಗಿಸಿರುವ ವಚನಗಳು

1. ಅಪೋಸ್ತಲರ 11:25–26
2. ಮಾರ್ಕನು 12:28–31
3. ಲೂಕನು 9:23–26
4. ಲೂಕನು 11:1–5
5. ಲೂಕನು 14:25–33
6. ೧ ಯೋಹಾನನು 2:3–6
7. ಯೋಹಾನನು 8:31–32
8. ಯೋಹಾನನು 13:34–35
9. ಮತ್ತಾಯನು 7:21–23
10. ಮಾರ್ಕನು 1:16–20
11. ರೋಮಪುರ 10:9–13

ಉದ್ದೇಶ :

ಯೇಸು ನಮ್ಮ ಕರ್ತನು ಮಾಡುಕೊಳ್ಳುವುದಕ್ಕೆ ಅದರ ಅರ್ಥ ಭೋಧಿಸಿವುದಕ್ಕಾಗಿ ನಾವು ಧೀಕ್ಷಾಸ್ನಾನ ತೆಗೆದುಕೊಳ್ಳುವ ಸಮಯದಲ್ಲಿ, ನಾವು ಯೇಸುವೇ ಕರ್ತನೆಂದು ಅರಿಕೆ ಮಾಡುಕೊಳ್ಳುತ್ತೀವಿ. ಆ ಅರಿಕೆಯ ಅರ್ಥವೇನು, ಏಗೆ ನಮ್ಮ ಜೀವನವನ್ನು ಮತ್ತೆ ಜೀವನದಲ್ಲಿ ಮಾಡುವ ಆಯ್ಕೆಗಳನ್ನು ಪರಿಣಾಮಗೊಳಿಸುವುದು. "ಯೇಸುವನ್ನು ಹಿಂಬಾಲಿಸುವ ಕರೆ" ನಿಜವಾದ ಅರ್ಥ ತಿಳಿಸಲಿಕ್ಕೆ, ಈ ಪಾಠದ ಉದ್ದೇಶ. ನಾನು ಯೇಸು ಹಿಂಬಾಲಕನು ಎಂದು ಹೇಳಿಕೊಳ್ಳುವ ಅರ್ಥವೇನು? ಹಿಂಬಾಲಕನ ಹೃದಯ ಹೇಗಿರಬೇಕು? ಒಬ್ಬನು ಯೇಸುವನ್ನು ಹಿಂಬಾಲಿಸುವ ನಿರ್ಧಾರ ಮಾಡಿಕೊಂಡ ಮೇಲೆ ಅವನ ಜೀವನ ಹೇಗೆ ಇರಬೇಕು?

ಕ್ರೈಸ್ತ ಧರ್ಮದಿಂದ ಬರುವ ಜನಕ್ಕಾಗಿ ನೀವು ಕೇಳಿರಿ "ಏನು ನೀವು ಕ್ರೈಸ್ತರೇ? ನಿಮ್ಮನ್ನು ಕ್ರೈಸ್ತರಾಗಿ ಬದಲಾವಣೆ ಏನು ಮಾಡುತ್ತದೆ? [ಅವರು ಉತ್ತರಿಸಲಿ]. ಇವತ್ತು, ನಾವು ಸತ್ಯವೇದದಿಂದ ಕಲಿಯೋಣ ಒಬ್ಬನು ಕ್ರೈಸ್ತನು ಹೇಗೆ ಆಗುವನು. ಮೊದಲನೆದಾಗಿ, ನಾವು ನೋಡೋಣ "ಕ್ರೈಸ್ತ" ಶಬ್ದ ಮೊದಲನೇ ಬಾರಿ ಸತ್ಯವೇದದಲ್ಲಿ ಎಲ್ಲಿ ಬರೆದಿದೆ.

1. ಅಪೋಸ್ತಲರ 11:25–26

1. ಒಂದು ಸರಳ ಅಧರ್ಮಿಕ ರೀತಿಯಲ್ಲಿ ನೋಡಿದರೆ, ಶಬ್ದ "ಶಿಷ್ಯ' ವನ್ನು ನೀವು ಹೇಗೆ ಸ್ಪಷ್ಟಮಾಡುತ್ತೀರ?
2. ಈ ವಚನ ಪ್ರಕಾರ, ಶಬ್ದಗಳು "ಕ್ರೈಸ್ತ" ಮತ್ತು "ಶಿಷ್ಯ" ಮದ್ಯದಲ್ಲಿ ಏನಾದರು ಅಂತರವಿದೆಯಾ? ಇಲ್ಲ ಎರಡ್ ಶಬ್ದಗಳು ಒಂದೇ ಅಂದರೆ ಶಿಷ್ಯ=ಕ್ರೈಸ್ತ.
3. ನಿಮಗೆ ಗೊತ್ತ, ಎಷ್ಟು ಸಾರಿ ಶಬ್ದ 'ಕ್ರೈಸ್ತ" ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಿದೆ (3 ಸಾರಿ ▯ ಅಪೋಸ್ತಲರ 11:256, ಅಪೋಸ್ತಲರ 26:28, 1 ಪೇತ್ರನು 4:16)
4. ಎಷ್ಟು ಸಾರಿ ಸಬ್ದ "ಶಿಷ್ಯ" ಉಪಯೋಗಿಸಿದೆ (250 ಕ್ಕಿಂತ ಹೆಚಾಗಿ) ನಾವು ಯೇಸುವನ್ನು ಹಿಂಬಾಲಿಸುವುದಕ್ಕೆ ಸ್ವಲ್ಪ ವಾಕ್ಯಗಳನ್ನು ಇಗ ನೋಡೋನ.

Scanned by CamScanner

2. ಮಾರ್ಕನು 12:28–31

1. ದೇವರನ್ನು ಪ್ರೀತಿಸು ಮತ್ತು ನಿನ್ನ ನೆರೆಯವರನ್ನು ನಿನ್ನಂತೆಯೇ ಪ್ರೀತಿಸು ಎಂಬ ಎರಡು ಮುಖ್ಯವಾದ ಆಜ್ಞೆಗಳು.
2. ಒಬ್ಬ ಶಿಷ್ಯರಾಗಿ ಪೂರ್ಣ ಹೃದಯದಿಂದ ದೇವರೊಂದಿಗೆ ಪ್ರೀತಿಯ ಸಂಬಂಧ ಮತ್ತು ನೆರೆಯವರನ್ನು ಪ್ರೀತಿಸಬೇಕು.
3. ಈ ಎರಡು ಆಜ್ಞೆಯನ್ನು ನಾವು ತಿಳಿದುಕೊಂಡರೆ, ಅಮೇಲೆ ಯೇಸುವಿನ ನಿರೀಕ್ಷೆ ನಾವು ಅವನ ಶಿಷ್ಯರಾಗಬೇಕೆಂದು ತಿಳಿದುಕೊಳ್ಳುತ್ತೇವೆ.

3. ಲೂಕ 9:23–26

1. ಯೇಸುವಿಗೆ ಪ್ರಾಮುಖ್ಯತೆ ಬೇಕಾಗಿದ್ದು ನಮ್ಮ ಹೃದಯ ಈ ವಚನದಲ್ಲಿ ಹೇಳುತ್ತದೆ. ಅವನ ಶಿಷ್ಯರು ಏನನ್ನು ಯೇಸು ನಿರೀಕ್ಷಿಸುತ್ತಾರೆ ಎಂದು
   - ತನ್ನನ್ನೇ ನಿರಾಕರಿಸುವುದು.
   - ತನ್ನ ಶಿಲುಬೆಯನ್ನು ದಿನಾಲೂ ಹೊತ್ತು ಕೊಳ್ಳುವುದು.
   - ತನ್ನ ಪ್ರಾಣವನ್ನು ಯೇಸುವಿಗೋಸ್ಕರ ಕಳುದುಕೊಳ್ಳಲು ತಯಾರಾಗುವುದು.
2. ಈ ಶಿಷ್ಯತ್ವದ ಬೇಡಿಕೆಗಳನ್ನು ನಿಮಗೆ ಹೇಗೆ ಅನಿಸುತ್ತದೆ?
3. "ತನ್ನನ್ನೇ ನಿರಾಕರಿಸು" ಎಂದರೇನು? ತನ್ನ ಶಿಲುಬೆಯನ್ನು ದಿನಾಲು ಹೊತ್ತುಕೊಳ್ಳುವುದು" ಎಂದರೇನು?
4. ಯಾವುದು ನಿಮಗೆ ಯೇಸುವನ್ನು ಹಿಂಬಾಲಿಸಲು ತುಂಬಾ ಕಷ್ಟವಾಗಿದೆ?
5. ಯಾವುದು "ಯೇಸುವಿಗೆ ಅಥವಾ ಅವರ ವಾರ್ಗೆಗಳಿಗೆ ನಾಚಿಕೆಗೊಳಿಸುವುದು?

4. ಲೂಕ 11:1–5

1. ಯೇಸು ಶಿಷ್ಯರಿಗೆ ಹೇಗೆ ಪ್ರಾರ್ಥನೆ ಮಾಡಬೇಕೆಂದು ಕಲಿಸಿದರು. ಅವರು ದೇವರನ್ನು "ನಮ್ಮ ತಂದೆ" ಎಂದು ಕರೆಯಲು ಕಲಿಸಿದರು.
2. ಒಬ್ಬ ಶಿಷ್ಯರಾಗಿ ನಮ್ಮ ತಂದೆಯಾದ ದೇವರ ಜೊತೆಗೆ ಸಂಬಂಧ ಇಟ್ಟುಕೊಳ್ಳಬೇಕು. ನಾವು ನಮ್ಮ ತಂದೆಯಾದ ದೇವರ ಜೊತೆಗೆ ಪ್ರಾರ್ಥನೆಯ ಮೂಲಕ ಮಾತನಾಡಲು ಸಂಬಂಧ ಇಟ್ಟುಕೊಳ್ಳಬೇಕು ಮತ್ತು ಅವನ ವಾರ್ತೆಗಳನ್ನು ಕೇಳಿಬೇಕು.

5. ಲೂಕ 14:25–33

1. ಯೇಸುವನ್ನು ಎಲ್ಲ ಕುಟುಂಬ ಸಂಬಂಧಗಳಿಗಿಂತಲು ಮತ್ತು ತನ್ನ ಜೀವನಗಿಂತಲೂ ಪ್ರೀತಿಸಬೇಕು [ಇದರ ಅರ್ಥ ಒಬ್ಬರು ತಂದೆ ತಾಯಿಗಳನ್ನು ಸನ್ಮಾನಿಸಬಾರದು ಅಥವಾ ಅವರನ್ನು ಸೇವೆ ಮಾಡಬಾರದು ಅಂದು ಅಲ್ಲ].
2. ತನ್ನ ತನ್ನ ಶುಲುಬೆಗಳನ್ನು ಹೊತ್ತುಕೊಳ್ಳುವುದು ಮತ್ತು ಯೇಸುವನ್ನು ಏನ್ನೂ ಹಿಂಬಾಲಿಸುವುದು.
3. ಯೇಸುವನ್ನು ಹಿಂಬಾಲಿಸುವುದು ಒಂದು ಬಹಳ ಗಂಭೀರ, ಜೀವತಾಂತರ ನಿರ್ಧಾರವಾಗಿದೆ ಮತ್ತು ಅದು ಒಂದು ಮನೋಭಾವಿಕ, ಕ್ಷನಿಕ ನಿರ್ಧಾರವಿಲ್ಲ.
4. ತನ್ನಗಿರುವದನ್ನೆಲ್ಲಾ ಬೀಡುಬಿಡುವ ಇಷ್ಟ ಇರಬೇಕು.

Scanned by CamScanner

6. ೧ ಯೋಹಾನನು 2:3–6

1. ಈ ವಚನವು ನಮಗೆ ಹೇಗೆ ಮತ್ತೊಬ್ಬರು ಶಿಷ್ಯರು ಅಥವಾ ಅಲ್ಲವೋ ಎಂದು ತಿಳಿಸುತ್ತದೆ.
2. ಯಾರಿಗೆ ಯೇಸುವಿನ ಬಗ್ಗೆ ಗೊತ್ತೋ, ಅವರು ಯೇಸುವನ್ನು ಅನುಸರಿಸಬೇಕು. ಇಲ್ಲದಿದ್ದರೆ ಅವನ ಸಾಧನೆಯು ಸುಳ್ಳಾಗುತ್ತದೆ. (ಲೂಕ 6:26).
3. ಯಾರು ಯೇಸುವಿನಲ್ಲಿ ಜೀವಿಸುತ್ತಾರೋ ಅವರು ಯೇಸು ನಡೆದ ಹಾದಿಯಲ್ಲಿ ನಡೆಯುತ್ತಾರೆ, ಎಂಬುವುದು ಗುರುತಿಸ ಬಹುದು.

7. ಯೋಹಾನನು 8:31–32

1. ಶಿಷ್ಯನಿಗೆ ನಂಬಿಕೆ ಮಾತ್ರ ಸಾಲದು.
2. ಕೈಗೊಂಡು [ವಾಕ್ಯದಲ್ಲಿ ನೆಲೆಗೊಂಡವರಾಗು] ನಡಿಯುವುದು ಶಿಷ್ಯನಿಗೆ ಅಗತ್ಯ.

8. ಯೋಹಾನನು 13:34–35

1. ಇದು ಒಂದು ಹೊಸ ಆಜ್ಞೆ ಯೇಸುಕೊಟ್ಟಿದ್ದಾರೆ ಏಕೆಂದರೆ ಅವರು ಪ್ರೀತಿಯ ಉದಾಹರಣೆಯಲ್ಲಿ ನಡೆಯಲು ಕೇಳಿಕೊಂಡಿದ್ದಾರೆ.
2. ಶಿಷ್ಯರು ಯೇಸುವಿನ ಪ್ರೀತಿಯ ಗುರುತಾಗಿ ಇರಬೇಕು.
   - ಕೆಟ್ಟು ಹೋಗಿರುವರನ್ನು ಪ್ರೀತಿಯಿಂದ ಹುಡುಕಿ ರಕ್ಷಿಸಬೇಕು, ಮನುಷ್ಯರನ್ನು ಹಿಡಿಯುವ ಬೆಸ್ತರಾಗಲು ಕಲಿಯಬೇಕು, ಆ ದೊಡ್ಡ ಆದೇಶವನ್ನು ಅನುಸರಿಸಬೇಕು [ಮತ್ತಯ 28:18–20, ಲೂಕ 19:10, ಮೂರ್ಕನು 1:16–20]
   - ಬಡವರನ್ನು ಪ್ರೀತಿಸುವುದು [ಮತ್ತಾಯನು 25:32–26]
   - ನಮ್ಮ ಕುಟುಂಬವನ್ನು ಪ್ರೀತಿಸುವುದು [೧ ತಿಮೋಥೆಯನು 5:8]
   - ನಮ್ಮ ಸಭೆಯನ್ನು ಪ್ರೀತಿಸುವುದು (೧ ಪೇತ್ರನು 1:22, ಗಲಾತ್ಯದವರಿಗೆ 6:10)
   - ನಮ್ಮ ಶತ್ರುಗಳನ್ನು ಪ್ರೀತಿಸುವುದು (ಮತ್ತಾಯನು 5:44)

9. ಮತ್ತಾಯನು 7:21–23

1. ಯೇಸುವೇ ದೇವರು ಎಂದು ಮಾಡುವುದು ಎಂದರೆ ಅವರ ವಾರ್ತೆಯನ್ನು ಹೆಚ್ಚಾಗಿ ಹೇಳುವುದು.
2. ಧರ್ಮನಿಷ್ಟೆಯಿಂದ ದೇವರೇ, ದೇವರೇ ಎಂದು ಕರೆಯುವುದು ಅಥವಾ ಅವರ ಹೆಸರಿನಲ್ಲಿ ಬೋಧನೆ ಮಾಡುವುದು ಮತ್ತು ಅವರ ಹೆಸರಿನಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದರೆ ಸಾಲದು.
3. ನಾವು ತಂದೆಯ ಚಿತ್ತದಂತೆ ನಡೆದು ಪರಲೋಕ ರಾಜ್ಯವನ್ನು ಸೇರಬೇಕು.
4. ಯಾರು ಪರಲೋಕದಲ್ಲಿರುವ ತಂದೆಯ ಚಿತ್ತದಂತೆ ನಡೆಯುವರು ಪರಲೋಕ ರಾಜ್ಯವನ್ನು ಪ್ರವೇಶಿಸುವವರು.

Scanned by CamScanner

10. ಮೂರ್ಕನು 1:16–20

1. ಈ ವಾಕ್ಯವು ಯೇಸು ಯಾವ ರೀತಿಯಲ್ಲಿ ತನ್ನ ಮೊದಲನೇಯ ಶಿಷ್ಯರನ್ನು ಸೀಮೋನನೂ, ಅಂದ್ರೆಯನೂ, ಯಾಕೋಬನೂ ಮತ್ತು ಯೋಹಾನನು ಕರೆದಿರುವ ಬಗ್ಗೆ ಮಾತನಾಡುತ್ತದೆ. ಮತ್ತು ಅವರೆ ಕರೆಗೆ ಹೇಗೆ ಅವರೆಲ್ಲರೂ ಪ್ರತಿಕ್ರಿಯಿಸಿದ್ದರು.
2. ಸೀಮೋನನೂ ಮತ್ತೆ ಅಂದ್ರೆಯನೂ ಪ್ರತಿಕ್ರಿಯಿಸಿದರು? ಯಾಕೋಬನೂ ಮತ್ತೆ ಯೋಹಾನನು ಹೇಗೆ ಪ್ರತಿಕ್ರಿಯಿಸಿದರು?
3. ತಾವು ಯೇಸು ಹಿಂಬಾಲಿಸುವ ಕರೆಗೆ ಹೇಗೆ ಪ್ರತಿಕ್ರಿಯಿಸಿದ್ದರು?
4. "ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ಮಾಡುವೆನು" ಇದರೆ ಅರ್ಥವೇನು?

11. ರೋಮಾಪುರದವರಿಗೆ 10:9–13

ನಾವು ಧೀಕ್ಷಸ್ನಾನ ಪಡೆಯುವ ಸಮಯದಲ್ಲಿ "ಯೇಸುವೇ ನನ್ನ ಕರ್ತ" ಎಂದು ಅರಿಕೆ ಮಾಡುತ್ತೇವೆ. "ಯೇಶುವೆ ನನ್ನ ಕರ್ತ" ಎಂಬ ಅರಿಕೆಯ ಅರ್ಥವೇನು?

ಅ) ಈ ಅರಿಕೆಯು ನಮ್ಮ ಪೂರ್ತಿ ವಚನ ಬದ್ಧತೆ ಮತ್ತು ಭಕ್ತಿ ಅರ್ಪಣೆಯು ಹೇಗೆ ಯೇಸುವಿನ ಮೇಲೆ ಪ್ರಕಟನಯು ಹೇಗೆ ಯೇಸುವಿನ ಮೇಲೆ ಪ್ರಕಟನೆಯನ್ನು ತೋರಿಸುತ್ತದೆ.

ಆ) ಅದರ ಅರ್ಥ ಈ ಯೇಸುವಿನ ಚಿತ್ತವನ್ನು ಸ್ವಂತ ಇಷ್ಟಾನುಸಾರವಾಗಿ ಆರಿಸಿ ನಡೆಯಲು ತೀರ್ಮಾನಿಸಿವುದು.

ಇ) ಅದರ ಅರ್ಥ, ಯಾವ ಸಮಯದಲ್ಲಿಯೂ ಯೇಸುವಿನ ಚಿತ್ತದಂತೆ ನಡೆಯಲು ತೀರ್ಮಾನಿಸಿಸುವುದು.

ಈ) ಬಾಯಿಯಿಂದ ಅರಿಕೆ ಮಾಡಿದರೆ ಸಾಲದು, ನಾವು ನಮ್ಮ ಹೃದಯ ಪೂರ್ವಕವಾಗಿ ನಂಬಬೇಕು.

ಉ) [೧ ತಿಮೋಥೆಯನಿಗೆ 2:19–24] "ಯೇಸುವೆ ನನ್ನ ಕರ್ತ" ಎಂದು ಅರಿಕೆ ಮಾಡುವುದು ಕೆಟ್ಟ ಅಭ್ಯಾಸದಿಂದ ಬದಲಾಗಿ ಒಳ್ಳೆಯ ಕಾರ್ಯಗಳನ್ನು ಮಾಡುವುದು?

ಅಂತ್ಯ :

ಯೇಸುವಿಗೆ ಶಿಷ್ಯರಾಗಿ ಇರುವುದು ಅಥವಾ ನನ್ನ ಕರ್ತ ಎಂದು ಹೇಳುವುದು ಅವರಂತೆ ಪ್ರೀತಿಸುವುದು, ವಿಧೇಯರಾಗಿ ಇರುವುದು ಮತ್ತು ನಮ್ಮನ್ನು ದೇವರಗೋಸ್ಕರ ಮುಡಿಪಾಗಿ ಇಡುವುದು. ಈ ಮೇಲೆ ಹೇಲಿದ ಜೊತೆಗೆ ನಾವು ಇಷ್ಟಾನುಸಾರಗಳನ್ನು ಹಾಕಿ ಯೇಸುವಿನೊಂದಿಗೆ ಸಂಬಂಧ ಇಟ್ಟುಕೊಳ್ಳಬೇಕು.

Scanned by CamScanner

11. ಸಭೆ

ಉಪಯೋಗಿಸುವ ವಚನಗಳು

1. ಕೊಲೋಸ್ಸೆಯವರಿಗೆ 1:18
2. ೧ ಕೊರಿಂಥದವರಿಗೆ 12:12–26
3. ೧ ತಿಮೊಥೆಯನಿಗೆ 3:15
4. ಎಫೆಸದವರಿಗೆ 2:19–22*
5. ಎಫೆಸದವರಿಗೆ 4:11–16*
6. ಇಬ್ರಿಯರಿಗೆ 13:12–13 6. ಇಬ್ರಿಯರಿಗೆ 13:17
7. ಇಬ್ರಿಯರಿಗೆ 10:24–25
8. ಅಪೋಸ್ತಲರ 2:42
9. ಕೊಲೊಸ್ಸೆಯವರಿಗೆ 3:12–17*
10. ಮತ್ತಾಯನು 18:15–17*

- ಆಯ್ಕೆಯಾದ ವಚನಗಳು

ಉದ್ದೇಶ :

ಹುಡುಕುವವರಿಗೆ ಪ್ರೋತ್ಸಾಹಿಸಿ; ಅದರಿಂದ ಅವನನ್ನು / ಅವಳನ್ನು ಧೀಕ್ಷಾಸ್ನಾನ ನಂತರ ತನ್ನ ಇಷ್ಟಕ್ಕಾಗಿ ಬೀಡುಬೀಡುವುದಿಲ್ಲ. ಇದರ ಬದಲಾಗಿ, ಯೇಸು ನಮ್ಮನ್ನು ತನ್ನ ದೇಹದಲ್ಲಿ, ಅಂದರೆ ಸಭೆಯಲ್ಲಿ (ಕೊರಿಂಥದವರಿಗೆ 12:12–13) ಧೀಕ್ಷಾಸ್ನಾನ ಮಾಡಿಸಿ ಮತ್ತೆ ನಮ್ಮ ದೇವರಲ್ಲಿ ಇರುವ ಭಯ ಭಕ್ತಿಯನ್ನು ಐಕ್ಯಮತ್ಯವುಳ್ಳವರಾಗಿರುವ ಶಿಷ್ಯರ ತಂಡಕ್ಕೆ ಜೋಡಿಸುವವರು. ಈ ಸಹೋದರರು ಮತ್ತು ಸಹೋದರಿಯರು ನಮ್ಮ ನಡತೆ ಕ್ರೈಸ್ತರೊಂದಿಗೆ ಒಂದು ನಿರಂತರ ಪ್ರೋತ್ರಾಹದ ಮೂಲಸ್ಥಾನ ಹಾಗಿರಬೇಕೆಂದು.

ಸಭೆಗೆ ಗ್ರೀಕ್ ಭಾಷೆಯಲ್ಲಿ "ಯಕ್‌ಲೀಸಿಯ" ಎಂದು ಅನುತ್ತಾರೆ, ಇದು ಒಂದು ಸಮಾಸ ಪದ ಅರ್ಥವೇನೆಂದರೆ ಕರೆಯಲ್ಪಡುವರು, ಒಂದು ಸಂಘ.

1. ಕೋಲೋಸ್ಸೆಯವರಿಗೆ 1:18

ಅ) ಸಭೆಯಂಬುದು ಯೇಸುವಿನ ಶರೀರ.

ಆ) ಶರೀರಕ್ಕೆ ಶಿರಸು ಬೇಕು ಯೇಸುವೇ ಸಭೆಯ ಶಿರಸ್ಸು.

ಇ) ಸಭೆ ಅವಶ್ಯವಾದದ್ದು ಒಬ್ಬ "ಹೌದು" ಎಂದು ಯೇಸುವಿಗೆ ಮತ್ತು "ಇಲ್ಲ" ಎಂದು ಸಭೆಗೆ ಹೇಳಲು ಸಾದ್ಯವಿಲ್ಲ.

2. ೧ ಕೊರಿಂಥದವರಿಗೆ 12:12–26

ಅ) ರಕ್ಷಣೆ ಹೊಂದಿರುವವರು ಎಲ್ಲರ ಕ್ರೈಸ್ತರ ಶರೀರದಲ್ಲಿ ಅಂಗಗಳಾಗಿದ್ದಾರೆ.

ಆ) ನಾವೆಲ್ಲರು ಒಂದೇ ದೇಹವಾಗುವುದಕ್ಕಾಗಿ ಒಂದೇ ಆತ್ಮನಲ್ಲಿ ಧೀಕ್ಷಾಸ್ನಾನ ಮಾಡಿಸಿಕೊಂಡೆವು.

ಇ) ದೇಹದ ಪ್ರತೀ ಅಂಗವು ಮುಖ್ಯವಾದುದು ಮತ್ತು ಅವಶ್ಯವಾದದ್ದು.

ಈ) ಕ್ರೈಸ್ತರ ದೇಹದಲ್ಲಿ ಯಾವ ಬೇದವೇನೂ ಇರಬಾರದು.

Scanned by CamScanner

ಉ) ನಮ್ಮಲ್ಲಿ ಒಬ್ಬರನೊಬ್ಬರ ಮೇಲೆ ಪರಸ್ಪರ ಅಕ್ಕರೆ ಇರಬೇಕು.

3. ತಿಮೊಥೆಯನಿಗೆ ~~3:1-5~~ 3:15
   ಅ) ಸಭೆಯು ದೇವರ ಮನೆ (ಕುಟುಂಬ)
   ಆ) ಸಭೆಯ ಸತ್ಯಕೆ ಸ್ತಂಭವೂ ಆಧಾರವೂ ಆಗಿದೆ.

4. ಎಫೆಸದವರಿಗೆ 2:19–22
   ಅ) ದೇವರ ಸಭೆಯು ಯೇಸುಕ್ರಿಸ್ತನೇ ಮಾಲೆಕಲ್ಲಾಗಿ ಕಟ್ಟಿದೆ.
   ಆ) ಅಪೋಸ್ತಲರೂ ಮತ್ತು ಪ್ರವಾದಿಗಳೂ ಆಸ್ಥಿವಾರ.
   ಇ) ಈ ಪವಿತ್ರ ಗ್ರಂಥದ ಧರ್ಮತತ್ವವೇ ಸಭೆಯ ಜವಾಬ್ದಾರಿ.

5. ಎಫೆಸದವರಿಗೆ 4:11–16
   ಅ) ದೇವರು ತನ್ನ ಸಭೆಯಲ್ಲಿ ಅನೇಕ ಪುರೋಹಿತರನ್ನು ತನ್ನ ಜನರ ಸೇವೆಗೋಸ್ಕರ ನೇಮಿಸಿದ್ದಾರೆ.
   ಆ) ದೇವರ ಇಚ್ಛೆಯು ತನ್ನ ಸಭೆಯು ಅಭಿವೃದ್ಧಿಗೊಳ್ಳುವುದು ಮತ್ತು ನಂಬಿಕೆಯಿಂದ ಐಕ್ಯ ಹೊಂದುವುದು.
   ಇ) "ಎಲ್ಲರೂ ಅವರ ಅವರ ಕೆಲಸ ಕಾರ್ಯಗಳನ್ನು" ಮಾಡಿದರೆ ದೇವ ಸಭೆ ಬೆಳೆಯುತ್ತದೆ.
   ಈ) ದೇವರು ಹೇಗೆ ನಿಮ್ಮನ್ನು ಸಭೆ ಕಟ್ಟಲು ಉಪಯೋಗಿಸುತ್ತಾರೆ?

6. ಇಬ್ರಿಯರಿಗೆ 13:17
   ಅ) ಸಭೆಯು ನಾಯಕರನ್ನು ಆರಿಸಿದ್ದಾರೆ, ಅವರಿಗೆ ಅಧೀನರಾಗಿ ಇರುವುದು ನಮ್ಮ ಜವಾಬ್ದಾರಿ.

7. ಇಬ್ರಿಯರಿಗೆ 3:12–13
   ಅ) ನಾವು ನೋಡಿಕೊಳ್ಳಬೇಕು ನಮ್ಮ ಸಹೋದರರು ಅಧ್ಯಾತ್ಮಿಕವಾಗಿ ಇರಲು ಸಹಾಯ ದೊರೆಯುತ್ತಿದೆ.
   ಆ) ಅದಕ್ಕಾಗಿ ನಾವು ಒಬ್ಬರನ್ನೊಬ್ಬರು ಅನುದಿನ ಪ್ರೋತ್ಸಾಹಿಸಬೇಕು.

8. ಇಬ್ರಿಯರಿಗೆ 10:24–25
   ಅ) ನಾವು ಯೋಚಿಸಬೇಕು ಹೇಗೆ ಕ್ರೈಸ್ತರಲ್ಲಿ ಇರುವ ಒಬ್ಬರನ್ನೊಬ್ಬರನ್ನು ಆತ್ಮೀಕವಾಗಿ ಜೀವಿಸುವುದಕ್ಕೆ ಎಚ್ಚರಿಸುವುದು [ಮುಳು ಹಿಮ್ಮಡಿ – ಇದರ ಅರ್ಥ ಉತ್ತೇಜನ, ಪ್ರಚೋದನೆ, ಎಬ್ಬಿಸು]
   ಆ) ನಾವು ಸಭೆಯಾಗಿ ಕೂಡಿಕೊಳ್ಳುವ ಅಭ್ಯಾಸವನ್ನು ದೃಢನಿಷ್ಠೆ ಮಾಡಿರಬೇಕು)ಅಪೋಸ್ತಲರ 2:42)
   ಇ) ನಾವು ಒಬ್ಬರನ್ನೊಬ್ಬರನ್ನು ಪ್ರೋತ್ಸಾಹಿಸಬೇಕು.

Scanned by CamScanner

9. ಅಪೋಸ್ತಲರ 2:42

ಅ) ಮುಂಚಿತವಾಗಿರುವ ಸಭೆ ಅಪೋಸ್ತಲರ ಬೋಧನೋ, ಅನ್ಯೋನ್ಯತೆಯಲ್ಲಿಯಾ, ರೊಟ್ಟಿಮುರಿಯುವುದಲ್ಲಿಯೂ ಪ್ರಾರ್ಥನೆಗಳಲಿಯೂ ನಿರತರಾಗಿದ್ದರು [ನಿರಂತರವಾದ ದೃಢತೆ]

ನಾವು ಅವರ ಭಕ್ತಿಯನ್ನು ಅವಶ್ಯವಾಗಿ ಅನುಸರಿಸಬೇಕು

10. ಕೊಲೊಸ್ಸವರಿಗೆ 3:12–17

ಅ) ದೇವರ ಸಭೆಯಲ್ಲಿ ನಮ್ಮ ಸಂಬಂಧಗಳು ಕೆಲವು ಗುಣ ಮಟ್ಟದ ಸ್ವಾಭಾವಗಳು ಇರಬೇಕು: ಕನಿಕರ, ದಯೆ, ವಿನಯತೆ, ಸೌಮ್ಯತೆ ಮತ್ತು ಸಹನೆ.

ಆ) ಒಬ್ಬರಿಗೊಬ್ಬರು ಸೇರಿಸಿಕೊಂಡು ಸಷ್ಟುರತೆಯಿಂದ ಕ್ಷಮಿಸಿರಿ.

ಇ) ಕೃತಜ್ಞತೆಯುಳ್ಳವರಾಗಿರುವುದು.

ಈ) ಸಕಲ ಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶ ಮಾಡಿರಿ.

11. ಮತ್ತಾಯನು 18:16–17

ಅ) ಯೇಸು ನಮಗೆ ಸಭೆಯಲ್ಲಿ ಹೇಗೆ ಘರ್ಷಣೆಯನ್ನು ವಿಶ್ಲೇಷಿಸುವುದು ಎಂದು ಕಲಿಸುತ್ತಾರೆ.

ಅಂತ್ಯ : ದೇವರ ಸಭೆಯಲ್ಲಿ ನಾವು ಯಾವ ರೀತಿಯಲ್ಲಿ ಈ ಸಭೆಯಲ್ಲಿ ನಾವು ಅಂಗವಾಗಿ ಇರಬೇಕೆಂದೂ ಯಾವ ರೀತಿಯಲ್ಲಿ ಅರ್ಥವಾಯಿತು? ಯಾವ ರೀತಿಯಲ್ಲಿ ನಾವು ದೇವರ ಸಭೆಯಲ್ಲಿ ಒಂದು ಅಂಗವಾಗಿ ಜವಾಬ್ದಾರಿಯನ್ನು ಪರಪೂರ್ಣವಾಗಿ ಮಾಡುವುದು? ಇಲ್ಲಿ ನೋಡುತ್ತೇವೆ ಎಷ್ಟು ಮುಖ್ಯವಾದದ್ದು ಎಲ್ಲ ಸಭೆಕೂಟದಲ್ಲಿ ಭಾಗವಹಿಸುವುದು?

Scanned by CamScanner

12. ಪವಿತ್ರಾತ್ಮರು (THE HOLY SPIRIT)

ಉಪಯೋಗಿಸುವ ವಚನಗಳು:

1. ಅಪೊ. ಕೃತ್ಯಗಳು 2:36–38
2. ಯೋಹಾನ 16:7–8
3. ಎಫೆಸದವರಿಗೆ 1:13–14
4. ಎಫೆಸದವರಿಗೆ 3:16
5. ರೋಮಾಪುರದವರಿಗೆ 8:9
6. ರೋಮಾಪುರದವರಿಗೆ 8:15–16
7. ರೋಮಾಪುರದವರಿಗೆ 8:26–27
8. 1 ಕೊರಿಂಥದವರಿಗೆ 6:19–20
9. 2 ಕೊರಿಂಥದವರಿಗೆ 3:17–18
10. ಗಲಾತ್ಯದವರಿಗೆ 5:16–18, 22–23

ಗುರಿ : ದೇವರನ್ನು ಹುಡುಕುವವರಾದರೆ ಖಂಡಿತ ಅವನು/ಅವಳು ಪವಿತ್ರಾತ್ಮರನ್ನು ದೀಕ್ಷಾಸ್ನಾನದಲ್ಲಿ ಪಡೆದುಕೊಳ್ಳುವರೆಂದು ಹೇಳಿ ಪ್ರೋತ್ಸಾಹಿಸಿ ದೀಕ್ಷಾಸ್ನಾನದ ನಂತರ ಪವಿತ್ರಾತ್ಮರ ಸಹಾಯದಿಂದ ಆತ್ಮಿಕವಾಗಿ ನಾವು ದೃಢಗೊಳ್ಳುತ್ತೇವೆ. ದೀಕ್ಷಾಸ್ನಾನ ತೆಗೆದುಕೊಂಡ ಪ್ರತಿಯೊಬ್ಬ ಶಿಷ್ಯರ ಜೀವನದಲ್ಲಿ ಪವಿತ್ರಾತ್ಮರು ತುಂಬಾ ಪ್ರಭಾವದಿಂದ ಕೆಲಸಮಾಡುತ್ತಾರೆ. ನೀವು ಈ ಪಾಠದೊಡನೆ ಸಭೆಯ ಪಾಠವನ್ನು ಸೇರಿಸಿ ಒಟ್ಟಾಗಿ ಮಾಡುವುದರಿಂದ ಕಡೆಯುವರೆಗೂ ನಮ್ಮ ಮಾನಸಾಂತರವನ್ನು ಭದ್ರವಾಗಿ ಹಿಡಿದುಕೊಂಡಿರಲು ಈ ಎರಡು ಪಾಠಗಳು ಸಹಾಯ ಮಾಡುತ್ತವೆ.

1. ಅಪೊ.ಕೃತ್ಯಗಳು 2:36–38

ನಾವು ದೀಕ್ಷಾಸ್ನಾನದ ಸಮಯದಲ್ಲಿ ಪವಿತ್ರಾತ್ಮರನ್ನು ಪಡೆದುಕೊಳ್ಳುತ್ತೇವೆ. ಪವಿತ್ರಾತ್ಮರು ನಮಗೆ ಒಂದು ವರಪ್ರಸಾದವಾಗಿದ್ದಾರೆ.

2. ಯೋಹಾನ 16:7–8

ನಮಗೊಬ್ಬ ಸಹಾಯಕನನ್ನು ಕಳಿಸಿಕೊಡುವುದಾಗಿ ಯೇಸು ವಾಗ್ದಾನ ಮಾಡಿದರು (ಯೋಹಾನ 14:26) (ಗ್ರೀಕ್ ಭಾಷೆಯಲ್ಲಿ ಪವಿತ್ರಾತ್ಮರಿಗಿರುವ "ಪಾರಾಕ್ಲೀಟೋಸ್" ಪದವನ್ನು ಭಾಷಾಂತರಿಸಿದರೆ ಸಹಾಯಕ, ಸಲಹೆಗಾರ, ಸಮಾಧಾನ ಮಾಡುವವ, ನ್ಯಾಯವಾದಿ, ಮಧ್ಯಸ್ಥಗಾರ, ಮತ್ತು ಪ್ರೋತ್ಸಾಹಿಸುವವನು ಎಂಬರ್ಥಗಳು ಸಿಗುತ್ತವೆ.

3. ಎಫೆಸದವರಿಗೆ 1:13–14

ನಾವು ಕ್ರೈಸ್ತರಾದ ತಕ್ಷಣ ವಾಗ್ದಾನದ ಪವಿತ್ರಾತ್ಮರೆಂಬ ಮುದ್ರೆಯನ್ನು ಹೊಂದುತ್ತೇವೆ. ದೇವರಿಂದ ನಮ್ಮ ವಿಮೋಬಚನೆಯಾಗುವ ತನಕ ಪವಿತ್ರಾತ್ಮರು ನಮ್ಮ ಬಾಧ್ಯತೆಗೆ ಹೊಣೆಯಾಗಿದ್ದಾರೆ.

Scanned by CamScanner

4. ಎಫೆಸದವರಿಗೆ 3:16

ಪವಿತ್ರಾತ್ಮರ ಮೂಲಕ ನಮ್ಮ ಅಂತರ್ಯದಲ್ಲಿ ವಿಶೇಷ ಬಲ ಹೊಂದುತ್ತೇವೆ.

5. ರೋಮಾಪುರದವರಿಗೆ 8:9, 15–16

(ವಚನ 9) ನಮ್ಮಲ್ಲಿ ಪವಿತ್ರಾತ್ಮರಿಲ್ಲದಿದ್ದರೆ ನಾವು ಕ್ರಿಸ್ತರಿಗೆ ಸೇರಿದವರಲ್ಲ.

(ವಚನ 15) ನಾವು ಪುತ್ರರೆಂಬ ಆತ್ಮವನ್ನು ಹೊಂದುತ್ತೇವೆ. ನಾವು ದೇವರ ಮಕ್ಕಳಾಗಿದ್ದೇವೆಂಬುದಕ್ಕೆ ಪವಿತ್ರಾತ್ಮರು ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾರೆ.

6. ರೋಮಾಪುರದವರಿಗೆ 8:26–27

ಪವಿತ್ರಾತ್ಮರು ನಮ್ಮ ಬಲಹೀನತೆಯಲ್ಲಿ ನಮಗೆ ಸಹಾಯಮಾಡುತ್ತಾರೆ. (ಸಹಾಯಕ) ಹೇಗೆ ಪ್ರಾರ್ಥಿಸಬೇಕೆಂದು ನಮಗೆ ಗೊತ್ತಿಲ್ಲದರಿಂದ, ಪವಿತ್ರಾತ್ಮರೇ ನಮಗೋಸ್ಕರ ಪ್ರಾರ್ಥಿಸುವವರಾಗಿದ್ದಾರೆ. (ಮಾಧ್ಯಸ್ಥಗಾರ)

7. 1 ಕೊರಿಂಥದವರಿಗೆ 6:19–20

ನಮ್ಮ ದೇಹವು ಪವಿತ್ರಾತ್ಮರ ದೇವಾಲಯವಾಗಿದೆ (ಗರ್ಭಗುಡಿಯಾಗಿದೆ) ನಮ್ಮಲ್ಲಿ ಪವಿತ್ರಾತ್ಮರು ನೆಲಸಿದ್ದ ಕಾರಣ ನಮ್ಮ ದೇಹದಿಂದ ದೇವರನ್ನು ಮಹಿಮೆ ಪಡಿಸಬೇಕು.

8. 2 ಕೊರಿಂಥದವರಿಗೆ 3:17–18

ಆತ್ಮಸ್ವರೂಪಿಯಾಗಿರುವ ಕ್ರಿಸ್ತನ ಪ್ರಭಾವ ನಮ್ಮಲ್ಲಿ ಪ್ರತಿಬಿಂಬಿಸುವುದಕ್ಕೆ ಪವಿತ್ರಾತ್ಮರು ನಮಗೆ ಸಹಾಯ ಮಾಡುತ್ತಾರೆ. (ಇದು ಜೀವನದುದ್ದಕ್ಕೂ ನಡೆಯುವ ಪರಿವರ್ತನೆ) ಅದು ಹೇಗೆಂದರೆ ದೇವರಾರ್ತನು ನಮ್ಮೊಳಗೆ ಕೆಲಸ ಮಾಡುತ್ತಿರುವ ಹಾಗೆ, ನಾವು ದಿನದಿಂದ ದಿನಕ್ಕೆ ಅಧಿಕಾಧಿಕ ಆತ್ಮಸ್ವರೂಪರಾಗಿ ಕರ್ತನ ಮಹಿಮೆಯನ್ನು ಪ್ರತಿಬಿಂಬಿಸುತ್ತೇವೆ.

9. ಗಲಾತ್ಯದವರಿಗೆ 5:16–18, 22–23

(ವಚನ 16) ನಾವು ಪವಿತ್ರಾತ್ಮರಲ್ಲಿ ಜೀವಿಸಬೇಕು (ಆತ್ಮರಲ್ಲಿ ನಡೆಯಬೇಕು)

(ವಚಯ 18) ನಾವು ಆತ್ಮನಿಂದ ನಡೆಸಿಕೊಳ್ಳುವವರಾಗಬೇಕು. (ಮಾರ್ಗದರ್ಶಕ) .

(ವಚನ 22–23) ನಾವು ಶರೀರಭಾವದಿಂದನಡೆಸಿಕೊಳ್ಳದೆ ದೇವರಾತ್ಮನಿಂದ ನಡೆಸಿಕೊಳ್ಳುವವರಾದರೆ ಪವಿತ್ರಾತ್ಮರ ಫಲವಾದ ಪ್ರೀತಿ, ಆನಂದ, ಸಮಾಧಾನ, ಸಹನೆ, ದಯೆ, ಸದ್ಗುಣ, ನಂಬಿಕಸ್ತಿಕೆ, ಸಂಯಮ, ಸಾತ್ವಿಕತೆ ಇಂಥವುಗಳನ್ನು ಪಡೆಯುತ್ತೇವೆ ಆತ್ಮನಲ್ಲಿ ನಮ್ಮ ಹೊಸಜೀವನ ಈ ಫಲವನ್ನು ಕೊಡಬೇಕು.

ಮುಕ್ತಾಯ

ದೀಕ್ಷಾಸ್ನಾನದ ಸಮಯದಲ್ಲಿ ನಮಗೆ ದೇವರು ವರವಾಗಿತ್ತ ಪವಿತ್ರಾತ್ಮರಲ್ಲಿ ಭರವಸೆಯಿಟ್ಟು, ಅವರ ಫಲವನ್ನು ನಿರೀಕ್ಷಿಸಬೇಕು.

ಇತರ ಉಪಯುಕ್ತ ವಚನಗಳು :

1. ಮುಕ್ತಾಯ 12:31–ಪವಿತ್ರಾತ್ಮರಿಗೆ ವಿರೋಧವಾದ ದೂಷಣೆಯು ಕ್ಷಮಿಸಲ್ಪಡುವುದಿಲ್ಲ.

Scanned by CamScanner

2. ಅಪೊ.ಕೃತ್ಯಗಳು 1:8 - ಪವಿತ್ರತ್ಮರ ಬಲವನ್ನು ಹೊಂದಿದಾಗ ಅಪೋಸ್ತಲರು ಭೂಲೋಕದ ಕೊನೆಯ ಮೇರೆಗಳವರೆಗೂ ಸಾಕ್ಷಿಗಳಾದರು.
3. ಅಪೊ ಕೃತ್ಯಗಳು 5:3-ಅನನೀಯಾ ಮಾಡಿದಂತೆ ಪವಿತ್ರಾತ್ಮರನ್ನು ವಂಚಿಸಬಹುದು.
4. ಅಪೊ ಕೃತ್ಯಗಳು 7:51-ನಾವು ಪವಿತ್ರಾತ್ಮರನ್ನು ಎದುರಿಸಬಹುದು.
5. 1 ಕೊರಿಂಥದವರಿಗೆ 12:13-ನಾವೆಲ್ಲರೂ ಒಬ್ಬನೇ ಆತ್ಮನಲ್ಲಿ ದೀಕ್ಷಾಸ್ನಾನ ಹೊಂದಿದೆವು.
6. ಎಫೆಸದವರಿಗೆ 4:30-ದೇವರ ಪವಿತ್ರಾತ್ಮರನ್ನು ದುಃಖಪಡಿಸಬಾರದು.
7. ಎಫೆಸದವರಿಗೆ 4:18-ಪವಿತ್ರಾತ್ಮನಿಂದ ತುಂಬಿದವರಾಗಿರಿ.
8. ಎಫೆಸದವರಿಗೆ 6:17-18 ದೇವರ ವಾಕ್ಯವು ಪವಿತ್ರಾತ್ಮರ ಖಡ್ಗವಾಗಿದೆ.
9. 1 ಥೆಸ್ಸೋನಿಕ 5:19-ಪವಿತ್ರಾತ್ಮ ಜ್ಯೋತಿಯನ್ನು ನಂದಿಸಬೇಡಿರಿ.
10. 2 ಥೆಸಲೋನಿಕ 2:13-ನಾವು ಪವಿತ್ರಾತ್ಮರಿಂದ ಶುದ್ಧೀಕರಿಸಲ್ಪಟ್ಟವರಾಗಿ,ರಕ್ಷಣೆಯನ್ನು ಹೊಂದಲು ದೇವರು ನಮ್ಮನ್ನು ಆದಿಯಿಂದ ಆರಿಸಿಕೊಂಡಿದ್ದಾರೆ.
11. ಹಿಬ್ರಿಯರಿಗೆ 10:29-ನಾವು ಪವಿತ್ರಾತ್ಮರನ್ನು ತಿರಸ್ಕಾರ (ಅಪಮಾನ) ಮಾಡಬಹುದು.
12. 2 ಪ್ರೇತ 1:20-21 - ಯಾವ ಪ್ರವಾದನೆಯೂ ಮನುಷ್ಯರ ಚಿತ್ತದಿಂದಲ್ಲಿ. ಆದರೆ ಪವಿತ್ರಾತ್ಮರಿಂ ಪ್ರೇರಿತರಾದ ದೇವಜನರು, ದೇವರಿಂದ ಹೊಂದಿದ್ದನ್ನು ಮಾತನಾಡಿದರು.

Scanned by CamScanner

13. ಮಹಾ ಆದೇಶವು (THE GREAT COMMISSION)

ಉಪಯೋಗಿಸುವ ವಚನಗಳು

1. ಮತ್ತಾಯ 5:14–16
2. ಲೂಕ 19:10
3. 1 ತಿಮೋಥೆ 1:15–16
4. 1 ತಿಮೋಥೆ 2:3–4
5. 2 ಪೇತ್ರ 3:8–9
6. ಮಾರ್ಕ 1:14–18
7. ಮತ್ತಾಯ 28:18–20
8. ರೋಮಾಪುರದವರಿಗೆ 10:12–15
9. ಅಪೊ. ಕೃತ್ಯಗಳು 8:4
10. ಅಪೊ. ಕೃತ್ಯಗಳು 11:19–21

ಗುರಿ : ಯೇಸುವಿನ ಜೀವನದ ಮುಖ್ಯ ಧ್ಯೇಯವಾದ "ತಪ್ಪಿಹೋದವರನ್ನು ಹುಡುಕಿ ರಕ್ಷಿಸುವುದನ್ನು" ಹೇಗೆ ನಮ್ಮ ಜೀವನದ ಧ್ಯೇಯವನ್ನಾಗಿ ಮಾಡುವುದು ಎಂದು ಹೊಸ ಕ್ರೈಸ್ತರಿಗೆ ಕಲಿಸುವುದು ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ ಎಂದು ಯೇಸುವಿತ್ತ ಕರೆಯನ್ನು ಪಾಲಿಸುವುದು.

1. ಮತ್ತಾಯ 5:14–16

"ನೀವು ಲೋಕಕ್ಕೆ ಬೆಳಕಾಗಿರಬೇಕು" ಎಂದು ಯೇಸು ತಮ್ಮ ಶಿಷ್ಯರಿಗೆ ಕಲಿಸಿದರು. ಆ ಬೆಳಕನ್ನು ನಂದಿಸಬಾರದು ಅಥವಾ ಬಚ್ಚಿಡಬಾರದು, ಆದರೆ ನಿಮ್ಮ ಬೆಳಕು ಜನರು ಮುಂದೆ ಪ್ರಕಾಸಿಬೇಕು ಎಂದು ಅವರಕರೆಯಿತ್ತರು. ನಮ್ಮ ಪರಿವರ್ತಿತ ಜೀವನದಿಂದ ಕ್ರೀಸ್ತೇಸುವನ್ನು ಈ ಲೋಕಕ್ಕೆ ತರುವುದರಿಂದ, ನಾವು ದೇವರನ್ನು ಮಹಿಮೆ ಪಡಿಸುತ್ತೇವೆ. ಗುರಿ : ಕ್ರೀಸ್ತೇಸುವಿನ ಬಗ್ಗೆ ಎಲ್ಲರೊಡನೆ ಹಂಚಿಕೊಳ್ಳುವುದು ಏಕೆ ಮುಖ್ಯವಾಗಿದೆ?

2. ಲೂಕ 19:10

ಯೇಸುಕ್ರಿಸ್ತರು "ತಪ್ಪಿ ಹೋದದ್ದನ್ನು ಹುಡುಕಿ ರಕ್ಷಿಸುವುದಕ್ಕೆ" ಬಂದರು ತಪ್ಪಿಹೋದ (ಜಗತ್ತಿಗೆ) ರಕ್ಷಣೆ ತರುವುದೇ ಯೇಸುವಿನ ಜೀವನದ ಮುಖ್ಯ ಧ್ಯೇಯವಾಗಿತ್ತು.

3. 1 ತಿಮೋಥೆ 1:15–16

ಕ್ರಿಸ್ತಯೇಸು ಪಾಪಿಗಳನ್ನು ರಕ್ಷಸುವುದಕ್ಕೋಸ್ಕರ ಈ ಲೋಕಕ್ಕೆ ಬಂದರು.

ಜ್ಞಾಪಕದಲ್ಲಿಡಿ : ದೇವರು ಯಾರನ್ನಾದರೂ ರಕ್ಷಿಸಬಹುದು ಎಂಬುದಕ್ಕೆ ನೀವು ಜಗತ್ತಿಗೆ ಒಂದು ಉದಾಹರಣೆಯಾಗಿದ್ದೀರಿ. ದೇವರು ನಿಮ್ಮನ್ನು ರಕ್ಷಿಸಬಹುದಾದರೆ, ಅವರು ಯಾರನ್ನಾದರೂ ರಕ್ಷಿಸಬಹುದು.

Scanned by CamScanner

4. **1 ತಿಮೋಥೆ 2:3–4**

"ಎಲ್ಲಾ ಮನುಷ್ಯರೂ ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಬರಬೇಕೆಂದು ದೇವರ ಚಿತ್ತವಾಗಿದೆ."

5. **2 ಪೇತ್ರ 3:8–9**

ಎಲ್ಲರೂ ಪಶ್ಚಾತ್ತಾಪ ಪಡಬೇಕೆಂದು ಕರ್ತನು ಅಪೇಕ್ಷಿಸುತ್ತಾರೆ. ಕರ್ತನ ಸಹನೆ ಮತ್ತು ದೀರ್ಘಶಾಂತಿ ಎಲ್ಲಾಮನುಷ್ಯರಿಗೆ ಪಶ್ಚಾತ್ತಾಪ ಪಡಲು ಸದವಕಾಶ ಕೊಡುತ್ತದೆ.

ಎಲ್ಲಾ ಜನರು ಪಶ್ಚಾತ್ತಾಪ ಪಡಲೆಂದು ಕರ್ತನು ನ್ಯಾಯ ತೀರ್ಪನ್ನು ತಡ ಮಾಡುತ್ತಾನೆ. ಯೋಜನೆ: ನಾವು ಹೇಗೆ ದೇವರ ಯೋಜನೆಯಲ್ಲಿ ಪಾಲುದಾರರಾಗುತ್ತೇವೆ.

6. **ಮಾರ್ಕ 1:14–18**

ದೇವರ ಸುವಾರ್ತೆಯನ್ನು ಸಾರುವ ಮೊದಲ ಹಂತದಲ್ಲಿಯೇ, ಮನುಷ್ಯರ ಬೆಸ್ತರಾಗಿರಬೇಕೆಂದು ಯೇಸು ತನ್ನ ಹಿಂಬಾಲಕರಿಗೆ ಕರೆಯಿತ್ತರು. "ನನ್ನನ್ನು ಹಿಂಬಾಲಿಸಿರಿ, ನಾನು ನಿಮ್ಮನ್ನು ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ಮಾಡುವೆನು" ಎಂಬು ತನ್ನ ಧ್ಯೇಯವನ್ನು ಯೇಸು ತನ್ನ ಶಿಷ್ಯರಿಗೆ ಕೊಟ್ಟನು.

ಅವರ ಪ್ರತ್ಯುತ್ತರ? ತಕ್ಷಣವೇ ಆತನನ್ನು ಹಿಂಬಾಲಿಸಿದರು.

7. **ಮತ್ತಾಯ 28:18–20**

ತಾವೇ ಸ್ವಂತ ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಬೇಕೆಂದು ಯೇಸು ತನ್ನ ಹಿಂಬಾಲಕರಿಗೆ ಆಜ್ಞೆಯಿತ್ತರು.

"ಆಜ್ಞಾಪಿಸಿದ್ದಲ್ಲವನ್ನೂ ಕೈಕೊಳ್ಳಬೇಕು" ಎಂದರೆ ಮಹಾ ಆದೇಶವನ್ನೂ ಎಲ್ಲಾ ಶಿಷ್ಯರು ಕೈಕೊಳ್ಳಬೇಕೆಂದು ಅವರಿಗೆ ಬೋಧಿಸುವುದು.

ಯೇಸುವಿನ ಯೋಜನೆ ಶಿಷ್ಯರು ವೃದ್ಧಿಯಾಗಬೇಕೆಂದು, ಬಹುಸಂಖ್ಯಾತರಾಗಬೇಕೆಂದು ಅದು ನಿನ್ನಿಂದ ಶುರುವಾಗುತ್ತದೆ.

ಆಚರಣೆ : ನೀವು ಹೋಗಲು ತಯಾರಾಗಿದ್ದೀರಾ?

8. **ರೋಮಾಪುರದವರಿಗೆ 10:12–15**

"ಕರ್ತನ ನಾಮವನ್ನು ಹೇಳಿಕೊಳ್ಳವವರಿಗೆ ರಕ್ಷಣೆ ಅಗುವುದೆಂದು" ಈ ವಚನ ಹೇಳುತ್ತದೆ.

ಆದರೆ ನಂಬಕಿಕೆಯಿಲ್ಲದೆ ಜನರು ರಕ್ಷಣೆ ಹೊಂದುವುದು ಹೇಗೆ?
ಕೇಳದೆ ಇರುವಾತನಲ್ಲಿ ಅವರು ನಂಬಿಕೆಯಿಡುವುದು ಹೇಗೆ?
ಸಾರುವವರು ಕಳುಹಿಸಲ್ಪಡದೆ ಹೊರತು ಸಾರುವುದಾದರೂ ಹೇಗೆ?

Scanned by CamScanner

ನೀವು ಸುವಾರ್ತೆಯನ್ನು ಸಾರುವುದಕ್ಕೆ ಕಳುಹಿಸಲ್ಪಟ್ಟರೆ ಹೋಗಲು ಸಿದ್ಧರಾಗಿದ್ದೀರೋ/ ಶುಭ ಸುವರ್ತೆಯನ್ನು ಸಾರುವವರ ಪಾದಗಳು ಎಷ್ಟೊಂದು ಅಂದವಾಗಿದೆ" ಎಂಬ ಪಾದಗಳು ನಿಮ್ಮದಾಗಿಸು ನಿಮಗೆ ಇಚ್ಛೆಯಿದೆಯೇ?

9. ಅಪೋಕೃತ್ಯಗಳು 8:4

ಹಿಂಸೆಗೊಳಗಾಗಿ ಚೆದರಿಹೋದ ಕ್ರೈಸ್ತರು ಹೋದಲ್ಲೆಲ್ಲಾ ಸುವಾರ್ತೆಯನ್ನು ಸಾರುತ್ತಿದ್ದರು. ಅವರಿದನ್ನೆಲ್ಲಾ ಸ್ವಂತ ಇಷ್ಟದಿಂದ ಮಾಡಿದರು. ಅವರೆಲ್ಲಾ ಸಭೆಯಲ್ಲಿ ಯಾವ ಮುಖಂಡರೂ ಆಗಿರಲಿಲ್ಲ, ಆದರೆ ಬಹುಶಃ ಸರ್ವ ಸಾಧಾರಣ ಕ್ರೈಸ್ತರಾಗಿದ್ದರು? ನೀವೇನು ಮಾಡಲು ಇಚ್ಛಿಸುತ್ತೀರಿ?

10 ಅಪೊ.ಕೃತ್ಯಗಳು 11:19–21

ಹಿಂಸೆಗೊಳಗಾಗಿ ಚೆದರಿಹೋದ ಕ್ರೈಸ್ತರು, ಯೇಸುವಿನ ಸುವಾರ್ತೆಯನ್ನು ಜನರಿಗೆ ಭೋದಿಸಲು ತುಂಬಾ ದೂರದ ಪ್ರಾಂತ್ಯಗಳವರೆಗೂ ಸಂಚರಿಸಿದರು. ಕರ್ತನ ಹಸ್ತವು ವರೊಂದಿಗಿದ್ದ ಕಾರಣ ಬಹು ಜನರು ಕರ್ತನಲ್ಲಿ ನಂಬಿಕೆಯಿಟ್ಟು ಆತನ ಕಡೆಗೆ ತಿರುಗಿ ಕೊಂಡರು. ಆ ಸಂದರ್ಭದಲ್ಲಿ ನೀವೇನು ಮಾಡುತ್ತಿದ್ದಿರಿ? ಯೇಸುವಿನ ಸುವಾರ್ತೆಯನ್ನು ಜನರಿಗೆ ಸಾರಲು ಒಂದು ಯೋಜನೆಯನ್ನು ಹಾಕಿಕೊಳ್ಳಿ

ಮುಕ್ತಾಯ :

ಒಬ್ಬ ಕ್ರೈಸ್ತರಾಗಿ ಯೇಸುವಿನ ಮಹಾ ಆದೇಶವನ್ನು ಯಾವಾಗಲೂ ನಮ್ಮ ಹೃದಯದಲ್ಲಿ ಇಟ್ಟುಕೊಂಡಿರಬೇಕು. ಯಾರೋ ಒಬ್ಬರು ನಿಮಗೆ ಸಹಾಯಹಸ್ತ ನೀಡಿದ್ದರಿಂದ, ನೀವು ಕ್ರೈಸ್ತರಾಗುತ್ತಿದ್ದೀರಿ. ಕೃತಜ್ಞತೆಯುಳ್ಳವರಾಗಿ ನೀವೂ ಹಾಗೆಯೇ ಮಾಡಬೇಕು. ಎಷ್ಟು ಜನರೊಂದಿಗೆ ಸಾಧ್ಯವೋ ಅಷ್ಟು ಜನರೊಂದಿಗೆ ನಮ್ಮ ನಂಬಿಕೆಯನ್ನು ನಾವು ಹಂಚಿಕೊಳ್ಳಬೇಕು ನಮ್ಮ ಸ್ನೇಹಿತರೊಂದಿಗೆ, ಸಂಬಂಧಿಕರೊಮದಿಗೆ, ಸಹೋದ್ಯೋಗಿಗಳೊಂದಿಗೆ. ಸಹಪಾಠಿಗಳೊಂದಿಗೆ ಹೀಗೆ ನಮಗ್ಯಾರು ಸಿಗುತ್ತಾರೊ ಅವರೊಂದಿಗೆ ನಾವು ಹಂಚಿಕೊಳ್ಳಬೇಕು. ಸುವಾರ್ತೆಯನ್ನು ಸಾರುವುದು ನಮ್ಮ ರಕ್ಷಣೆಯ ಫಲವಾಗಿದೆ. ನೀವು ರಕ್ಷಣೆ ಹೊಂದಿದಾಗ. ಬೇರೆಲ್ಲಾ ಜನರು ನಿಮ್ಮಂತೆ ರಕ್ಷಣೆ ಹೊಂದಬೇಕೆಂದು ನಿಮಗೆನಿಸುತ್ತದೆ. ಕ್ರೈಸ್ತರಾಗಲು ಇಚ್ಛಿಸುವವರನ್ನು, ತನ್ನ ಕುಟುಂಬದೊಂದಿಗೆ, ಸ್ನೇಹಿತರೊಡನೆ ಮತ್ತು ಅಪರಿತರೊಡನೆಯೂ ತನ್ನ ನಂಬಿಕೆಯನ್ನು ಹೇಗೆ ಹಂಚಿಕೊಳ್ಳಬೇಕೆಂದು ಕಲಿಸಿ, ಸಹಾಯಮಾಡಿ ಮತ್ತು ತರಭೇತಿಗೊಳಿಸಿ. ಅವರೊಂದಿಗೆ ನೀವೂ ಹೋಗಿ ಮನುಷ್ಯರ ಬೆಸ್ತರಾಗಲು ಅವರಿಗೆ ಸಹಾಯ ಮಾಡಿ.

ಇತರ ಉಪಯುಕ್ತ ವಚನ :
ಮತ್ತಯ 23:37–38

Scanned by CamScanner